


"ನಿರ್ದೋಷಿಯಾದ ಮನುಷ್ಯನು ಇತರರ ಮತ್ತು ಆತನ ವೈರಿಗಳ ಒಳಿತಿಗಾಗಿಯೂ ಸಹ ತನ್ನನ್ನೇ ತಾನು ಯಜ್ಞವಾಗಿ ಸಮರ್ಪಿಸಿಕೊಂಡು ಲೋಕದ ವಿಮೋಚಕನಾಗಿ ಕಂಡುಬಂದನು ಇದೊಂದು ಪರಿಪೂರ್ಣವಾದ ಕಾರ್ಯವಾಗಿತ್ತು. ಪ್ರತಿಯೊಬ್ಬರ ಹೃದಯದಲ್ಲಿ ಕ್ರಿಸ್ತನು ಹುಟ್ಟಿ ಬರಬೇಕು. ಆತನು ಪರ್ವತದ ಮೇಲೆ ಮಾಡಿದ ಪ್ರಸಂಗ ನೇರವಾಗಿ ನನ್ನ ಹೃದಯವನ್ನೇ ಮುಟ್ಟಿತು. ಆತನದು ಪರಮ ಶ್ರೇಷ್ಠ ಅಹಿಂಸೆ."

– ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರು

ಆಧಾರ ಪುಸ್ತಕಗಳು: 1) ಪ್ಯಾಸ್ಕಲ್ ಅಲನ್ ನಜರೇತ್‌ರವರ– ಗಾಂಧಿ, ಕ್ರಿಸ್ತ ಮತ್ತು ಕ್ರೈಸ್ತ ಧರ್ಮ, ಪುಟ ಸಂಖ್ಯೆ : 1
2) ಮಹಾತ್ಮ ಗಾಂಧೀಜಿಯವರ– ನನ್ನ ಸತ್ಯಾನ್ವೇಷಣೆ, ಪುಟ ಸಂಖ್ಯೆ : 88

---



"ನಾವು ಮಾನವ ರೂಪವನ್ನು ಧರಿಸಿರುವ ಯೇಸುವನ್ನೇ ದೇವರೆಂದು ಪೂಜಿಸಬೇಕು. ನೀವು ಯೇಸುವನ್ನು ಬಿಟ್ಟು ದೇವರನ್ನು ಕಲ್ಪಿಸಿಕೊಳ್ಳುವುದಕ್ಕೆ ಮಾಡುವ ಪ್ರಯತ್ನವೆಲ್ಲ ನಿಷ್ಫಲವಾಗುವುದು. ನಾನು ಪ್ಯಾಲೆಸ್ತೇನಿನಲ್ಲಿ ಇದ್ದಿದ್ದರೆ ಜೀಸಸ್ಸಿನ ಕಾಲದಲ್ಲಿ ಅವನ ಪಾದಗಳನ್ನು ನಾನು ಕಣ್ಣೀರಿನಿಂದ ತೊಳೆಯುತ್ತಿರಲಿಲ್ಲ ನನ್ನ ಹೃದಯದ ರಕ್ತದಿಂದ ತೊಳೆಯುತ್ತಿದ್ದೆ. ನಿಮಗೆ ಮುಕ್ತಿ ಬೇಕಾದರೆ ಯೇಸುವನ್ನೇ ಆರಾಧಿಸಿ, ನೀವು ಕಲ್ಪಿಸಿಕೊಳ್ಳಬಲ್ಲ ಎಲ್ಲಾ ದೇವರ ಭಾವನೆಗಳಿಗಿಂತ ಮಿಗಿಲಾಗಿರುವನು ಆತ."

– ವಿಶ್ವಮಾನವ ಸ್ವಾಮಿ ವಿವೇಕಾನಂದರು

ಆಧಾರ ಪುಸ್ತಕಗಳು: 1) ಸಹೋದರಿ ನಿವೇದಿತಾರವರ– ನಾ ಕಂಡಂತೆ ನನ್ನ ಗುರುದೇವ, ಪುಟ ಸಂಖ್ಯೆ : 187
2) ಸ್ವಾಮಿ ವಿವೇಕಾನಂದರ– ಕೃತಿಶ್ರೇಣಿ, ಪುಟ ಸಂಖ್ಯೆ : 331

---



"ಯೇಸು ಶಿಲುಬೆಯ ಮೇಲೆ ಇದ್ದಾಗ ತನ್ನನ್ನು ತಾನೇ ಏಕೆ ಕಾಪಾಡಿಕೊಳ್ಳಲಿಲ್ಲವೆಂದರೇ, ಆತನು ಜಗತ್ತನ್ನು ಕಾಪಾಡಲು ಹುಟ್ಟಿದ್ದನೇ ಹೊರತು, ತನ್ನನ್ನು ತಾನು ರಕ್ಷಿಸಿಕೊಳ್ಳಲು ಅಲ್ಲ. ನನ್ನ ತಿಳುವಳಿಕೆಯ ಪ್ರಕಾರ 'ಗುರು' ಎಂಬುದಾಗಿ ಕರೆಯಲ್ಪಡಲು ಯೋಗ್ಯ ವ್ಯಕ್ತಿ ಒಬ್ಬನು ಮಾತ್ರ ಇರುತ್ತಾನೆ. ಅವನು 'ನಜರೇತಿನ ಯೇಸು' ಹೊರತು ಬೇರೆ ಯಾರೂ ಅಲ್ಲ."

– ಮಾಜಿ ರಾಷ್ಟ್ರಪತಿ ಡಾ. ಸರ್ವಪಲ್ಲಿ ರಾಧಾಕೃಷ್ಣನ್‌ರವರು

ಆಧಾರ ಪುಸ್ತಕಗಳು : 1) ಜಿ. ಟಿ. ಅಶ್ವತ್‌ನಾರಾಯಣರವರ– ವಾಸನ್ಸ್ ಜೀವನ ಚರಿತ್ರೆ ಮಾಲೆ, ಪುಟ ಸಂಖ್ಯೆ : 15
2) ವಿಕ್ಕಿ ಹಾರ್ಲೆ ಹೋಲೆಂಡ್‌ರವರ– ತಿಳಿಯದ ದೇವರು, ಅಧ್ಯಾಯ 20, ಪುಟ ಸಂಖ್ಯೆ : 161

---



"ಜಗತ್ತಿನಲ್ಲಿ ಎರಡು ಶಕ್ತಿಗಳಿವೆ– ಕತ್ತಿ ಮತ್ತು ಪ್ರೀತಿ, ಪ್ರೀತಿಯು ಯಾವಾಗಲೂ ಕತ್ತಿಯನ್ನು ಸೋಲಿಸುತ್ತದೆ. ನಾನು, ಅಲೆಗ್ಸಾಂಡರ್, ಸೀಜರ್ ಮತ್ತು ಚಾರ್ಲಮೇನ್ ದೊಡ್ಡ ದೊಡ್ಡ ಸಾಮ್ರಾಜ್ಯಗಳನ್ನು ಕತ್ತಿಯಿಂದ ಸ್ಥಾಪಿಸಿದೆವು. ಆದರೆ ಅವು ಈಗ ಉಳಿದಿಲ್ಲ. ಆದರೆ ಯೇಸು ಒಬ್ಬನು ಮಾತ್ರ ತನ್ನ ಸಾಮ್ರಾಜ್ಯವನ್ನು ಪ್ರೇಮದ ಮೇಲೆ ಕಟ್ಟಿದ ಇಂದಿಗೂ ಲಕ್ಷಾಂತರ ಜನರು ಅವನಿಗಾಗಿ ಸಾಯಲು ಸಿದ್ಧರಿದ್ದಾರೆ."

– ಮಹಾನ್ ಚಕ್ರವರ್ತಿ ನೆಪೋಲಿಯನ್ ಬೋನಪಾರ್ಟೆ

ಆಧಾರ ಪುಸ್ತಕ : ಶ್ರೀ ಸ್ವಾಮಿರಂಗನಾಥಾನಂದರವರ– ಉಪನಿಷತ್ತುಗಳ ಸಂದೇಶ, ಪುಟ ಸಂಖ್ಯೆ : 529

**ಅನುದಿನದ ಆಹಾರ**
24ನೇ 'ಎಫ್' ಅಡ್ಡ ರಸ್ತೆ, ಈಜಿಪುರ,
ವಿವೇಕನಗರ, ಬೆಂಗಳೂರು – 560047
ಮೊ: 88847 88872

# ಸತ್ಯಮೇವ ಜಯತೆ

**TRUTH ALONE TRIUMPHS** (Kannada)



**ಎಸ್. ಗಿರಿ**

# ಸತ್ಯಮೇವ ಜಯತೆ

# SATHYAMEVA JAYATHE

***TRUTH ALONE TRIUMPHS***

( Kannada )

**S. GIRI,** D C Sc & E, S. A .S.

*ಪ್ರತಿಗಳಿಗಾಗಿ ಸಂಪರ್ಕಿಸಿರಿ:*

**SATHYAMEVA JAYATE**
Post Box No. 87, Shivamogga
Karnataka- 577201, India
Email: satyamevjayate.life@gmail.com
Website: satyamevjayate.life
Cell: 9845417088

*ಪ್ರಕಾಶಕರು :*

**ಅನುದಿನದ ಆಹಾರ**
**24ನೇ 'F' ಅಡ್ಡ ರಸ್ತೆ, ಈಜಿಪುರ,**
**ವಿವೇಕನಗರ, ಬೆಂಗಳೂರು–560047**
**ಮೋ : 8884788872**



*Sathyameva Jayathe - Written by S. Giri based on Spiritual Contents collected from Various Religious Books and opinion expressed by our great leaders.*

| | | |
|---|---|---|
| *Book No.* | : | *234* |
| First Impression | : | 2014 |
| Pages | : | 72 |
| Offering | : | Rs. 25/- (For Private Circulation only) |

(This Book is available in other languages also)

**Publisher:**
Anudhinada Ahara
24th 'F' Cross Road, Ejipura,
Vivek Nagar, Bengalore-560047
Mob : 8884788872

Most. Rev. Dr. Francis Serrao SJ
Bishop of Shimoga

Bishop's House,
Malligenahalli, Sagar Road
Shivamogga - 577205, Karnataka
Cell:+91 9448355813
email:bpfrancisserraosj@gmail.com

## ಅಭಿಮಾನದೊಂದಿಗೆ ಆಶೀರ್ವಾದಪೂರ್ವಕ ಎರಡು ಮಾತುಗಳು

ಕ್ರಿಸ್ತನ ಭಕ್ತರಾದ ಸಹೋದರ ಎಸ್. ಗಿರಿಯವರು ಯೇಸು ಕ್ರಿಸ್ತರನ್ನು ತನ್ನ ವಿಮೋಚಕನನ್ನಾಗಿ ಸ್ವೀಕರಿಸಿದ್ದಾರೆ. 'ಸತ್ಯಮೇವ ಜಯತೆ' ಕ್ರಿಸ್ತರನ್ನು ಪರಿಚಯಿಸುವ ಪುಸ್ತಕ. ಈ ಸಣ್ಣ ಪುಸ್ತಕ ಈಗಾಗಲೇ ಭಾರತದ ಸುಮಾರು 15 ಭಾಷೆಗಳಲ್ಲಿ ಭಾಷಾಂತರವಾಗಿದೆ. ಭಾರತದ ಮೂಲೆ ಮೂಲೆಗಳಲ್ಲಿ ಯೇಸು ಕ್ರಿಸ್ತರ ನಿಜವಾದ ಪರಿಚಯವನ್ನು ಮಾಡಿಕೊಡುತ್ತಿದೆ. ಅವರ ಪರಿಶ್ರಮ ಮತ್ತು ಆಸಕ್ತಿ ಪ್ರಶಂಸೆಗೆ ಅರ್ಹವಾಗಿದೆ.

ಈ ಸಣ್ಣ ಪುಸ್ತಕದಲ್ಲಿ 20 ಅಧ್ಯಾಯಗಳಿದ್ದು ಭಾರತದ ನಾಗರಿಕತೆ ಮತ್ತು ಪುರಾತನ ವೇದಗಳಲ್ಲಿ ಮರೆಯಾಗಿದ್ದ ಕ್ರಿಸ್ತರನ್ನು ಮತ್ತು ಆತನ ಬೋಧನೆಗಳನ್ನು ಅವರು ಧೈರ್ಯವಾಗಿ ಪ್ರಕಟಿಸಿದ್ದಾರೆ. ಮರಿಯಳು ಮತ್ತು ಯೇಸು ಕ್ರಿಸ್ತರ ಬಗ್ಗೆ ಪವಿತ್ರ ಕುರ್‌ಆನ್ ನಲ್ಲಿದ್ದ ದಾಖಲೆಗಳನ್ನು ನಾವಿಲ್ಲಿ ನೋಡಬಹುದಾಗಿರುತ್ತದೆ. ಮಹಾತ್ಮ ಗಾಂಧೀಜಿ, ಮದರ್ ತೆರೆಸಾರವರು ಕ್ರಿಸ್ತರಲ್ಲಿದ್ದ ಸತ್ಯ ಮತ್ತು ಮಾದರಿ ಜೀವನದಿಂದ ಪ್ರೇರಣೆ ಪಡೆದು ಶ್ರೇಷ್ಠ ಜೀವನ ಜೀವಿಸಿದ್ದಾರೆ. ಇದೇ ರೀತಿಯಲ್ಲಿ ನಾವೆಲ್ಲರೂ ಕ್ರಿಸ್ತರಿಗೆ ಸಾಕ್ಷಿಯಾಗಬೇಕಿದೆ. ಕ್ರಿಸ್ತರಲ್ಲಿದ್ದ ಸುಗುಣಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿ ಆದರ್ಶವಾಗಿ ಜೀವಿಸಬೇಕೆಂದು ಈ ಲೇಖಕರು ಬಯಸುತ್ತಾರೆ.

ನಾವೆಲ್ಲರೂ ಕತ್ತಲೆಯಿಂದ ಬೆಳಕಿನಡೆಗೆ ಹೆಜ್ಜೆಹಾಕಬೇಕು ಸ್ವರ್ಗ ಮತ್ತು ಪ್ರಪಂಚದ ಶ್ರೇಷ್ಠವಾದ ಬೆಳಕು ಯೇಸು ಕ್ರಿಸ್ತರು. ಆತನ ಬೆಳಕಿನೊಂದಿಗೆ ಹೆಜ್ಜೆಹಾಕುವ ನಾವು ಧನ್ಯರು. ಕತ್ತಲೆಯಲ್ಲಿ ಇರುವವರನ್ನು ನಿಜ ಬೆಳಕಿನಡೆಗೆ ಕರೆದೊಯ್ಯುವುದು ನಮ್ಮ ಕರ್ತವ್ಯ. ಎರಡು ಸಾವಿರ ವರ್ಷಗಳ ಹಿಂದೆ ಯೇಸು ಕ್ರಿಸ್ತರು ಹಲವರಿಗೆ ನಕ್ಷತ್ರದಂತೆ, ಸೂರ್ಯನಂತೆ ಬೆಳಕು ನೀಡಿದರು. ಆತನು ಇಂದೂ ಕೂಡಾ ಹಲವರ ಜೀವನದಲ್ಲಿ ಪ್ರಕಾಶಿಸುತ್ತಿದ್ದಾರೆ ಎಂಬ ಸಂದೇಶ ಈ ಪುಸ್ತಕದಲ್ಲಿದೆ. 'ಪವಿತ್ರ ಆತ್ಮವು ನನ್ನಲ್ಲಿದೆ ಬಡವರಿಗೆ ಶುಭ ಸಂದೇಶ. ಕಷ್ಟದಲ್ಲಿದ್ದವರಿಗೆ ವಿಮೋಚನೆ, ಬಂಧನದಲ್ಲಿ ಇರುವವರಿಗೆ ಬಿಡುಗಡೆ, ರೋಗಿಗಳಿಗೆ ಆರೋಗ್ಯ ಮತ್ತು ಸ್ವರ್ಗ ರಾಜ್ಯವನ್ನು ಪ್ರಕಟಿಸಲು ನನ್ನನ್ನು



ಅಭಿಷೇಕ ಮಾಡಲಾಗಿದೆ' ಎಂದು ಪ್ರಭು ಕ್ರಿಸ್ತರು ಹೇಳಿರುತ್ತಾರೆ. ಸ್ವರ್ಗವು ಸತ್ಯದ, ನ್ಯಾಯನೀತಿಯ ರಾಜ್ಯವಾಗಿದೆ. ಪ್ರತಿಯೊಬ್ಬರಿಗೂ ಸಮಾನ ಗೌರವ ಮಾನ್ಯತೆ ಇರುವ ರಾಜ್ಯವಾಗಿದೆ. ಇಂತಹ ರಾಜ್ಯವನ್ನು ಪ್ರವೇಶಿಸಲು ಯೇಸು ಕ್ರಿಸ್ತರು ನಮಗೆ ಕರೆ ನೀಡುತ್ತಾರೆ. ಈ ಆಹ್ವಾನವು ಈ ಪುಸ್ತಕದಲ್ಲಿ ಸ್ಪಷ್ಟವಾಗಿ ಕಾಣಿಸುತ್ತದೆ.

ಕ್ರಿಸ್ತ ಭಕ್ತ ಸಹೋದರ ಎಸ್. ಗಿರಿ ರವರಂತಹ ವ್ಯಕ್ತಿಗಳನ್ನು ಈ ದಿನಗಳಲ್ಲಿ ನಮಗೆ ನೀಡಿದ ದೇವರಿಗೆ ನಾವು ಸ್ತೋತ್ರ ಸಲ್ಲಿಸುತ್ತೇವೆ. ಅಂತವರಿಂದ ಯೇಸು ಕ್ರಿಸ್ತರ ಪರಿಚಯ ಇನ್ನೂ ಹಲವರಿಗೆ ಲಭಿಸಲು ಪ್ರತಿಯೊಬ್ಬರಿಗೂ ಸ್ವರ್ಗದಿಂದ ಬಂದಿದ್ದ, ಜೀವ ನೀಡುವ ರೊಟ್ಟಿಯೊಂದಿಗೆ ಜೀವಿಸುವ ಭಾಗ್ಯ ಮತ್ತು ಆಶೀರ್ವಾದ ಲಭಿಸಲಿ ಎಂಬುದು ನಮ್ಮ ಪ್ರಾರ್ಥನೆಯಾಗಿದೆ.

ಯೇಸು ಕ್ರಿಸ್ತನಲ್ಲಿ ನಿಮ್ಮವ

ಅತೀ ವಂದನೀಯ ರೆ. ಡಾ. ಪ್ರಾನ್ಸಿಸ್ ಸೆರಾವೋ
ಧರ್ಮಾಧ್ಯಕ್ಷರು, ಶಿವಮೊಗ್ಗ

---

## ಮುನ್ನುಡಿ

ಸತ್ಯದ ಅನ್ವೇಷಣೆಯಲ್ಲಿದ್ದ ಸಹೋದರ ಎಸ್. ಗಿರಿಯವರು ಹಲವಾರು ಧರ್ಮಗ್ರಂಥಗಳನ್ನು, ಪುಸ್ತಕಗಳನ್ನು ಮತ್ತು ಮಹಾನ್ ನಾಯಕರುಗಳ ಹೇಳಿಕೆಗಳನ್ನು ಅಧ್ಯಯನ ಮಾಡಿ ಜನ ಸಾಮಾನ್ಯರಿಗೆ ತಿಳಿಯುವಂತೆ ದೈವಿಕ ಸತ್ಯಗಳನ್ನು 'ಸತ್ಯಮೇವ ಜಯತೆ' ಪುಸ್ತಕದಲ್ಲಿ ತಿಳಿಸಿದ್ದಾರೆ. ಸತ್ಯದ ಹುಡುಕಾಟದಲ್ಲಿರುವ ಪ್ರತಿಯೊಬ್ಬರಿಗೂ ದಾರಿ ತೋರಿಸುವ ಪುಸ್ತಕ ಇದು. ಮನುಷ್ಯನ ಮೂಲತಃ ಪ್ರಶ್ನೆಯಾಗಿರುವ ನಾನು ಯಾರು? ಇಲ್ಲಿಗೆ ಹೇಗೆ ಬಂದೆ? ಮುಂದೆ ಎಲ್ಲಿಗೆ ಪ್ರಯಾಣ? ನನ್ನ ಜೀವನದ ಸಾರ್ಥಕತೆ ಏನು? ಈ ಪ್ರಶ್ನೆಗಳಿಗೆಲ್ಲಾ ಉತ್ತರ ನೀಡುವ ಕೈಪಿಡಿ ಈ ಪುಸ್ತಕ.

ಮರಣವು ಶಾಶ್ವತ ಬದುಕಿನ ಆರಂಭ. ಮರಣಕ್ಕೆ ಮನುಷ್ಯನು ಹೇಗೆ ಸಿದ್ದವಾಗಬಹುದು, ಸದಾಕಾಲವೂ ಗೊಂದಲ, ಚಂಚಲ ಮನಃಸ್ಥಿತಿಯಲ್ಲಿ, ಅಪರಾಧಿ ಮನೋಭಾವದಲ್ಲಿ ಬದುಕುವ ಮನುಷ್ಯ ನಿರಂತರ ಶಾಂತಿಯ ನೆಮ್ಮದಿಯ ಹುಡುಕಾಟದಲ್ಲಿರುತ್ತಾನೆ. ಇಂತಹ ಪ್ರಶ್ನೆಗಳಿಗೆ ಅನೇಕ ಗುರುಗಳು ವಿವಿಧ ಅಭಿಪ್ರಾಯ ನೀಡುತ್ತಾರೆ. ಆದರೆ ಯಾವುದನ್ನು ಒಪ್ಪಿಕೊಳ್ಳಬೇಕು ಎಂಬ ಆಯ್ಕೆ ನಮಗೆ ಬಿಟ್ಟಿದ್ದು.

ಅತ್ಯಮೂಲ್ಯ ಈ ಬದುಕು ಕ್ಷಣದಲ್ಲಿ ಮುಗಿಯುತ್ತದೆ. ಈ ಭೂಮಿಯ ಮೇಲೆ ಆಯ್ದುಕೊಂಡ ನಿರ್ಧಾರ ಶಾಶ್ವತ ಬದುಕಿನ ಮೇಲೆ ಪರಿಣಾಮ ಬೀರುತ್ತದೆ. ಈ ವಿಷಯವನ್ನು ಗಮನದಲ್ಲಿ ಇರಿಸಿ ಅಂತಿಮ ಪ್ರಯಾಣದ ಬಗ್ಗೆ ಸತ್ಯ ಸಂಗತಿಗಳನ್ನು ತಿಳಿಸಲು ಸಹೋದರ ಎಸ್. ಗಿರಿ ಯವರು ಪ್ರಯತ್ನಿಸಿದ್ದಾರೆ. ಈ ಸತ್ಯ ಏನೆಂದರೆ ಸ್ವರ್ಗ ಮತ್ತು ನರಕ, ಸ್ವರ್ಗಕ್ಕೆ ಹೋಗುವ ದಾರಿ. ಮುಕ್ತ ಮನಸಿನಿಂದ ಓದಿದರೆ ಖಂಡಿತವಾಗಿಯೂ ಮುಕ್ತಿಯ ಮಾರ್ಗವನ್ನು ಕಂಡುಕೊಂಡು ಅದರ ಆಶೀರ್ವಾದಗಳನ್ನು ಅನುಭವಿಸಬಹುದಾಗಿದೆ.

ಆರಂಭದಲ್ಲಿ ಕನ್ನಡದಲ್ಲಿ ಪ್ರಕಟಗೊಂಡ ಈ ಪುಸ್ತಕವು ಜನಪ್ರಿಯಗೊಂಡು ಇಂಗ್ಲಿಷ್ ಮತ್ತು ಇನ್ನಿತರ ಭಾಷೆಗಳಲ್ಲಿ ಪ್ರಕಟವಾಗಿದೆ. ಓದುಗರಿಗೆ ಅರ್ಥವನ್ನು ತಿಳಿಗೊಳಿಸಲು ಕೆಲ ಧರ್ಮ ಗ್ರಂಥಗಳ ಭಾವಾನುವಾದ ನೀಡಲಾಗಿದೆ. ಈ ಪುಸ್ತಕವು ನಿಮಗೆ ಆಶೀರ್ವಾದವನ್ನು ದಯಪಾಲಿಸಲಿ ಎಂಬುದು ನಮ್ಮ ಹಾರೈಕೆ.

**– ಪ್ರಭುದಾಸ್ ಟಿ. ಎಸ್,**
ನಿವೃತ್ತ ಮ್ಯಾನೇಜರ್ (ಹೆಚ್.ಆರ್.ಡಿ) ಎಂ.ಪಿ.ಎಂ ಭದ್ರಾವತಿ.

---

## ಲೇಖಕನ ಮಾತು

ಪ್ರತಿಯೊಂದು ವಿಷಯದಲ್ಲಿಯೂ ಪರಿಶೀಲಿಸಿ ತೀರ್ಮಾನ ತೆಗೆದುಕೊಳ್ಳುವ ನಾವು ದೇವರ ವಿಷಯದಲ್ಲಿ ಮಾತ್ರ ಪರಿಶೀಲಿಸಲು ಭಯಪಟ್ಟು ನಮಗಿಷ್ಟ ಬಂದಂತೆ ಆಚರಣೆ ಮಾಡುವುದರಿಂದ ದೇವರನ್ನು ಮೆಚ್ಚಿಸಲು ಸಾಧ್ಯವಿಲ್ಲ. ಆದ್ದರಿಂದ ಸತ್ಯದ ಅನ್ವೇಷಣೆಯಲ್ಲಿದ್ದ ನಾನು ವ್ಯಾಪಕ ಅಧ್ಯಯನ ಮಾಡಿ ಕಂಡುಕೊಂಡ ಸತ್ಯ ಸಂಗತಿಗಳನ್ನು ನನ್ನ ಮಿತ್ರರಿಗೆ ತಿಳಿಸುವುದು ನನ್ನ ಕರ್ತವ್ಯ. ಆದ್ದರಿಂದ ಇದನ್ನು ಪುಸ್ತಕ ರೂಪದಲ್ಲಿ ಹೊರ ತಂದಿರುತ್ತೇನೆ.

ಯಾವುದೇ ಪೂರ್ವಾಗ್ರಹ, ಪಕ್ಷಪಾತ, ವೈಯಕ್ತಿಕ ಹಿತಾಸಕ್ತಿ ಇಲ್ಲದೆ ದೇಶದ ಸಾಂವಿಧಾನಿಕ ನಿಬಂಧನೆಗಳೊಳಗೆ ಈ ಪುಸ್ತಕ ನಿಮಗೆ ತಲುಪಿದೆ. ಕೊನೆಗೆ ಸತ್ಯವೊಂದೇ ಗೆಲ್ಲುತ್ತದೆ. ಆ ಸತ್ಯ ಪ್ರತಿಯೊಬ್ಬರಿಗೂ ತಲುಪಬೇಕು ಎನ್ನುವುದೊಂದೆ ನನ್ನ ಆಶಯ. ಈ ಕಾರಣಕ್ಕಾಗಿ ಈ ಪುಸ್ತಕದ ಹೆಸರು 'ಸತ್ಯಮೇವ ಜಯತೆ'.

ಅನೇಕರ ಅಪೇಕ್ಷೆಯಂತೆ ಈ ಪುಸ್ತಕವನ್ನು ದೇಶದ ಪ್ರಮುಖ 15 ಭಾಷೆಗಳಿಗೆ ತರ್ಜುಮೆ ಮಾಡಲಾಗಿರುತ್ತದೆ. ಇದರ ಸದುಪಯೋಗ ಪಡಿಸಿಕೊಳ್ಳಲು ಕೋರಿದೆ.

**ಎಸ್. ಗಿರಿ**



# ವಿಷಯ ಸಂಗ್ರಹಣೆ

1) ಭಾರತದ ನಾಗರಿಕತೆ ............ 7
2) ಮಾನವನ ಆತ್ಮ ............ 9
3) ಮೋಕ್ಷಕ್ಕೆ ಮಾರ್ಗ ............ 13
4) ಕ್ಷಮಾದಾನ ............ 16
5) ಪುರಾತನ ವೇದಗಳಲ್ಲಿನ ಪ್ರಜಾಪತಿ ಮತ್ತು ಪಶು ಯಜ್ಞದ ಕ್ರಮಗಳು ............ 17
6) ಯೇಸು ಕ್ರಿಸ್ತರ ಪುನರುತ್ಥಾನ ಮತ್ತು ಸ್ವರ್ಗಾರೋಹಣ ............ ..23
7) ಯೇಸು ಕ್ರಿಸ್ತರು ತಿರುಗಿ ಬರುತ್ತಾರೆ ............ ..25
8) ಪಾಪ ವಿಮೋಚನೆಯು ಯಾರಿಂದ? ............ 26
9) ಪವಿತ್ರ ಸತ್ಯವೇದದ ಚರಿತ್ರೆ ............ 27
10) ಭೋಗಪುರುಷನು–ಭಿಕ್ಷಗಾರನು ಇವರ ದೃಷ್ಟಾಂತ ............ .30
11) ಯೇಸು ಕ್ರಿಸ್ತರು ಯಾರು? ಈ ಬಗ್ಗೆ ನಿಮ್ಮ ತೀರ್ಮಾನ? ............ 31
12) ಯೇಸು ಹೇಳಿರುವುದನ್ನು ನಾವು ಏಕೆ ನಂಬಬೇಕು? ............ 32

## ವಿವಿಧ ದಿನ ಪತ್ರಿಕೆಗಳಲ್ಲಿ ಪ್ರಕಟವಾದ ಲೇಖನಗಳು

13) ಯೇಸು ದೇವರು ಪರಿಶುದ್ಧರು ............ 33
14) ಯೇಸು ಕ್ರಿಸ್ತರು ಪರ್ವತದ ಮೇಲೆ ಮಾಡಿದ ಬೋಧನೆಯ ಸಾರಾಂಶ ............ 36
15) ಯೇಸು ಕ್ರಿಸ್ತರು ಮಾಡಿದ 37 ಮುಖ್ಯ ಅದ್ಭುತಗಳು ............ 40
16) ವ್ಯಭಿಚಾರದಲ್ಲಿ ಸಿಕ್ಕಿಬಿದ್ದ ಒಬ್ಬ ಸ್ತ್ರೀಯನ್ನು ಯೇಸು ಕ್ರಿಸ್ತರ ಮುಂದೆ ತೀರ್ಪಿಗಾಗಿ ನಿಲ್ಲಿಸಿದ್ದು ............ 47
17) ಮರಣದ ನಂತರ ಮುಂದೇನು? ಪವಿತ್ರ ಗ್ರಂಥ ಸತ್ಯವೇದದಲ್ಲಿದೆ ಈ ಪ್ರಶ್ನೆಗೆ ಸ್ಪಷ್ಟ ಉತ್ತರ... ............ 51
18) ಯೇಸು ಕ್ರಿಸ್ತರು ಶಿಲುಬೆಯ ಮೇಲೆ ನುಡಿದ ಸಪ್ತ ವಾಕ್ಯಗಳು ...... 55
19) ಯೇಸು ಕ್ರಿಸ್ತರ ಉಪದೇಶಗಳು ಜಗತ್ತಿನಾದ್ಯಂತ ಸಾರಲ್ಪಟ್ಟದ್ದು ..... 56
20) ದೈವಿಕ ಜ್ಞಾನ ............ 68

# 1. ಭಾರತದ ನಾಗರಿಕತೆ

ಹಿಂದೂ ಧರ್ಮ ಜಗತ್ತಿನ ಅತೀ ಪ್ರಾಚೀನ ಧರ್ಮಗಳಲ್ಲಿ ಒಂದು ಹಾಗೂ ಜಗತ್ತಿನ 3 ನೇ ಅತೀ ದೊಡ್ಡ ಧರ್ಮ. ಭಾರತದ ಮೂಲ ನಿವಾಸಿಗಳಾದ ದ್ರಾವಿಡರು ಸಿಂಧೂ ನದಿಯ ತೀರದಲ್ಲಿ ವಾಸ ಮಾಡುತ್ತಿದ್ದುದರಿಂದ ಸಿಂಧೂಗಳೆಂದು ಹೆಸರು ಬಂದ ಬಳಿಕ ಸಿಂಧೂ ಪದಕ್ಕೆ ಬದಲಾಗಿ 'ಹಿಂದೂ' ಎಂಬ ಪದ ಬಳಕೆಗೆ ಬಂತು. ಕ್ರಿಸ್ತ ಪೂರ್ವ 2000 ವರ್ಷಗಳ ಹಿಂದೆ ಮಧ್ಯ ಏಷ್ಯಾ ಮೂಲದ ಆರ್ಯರು ನಮ್ಮ ಭಾರತಕ್ಕೆ ವಲಸೆ ಬಂದರು. ಇವರು ರಾಜ್ಯಗಳನ್ನು ಸ್ಥಾಪಿಸಿ ಸ್ಥಿರತೆಯನ್ನು ಪಡೆದ ನಂತರ ಸೃಷ್ಟಿಕರ್ತನಾದ ದೇವರನ್ನು ಅನ್ವೇಷಿಸಲು ಆರಂಭಿಸಿದರು. ಆಗ ಆರ್ಯ ಋಷಿಗಳಿಗೆ ಕೆಲವು ವಿಷಯಗಳು ಸ್ಪಷ್ಟವಾಗಿ ಅರ್ಥವಾದವು– ಪರಮಾತ್ಮನು ಪರಿಶುದ್ಧನು, ಮಾನವನು ಸಹಜವಾಗಿಯೇ ಅಶುದ್ಧನು. ಆದ್ದರಿಂದ ಮೊದಲು ಮಾನವನ ಪಾಪಕ್ಕೆ ಪ್ರಾಯಶ್ಚಿತ್ತ ಪರಿಹಾರ ಸಿಗದ ಹೊರತು ಮಾನವನು ಪರಮಾತ್ಮನನ್ನು ಸೇರಲಾರ ಎಂಬ ಸತ್ಯ ಅವರಿಗೆ ಅರ್ಥವಾಯಿತು. ಹಾಗಾದರೆ ಪಾಪಗಳು ಪರಿಹಾರವಾಗುವುದು ಹೇಗೆ? ಎಂದು ಆಲೋಚಿಸಿ ಅವರು ಸಂಧ್ಯಾವಂದನೆ ಮಾಡುವ ಸಂದರ್ಭದಲ್ಲಿ ಪಠಿಸುವ ಒಂದು ಶ್ಲೋಕವು ಋಗ್ವೇದದ ದೇವತಾರ್ಚನ ವಿಧಿ ಪುಟ ಸಂಖ್ಯೆ: 62 ರಲ್ಲಿ ಈ ಕೆಳಗಿನಂತಿರುತ್ತದೆ.

**पापोऽहं पापकर्माहं पापात्मा पापसम्भवः ।**
**त्राहि मां कृपया देव शरणागत वत्सल ।**
**अन्यथा शरणं नास्ति त्वमेव शरणं मम ॥**
**तस्मात् कारुण्य भावेन रक्ष रक्ष जनार्दन ॥**
**आ...नमः। प्रदक्षिण नमस्कारान समर्पयामि ॥**

*ಪಾಪೋಽಹಂ ಪಾಪಕರ್ಮಾಹಂ ಪಾಪಾತ್ಮಾ ಪಾಪಸಂಭವಃ ।*
*ತ್ರಾಹಿ ಮಾಂ ಕೃಪಯಾ ದೇವಾ ಶರಣಾಗ ತವತ್ಸಲ ।*
*ಅನ್ಯಥಾ ಶರಣಂ ನಾಸ್ತಿ ತ್ವಮೇವ ಶರಣಂ ಮಮ ॥*
*ತಸ್ಮಾತ್ಕಾರುಣ್ಯ ಭಾವೇನ ರಕ್ಷ ರಕ್ಷ ಜನಾರ್ಧನ ॥*
*ಆ ... ನಮಃ । ಪ್ರದಕ್ಷಿಣ ನಮಸ್ಕಾರಾನ್ ಸಮರ್ಪಯಾಮಿ ॥*



**ಶ್ಲೋಕದ ಅರ್ಥ :** ಪಾಪಿಯಾದ ನಾನು ಪಾಪ ಕರ್ಮಗಳನ್ನು ಮಾಡಿದ್ದೇನೆ. ಪಾಪಾತ್ಮನಾಗಿರುವೆ ಇದರಿಂದ ಪಾಪವು ಸಂಭವಿಸಿದೆ. ಶರಣಾಗತ ವತ್ಸಲನಾಗಿರುವ ದೇವಾ ಕೃಪೆಮಾಡಿ ನನ್ನನ್ನು ರಕ್ಷಿಸು. ನನಗೆ ನಿನ್ನಲ್ಲಿ ಶರಣಾಗದೆ ಬೇರೆ ಗತಿ ಇಲ್ಲ. ಆದ್ದರಿಂದ ನಮಸ್ಕರಿಸುವೆ ಕರುಣಾಭಾವದಿಂದ ರಕ್ಷಿಸು ರಕ್ಷಿಸು ಜನಾರ್ಧನ. ಪ್ರದಕ್ಷಿಣೆ, ನಮಸ್ಕಾರಗಳನ್ನು ಸಮರ್ಪಿಸುತ್ತೇನೆ.

ನೀತಿವಂತನು ಇಲ್ಲ, ಒಬ್ಬನಾದರೂ ಇಲ್ಲ; ಹೆಚ್ಚುಕಡಿಮೆ ಏನೂ ಇಲ್ಲ ಎಲ್ಲರೂ ಪಾಪಮಾಡಿ ದೇವರ ಮಹಿಮೆಯನ್ನು ಹೊಂದದೆ ಹೋಗಿದ್ದಾರೆ. ನಮ್ಮಲ್ಲಿ ಪಾಪವಿಲ್ಲವೆಂದು ನಾವು ಹೇಳಿದರೆ ನಮ್ಮನ್ನು ನಾವೇ ಮೋಸಪಡಿಸಿಕೊಳ್ಳುತ್ತೇವೆ. ಪಾಪಗಳಿಂದ ಬಿಡುಗಡೆ ಹೊಂದಲು ಮನುಷ್ಯನ ಒಳ್ಳೆ ಕಾರ್ಯಗಳಿಂದಾಗಲಿ, ಪುಣ್ಯ ಕ್ರಿಯೆಗಳಿಂದಾಗಲಿ, ದಾನ ಧರ್ಮ ಗಳಿಂದಾಗಲಿ, ಪೂಜೆ ಪುನಸ್ಕಾರಗಳಿಂದಾಗಲಿ ಸಾಧ್ಯವೇ ಇಲ್ಲ. ಯಾಕೆಂದರೆ ಯಾವನಾದರೂ ನೇಮ ನಿಷ್ಟೆಗಳನ್ನನುಸರಿಸಿ ದೇವರ ಸನ್ನಿಧಿಯಲ್ಲಿ ನೀತಿವಂತನೆಂದು ನಿರ್ಣಯಿಸಲ್ಪಡುವುದಿಲ್ಲ, ಬಹುಕಾಲದಿಂದ ಪಾಪದಲ್ಲಿ ಮುಳುಗಿರುವ ನಮಗೆ ಮೋಕ್ಷ ಪ್ರಾಪ್ತಿಯಾದೀತೇ? ನಾವೆಲ್ಲರೂ ಅಶುದ್ಧರಾಗಿದ್ದೇವೆ, ನಮ್ಮ ಧರ್ಮ ಕಾರ್ಯಗಳೆಲ್ಲಾ ದೇವರ ಮುಂದೆ ಕೊಳಕು ಬಟ್ಟೆಯಂತಿವೆ ಎಂದು ಪವಿತ್ರ ಸತ್ಯವೇದ ಹೇಳುತ್ತದೆ.

**ಈ ಬಗ್ಗೆ ಶ್ರೀ ಪುರಂದರದಾಸರು ಈ ಕೆಳಗಿನಂತೆ ಹೇಳಿರುತ್ತಾರೆ:**

*॥ಬೇವು ಬೆಲ್ಲದೊಳಿಡಲೇನು ಫಲ ಹಾವಿಗೆ ಹಾಲೆರದರೇನು ಫಲ॥*
*॥ಕುಟಿಲವ ಬಿಡದಿಹ ಮನುಜರು ಮಂತ್ರವ ಪಠನೆಯ ಮಾಡಿದರೇನು ಫಲ॥*
*॥ಕಪಟತನದಲಿ ಕಾಡುತ ಜನರನು ಜಪವನು ಮಾಡಿದರೇನು ಫಲ॥*
*॥ಕುಪಿತತನವನು ಬಿಡದೆ ನಿರಂತರ ಉಪವಾಸವ ಮಾಡಿದರೇನು ಫಲ॥*
*॥ಮಾತಾಪಿತರನು ಬಳಲಿಸಿದಾತನು ಯಾತ್ರೆಯ ಮಾಡಿದರೇನು ಫಲ॥*
*॥ಘಾತಕತನವನು ಬಿಡದೆ ನಿರಂತರ ಗೀತೆಯನೊದಿದರೇನು ಫಲ॥*
*॥ಪತಿಗಳ ನಿಂದಿಪ ಸತಿಯರು ಬಹುವಿಧ ವ್ರತಗಳ ಮಾಡಿದರೇನು ಫಲ॥*
*॥ಅತಿಥಿಗಳೆಡೆಯಲಿ ಭೇದವ ಮಾಡುತ ಗತಿಯನು ಬಯಸಿದರೇನು ಫಲ॥*
*॥ಹೀನ ಗುಣಂಗಳು ಹಿಂಗದೆ ಗಂಗೆಯ ಸ್ನಾನವ ಮಾಡಿದರೇನು ಫಲ॥*

# 2. ಮಾನವನ ಆತ್ಮ

ದೇವರು ಸಕಲ ಪ್ರಾಣಿ ಪಕ್ಷಿಗಳನ್ನು ಕೇವಲ ಬಾಯಿ ಮಾತಿನಿಂದ 'ಉಂಟಾಗಲಿ' ಎಂದು ಹೇಳುವುದರ ಮೂಲಕ ಪ್ರಾಣ ಮತ್ತು ಶರೀರವಾಗಿ ಸೃಷ್ಟಿಮಾಡಿರುತ್ತಾನೆ. ಅವುಗಳು ಸತ್ತ ನಂತರ ಮುಂದೇನೂ ಇರುವುದಿಲ್ಲ. ಆದರೆ ಮಾನವರನ್ನು ಸೃಷ್ಟಿಮಾಡುವಾಗ ತನ್ನ ಸ್ವರೂಪದಲ್ಲಿ ತನ್ನ ಹೋಲಿಕೆಗೆ ಸರಿಯಾಗಿ ಉಂಟು ಮಾಡೋಣವೆಂದುಕೊಂಡು ನೆಲದ ಮಣ್ಣಿನಿಂದ ಮನುಷ್ಯನನ್ನು ರೂಪಿಸಿ ಅವನ ಮೂಗಿನಲ್ಲಿ ಜೀವಶ್ವಾಸವನ್ನು ಊದಿದನು; ಆಗ ಮನುಷ್ಯನು ಬದುಕುವ ಜೀವಾತ್ಮನಾದನು. ಈ ರೀತಿಯಾಗಿ ದೇವರು ಮಾನವನನ್ನು ಶರೀರ, ಆತ್ಮ ಮತ್ತು ಪ್ರಾಣವಾಗಿ ನಿರ್ಮಿಸಿರುತ್ತಾನೆ. ಮಾನವನು ಶರೀರದಲ್ಲಿ ವಾಸಮಾಡುತ್ತಾನೆ ಅವನಿಗೆ ಆತ್ಮ ಮತ್ತು ಜೀವವಿರುತ್ತದೆ.

ಈ ಲೋಕದಲ್ಲಿ ಮಾನವನ ಜೀವನ ತಾತ್ಕಾಲಿಕವಾದದ್ದು, ಒಂದಲ್ಲಾ ಒಂದು ದಿವಸ ನಾವು ಈ ಲೋಕವನ್ನು ತ್ಯಜಿಸಲೇಬೇಕು. ಈ ಲೋಕದಲ್ಲಿ ಹುಟ್ಟಿದ ಪ್ರತಿ ಮನುಷ್ಯನಿಗೂ ಸಹ ಅವನು ಎಷ್ಟೇ ದೊಡ್ಡ ಪರಾಕ್ರಮಶಾಲಿ, ಸಿರಿವಂತ, ಬುದ್ಧಿವಂತ ಮತ್ತು ಒಳ್ಳೆಯವನೂ ಸಹ ಆಗಿರಬಹುದು, ಆದರೆ ಮರಣ ಎಂದಾಕ್ಷಣ ಒಂದು ರೀತಿಯ ಭಯ, ಚಿಂತೆ ಅವನನ್ನು ಕಾಡುತ್ತದೆ. ಏಕೆಂದರೆ ಮರಣವು ಯಾವಾಗ? ಎಲ್ಲಿ ? ಮತ್ತು ಹೇಗೆ? ಬರುತ್ತದೆ ಎಂಬುದು ತಿಳಿಯುವುದಿಲ್ಲ.

ನಾವು ಲೋಕಕ್ಕೆ ಏನೂ ತಕ್ಕೊಂಡು ಬರಲಿಲ್ಲವಷ್ಟೆ; ಅದರೊಳಗಿಂದ ಏನನ್ನೂ ತೆಗೆದುಕೊಂಡು ಹೋಗಲಾರೆವು. ತಾನು ಗಳಿಸಿದ್ದೆಲ್ಲವನ್ನೂ ಕೊಟ್ಟು ಹೋಗಬೇಕು ಇಲ್ಲವೇ ಬಿಟ್ಟು ಹೋಗಬೇಕು. ಮರಣವು ಮನುಷ್ಯನಿಗೆ ಅನಾರೋಗ್ಯಗಳಿಂದ, ಅಪಘಾತಗಳಿಂದ, ಪ್ರಕೃತಿ ವಿಕೋಪಗಳಿಂದ ಹಾಗೂ ಇನ್ನಿತರೆ ಕಾರಣಗಳಿಂದ ಬರುತ್ತದೆ. ಈ ಮರಣದಿಂದ ಯಾರೂ ಸಹ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಯಾಕೆಂದರೆ ಇದು ದೈವ ನೇಮಿತವಾಗಿರುತ್ತದೆ.

ಶರೀರಕ್ಕೆ ಸಾವಿರುತ್ತದೆ ಆದರೆ ಈ ಆತ್ಮಕ್ಕೆ ಸಾವಿರುವುದಿಲ್ಲ. ಅದಕ್ಕೆ ಹುಟ್ಟು ಒಂದೇ ಬಾರಿ ಇರುತ್ತದೆ ಅದು ದೇಹವನ್ನು ಬಿಟ್ಟ ನಂತರ ಸ್ವರ್ಗ ಅಥವಾ ನರಕದಲ್ಲಿ ನಿತ್ಯ ನಿರಂತರವಾಗಿ ವಾಸಿಸುವಂಥದ್ದಾಗಿರುತ್ತದೆ. ಈ ಎರಡು ಸ್ಥಳಗಳ ಹೊರತು ಅದಕ್ಕೆ ಮೂರನೆಯ ಮತ್ಯಾವ ಸ್ಥಳವೂ ಇರುವುದಿಲ್ಲ.



## ನರಕ

ಮಾನವನಲ್ಲಿ ಪಾಪದ ಸ್ವಭಾವ ಇರುವುದರಿಂದ ಸಹಜವಾಗಿ ನರಕಕ್ಕೆ ಪ್ರಾಪ್ತನಾಗುತ್ತಾನೆ. ನಮ್ಮ ಆತ್ಮವು ನರಕಕ್ಕೆ ಹೋಗಬೇಕಾದರೆ ನಾವು ಏನನ್ನೂ ಮಾಡಬೇಕಾಗಿಲ್ಲ ಅದು ಸಂಪೂರ್ಣ ಉಚಿತವಾಗಿ ನಮ್ಮನ್ನು ಸ್ವಾಗತಿಸುವಂಥದ್ದಾಗಿರುತ್ತದೆ. ಆದರೆ ನರಕದಲ್ಲಿ ನಾವು ಊಹಿಸಿಕೊಂಡ ಹಾಗೆ ವ್ಯಭಿಚಾರಮಾಡುವುದು, ಕುಡಿಯುವುದು, ಅಶ್ಲೀಲ ನೃತ್ಯ ಇನ್ನಿತರೆ ಪಾಪದ ಕೆಲಸಗಳನ್ನು ಮಾಡಿ ಆನಂದಿಸುವುದು ಇರುವುದಿಲ್ಲ. ಅದು ತುಂಬಾ ಭಯಂಕರವಾದ ಸ್ಥಳ. ಅಗ್ನಿ ಗಂಧಕಗಳುರಿಯುವ ಕೆರೆ ಅಂದರೆ, ನಿತ್ಯ ಯಾತನೆಯ ಸ್ಥಳವಾಗಿರುತ್ತದೆ.

ನರಕದ ಬಗ್ಗೆ ಪವಿತ್ರ ಕುರ್‌ಆನ್ ಅಧ್ಯಾಯ 22, ಅಲ್ ಹಜ್ಜ್, ಸೂರಾ 22:19–22 ಮತ್ತು 23 ಅಲ್ ಮೂಮಿನೂನ್, ಸೂರಾ 23:104 ರಲ್ಲಿ ಈ ರೀತಿ ಹೇಳಿರುತದೆ–

### 22:Al-Hajj سُوۡرَةُ الحَجّ ٢٢

**19: یہ دو (فریق) ایک دوسرے کے دشمن اپنے پروردگار (کے بارے) میں جھگڑتے ہیں۔ تو کافر ہیں ان کے لئے آگ کے کپڑے قطع کئے جائیں گے اور ان کے سروں پرجلتا ہوا پانی ڈالا جائے گا)**

**ಅರ್ಥ** : ಅವರ ತಲೆಗಳ ಮೇಲೆ ಕುದಿಯುವ ನೀರನ್ನು ಸುರಿಸಲಾಗುವುದು.

**20: اس سے ان کے پیٹ کے اندر کی چیزیں اور کھالیں گل جائیں گی**

**ಅರ್ಥ** : ಅದರಿಂದ ಅವರ ಚರ್ಮಗಳು ಮಾತ್ರವಲ್ಲ ಹೊಟ್ಟೆಯೊಳಗಿರುವ ಭಾಗಗಳೂ ಕರಗಿ ಹೋಗುವವು.

**21 : اور ان )کے مارنے ٹھوکنے (کے لئ ے لوہے کے ہتھوڑے ہوں گ**

**ಅರ್ಥ** : ಅವರನ್ನು ಶಿಕ್ಷಿಸಲಿಕ್ಕಾಗಿ ಕಬ್ಬಿಣದ ಗದೆಗಳಿರುವವು.

**22 : جب وہ چاہیں گے کہ اس رنج (وتکلیف) کی وجہ سے دوزخ سے نکل جائیں تو پھر اسی میں لوٹا دیئےجائیں گے۔ اور جائے گا کہ) جلنے کے عذاب کا مزہ چکھتے رہو**

**ಅರ್ಥ :** 'ಅವರು ಭಯಭೀತರಾಗಿ ನರಕದಿಂದ ಹೊರ ಹೋಗಿ ಬಿಡಲು ಪ್ರಯತ್ನಿಸಿದಾಗೆಲ್ಲ, ಸುಡುವ ಶಿಕ್ಷೆಯ ರುಚಿಯನ್ನು ಸವಿಯಿರಿ ಎನ್ನುತ್ತ ಪುನಃ ಅದರೊಳಗೇ ದೂಡಲ್ಪಡುವರು.'

## 23: Surah Al-Muminun سُوْرَةُ المؤمنون ٣٢

**104 : ڑھائے ہوں گے آگان کے مونہوں**

**کو جھلس دے گی اور وہ اس میں تیوری چ**

**ಅರ್ಥ :** 'ಅಗ್ನಿಯು ಅವರ ಮುಖದ ಚರ್ಮವನ್ನು ನೆಕ್ಕಿಬಿಡುವುದು ಮತ್ತು ಅವರ ದವಡೆಗಳು ಹೊರಕ್ಕೆ ಬಂದುಬಿಡುವವು. ಅವರು ಸದಾಕಾಲ ನರಕದಲ್ಲೇ ವಾಸಿಸುವರು. ಅವರಿಗೆ ಕರುಳನ್ನು ಕತ್ತರಿಸಿ ಬಿಡುವಂತಹ ಕುದಿಯುವ ನೀರನ್ನು ಕುಡಿಸಲಾಗುವುದು. ಅಲ್ಲಿ ಅವರು ಮರಣಕ್ಕಾಗಿ ಪ್ರಾರ್ಥಿಸತೊಡಗುವರು. ಆದರೆ ಅದು ಅವರನ್ನು ಅಪಹಾಸ್ಯಕ್ಕೀಡು ಮಾಡುವುದು.'

ಈ ಬಗ್ಗೆ ಪವಿತ್ರ ಸತ್ಯವೇದ ಸಹ 'ಅಲ್ಲಿ ಅವರನ್ನು ಕಡಿಯುವ ಹುಳು ಸಾಯುವುದಿಲ್ಲ ಸುಡುವ ಬೆಂಕಿ ಆರುವುದಿಲ್ಲವೆಂದು ಹೇಳುತ್ತದೆ.' ಆದರೆ ದೇವರ ಕೃಪೆಯಿಂದ ನಾವು ನರಕಕ್ಕೆ ಹೋಗುವುದನ್ನು ತಪ್ಪಿಸಿಕೊಳ್ಳಲು ಮಾರ್ಗವುಂಟು. ಏಕೆಂದರೆ ದೇವರು ಈ ನರಕವನ್ನು ಸೈತಾನನನ್ನೂ ಮತ್ತು ಅವನ ದೂತರನ್ನೂ ಶಿಕ್ಷಿಸಲಿಕ್ಕಾಗಿ ಉಂಟುಮಾಡಿದ್ದಾನೆಯೇ ಹೊರತು ಮಾನವರನ್ನು ಶಿಕ್ಷಿಸುವ ಉದ್ದೇಶದಿಂದ ಖಂಡಿತವಾಗಿಯೂ ಅಲ್ಲ.

## ಸ್ವರ್ಗ

**ಯೋಹಾನ ಎಂಬ ಯೇಸು ಕ್ರಿಸ್ತನ ಪ್ರಿಯ ಶಿಷ್ಯನು ದರ್ಶನದಲ್ಲಿ ಸ್ವರ್ಗಲೋಕವನ್ನು ನೋಡಿ ಈ ಕೆಳಗಿನಂತೆ ದಾಖಲಿಸಿರುತ್ತಾನೆ:**

ದೇವರ ಬಳಿಯಿಂದ ಒಂದು ಹೊಸ ಪರಿಶುದ್ಧ ಪಟ್ಟಣವು ದೇವರ ತೇಜಸ್ಸುಳ್ಳದ್ದಾಗಿ ಇಳಿದು ಬರುವುದನ್ನು ಕಂಡೆನು; ಅದು ತನ್ನ ಗಂಡನಿಗೋಸ್ಕರ ಅಲಂಕೃತಳಾದ ಮದಲಗಿತ್ತಿಯಂತೆ ಶೃಂಗರಿಸಲ್ಪಟ್ಟಿತ್ತು. ಆ ಪಟ್ಟಣದ ಪ್ರಕಾಶವು ಅಮೂಲ್ಯ ರತ್ನದ ಪ್ರಕಾಶಕ್ಕೆ ಸಮಾನವಾಗಿತ್ತು, ಥಳಥಳಿಸುವ ವಜ್ರವೋ



ಎಂಬಂತೆ ಕಾಣಿಸಿತು. ಆ ಪಟ್ಟಣಕ್ಕೆ 12 ಹೆಬ್ಬಾಗಿಲುಗಳಿದ್ದವು; ಆ ಬಾಗಿಲುಗಳ ಬಳಿಯಲ್ಲಿ ಹನ್ನೆರಡು ಮಂದಿ ದೇವದೂತರಿದ್ದರು. ಆ ಪಟ್ಟಣದ ಕೋಟೆಯು ಸೂರ್ಯಕಾಂತ ಶಿಲೆಯಿಂದ ಕಟ್ಟಲ್ಪಟ್ಟಿತ್ತು. ಪಟ್ಟಣವು ಶುದ್ಧ ಗಾಜಿನಂತಿರುವ ಸೋಸಿದ ಬಂಗಾರವೇ, ಪಟ್ಟಣದ ಕೋಟೆಯ ಅಸ್ತಿವಾರಗಳು ಸಕಲ ವಿಧವಾದ ರತ್ನಗಳಿಂದ ಅಲಂಕೃತವಾಗಿದ್ದವು. ಮೊದಲನೆಯ ಅಸ್ತಿವಾರವು ವಜ್ರ, ಎರಡನೇದು ವೈಡೂರ್ಯ, ಮೂರನೇದು ಪಚ್ಚೆ, ನಾಲ್ಕನೇದು ಪದ್ಮರಾಗ, ಐದನೇದು ಗೋಮೇಧಿಕ, ಆರನೇದು ಮಾಣಿಕ್ಯ, ಏಳನೇದು ಪೀತರತ್ನ, ಎಂಟನೇದು ಬೇರುಲ್ಲ, ಒಂಭತ್ತನೇದು ಪುಷ್ಯರಾಗ, ಹತ್ತನೇದು ಗರುಡಪಚ್ಚೆ, ಹನ್ನೊಂದನೇದು ಇಂದ್ರನೀಲ, ಹನ್ನೆರಡನೇದು ನೀಲಸ್ಫಟಿಕ. ಒಂದೊಂದು ಬಾಗಿಲು ಒಂದೊಂದು ಮುತ್ತಿನಿಂದ ಮಾಡಲ್ಪಟ್ಟಿತ್ತು. ಪಟ್ಟಣದ ಬೀದಿಯು ಸ್ವಚ್ಛವಾದ ಗಾಜಿನಂತಿರುವ ಸೋಸಿದ ಬಂಗಾರವಾಗಿತ್ತು. ಆ ಪಟ್ಟಣಕ್ಕೆ ದೇವರ ಪ್ರಭಾವವೇ ಬೆಳಕನ್ನು ಕೊಟ್ಟಿತ್ತು; ಯೇಸು ಕ್ರಿಸ್ತರೇ ಅದರ ದೀಪವು.

ಆ ಪಟ್ಟಣದಲ್ಲಿ ಕೊಳಕಾದದ್ದೊಂದೂ ಸೇರುವುದಿಲ್ಲ. ಯೇಸು ಕ್ರಿಸ್ತರ ಮೋಕ್ಷಪ್ರಾಪ್ತರ ಪಟ್ಟಿಯಲ್ಲಿ ಯಾರ್ಯಾರ ಹೆಸರುಗಳು ಬರೆದಿವೆಯೋ ಅವರು ಮಾತ್ರ ಸೇರುತ್ತಾರೆ. ಅಲ್ಲಿ ಅವರು ದೇವರ ಸಂಗಡ ವಾಸಮಾಡುವರು ದೇವರು ತಾನೇ ಅವರ ಸಂಗಡ ಇದ್ದು ಅವರ ಕಣ್ಣೀರನ್ನೆಲ್ಲಾ ಒರಸಿಬಿಡುವನು. ಅಲ್ಲಿ ಮರಣವಿರುವುದಿಲ್ಲ, ದುಃಖವಾಗಲಿ ಗೋಳಾಟವಾಗಲೀ ಕಷ್ಟವಾಗಲಿ ಇರುವುದಿಲ್ಲ; ಆ ಪಟ್ಟಣದಲ್ಲಿ ಯೇಸು ಕ್ರಿಸ್ತರ ಸಿಂಹಾಸನವಿರುವುದು ಅವರ ದಾಸರಿಗೆ ಅವರ ಮುಖ ದರ್ಶನವಾಗುವುದು. ಅವರು ಯುಗ ಯುಗಾಂತರಗಳಲ್ಲಿಯೂ ಆಳುವರು. (ಪ್ರಕಟಣೆ 21:9–27)

ಇಕ್ಕಟ್ಟಾದ ಬಾಗಿಲಿನಿಂದ ಒಳಕ್ಕೆ ಹೋಗಿರಿ, ನರಕಕ್ಕೆ ಹೋಗುವ ಬಾಗಿಲು ದೊಡ್ಡದು, ದಾರಿ ಅಗಲವು; ಅದರಲ್ಲಿ ಹೋಗುವವರು ಬಹು ಜನ. ಸ್ವರ್ಗಕ್ಕೆ ಹೋಗುವ ಬಾಗಿಲು ಇಕ್ಕಟ್ಟು, ದಾರಿ ಬಿಕ್ಕಟ್ಟು; ಅದನ್ನು ಕಂಡುಹಿಡಿಯುವವರು ಸ್ವಲ್ಪ ಜನ. ಒಬ್ಬ ಮನುಷ್ಯನು ಲೋಕವನ್ನೆಲ್ಲಾ ಸಂಪಾದಿಸಿಕೊಂಡರೂ ಪ್ರಾಣ ನಷ್ಟಪಟ್ಟರೆ ಅಂದರೆ ನರಕಕ್ಕೆ ಪ್ರಾಪ್ತನಾದರೆ ಅವನಿಗೆ ಪ್ರಯೋಜನವೇನು? ಅಥವಾ ಒಬ್ಬನು ತನ್ನ ಪ್ರಾಣಕ್ಕೆ ಅಂದರೆ ಮೋಕ್ಷ ಪ್ರಾಪ್ತಿಗೆ ಏನು ಈಡು ಕೊಟ್ಟಾನು? ಎಂದು ಪವಿತ್ರ ಸತ್ಯವೇದ ಹೇಳುತ್ತದೆ.

# 3. ಮೋಕ್ಷಕ್ಕೆ ಮಾರ್ಗ

ದೇವದೂತರು ಪಾಪ ಮಾಡಿದಾಗ ದೇವರು ಅವರನ್ನು ಸುಮ್ಮನೆ ಬಿಡದೆ ನರಕಕ್ಕೆ ದೊಬ್ಬಿ ನ್ಯಾಯತೀರ್ಪನ್ನು ಹೊಂದುವುದಕ್ಕೆ ಇಡಲ್ಪಟ್ಟವರಾಗಿರಬೇಕೆಂದು ಕತ್ತಲೆ ಗುಂಡಿಗಳಿಗೆ ಒಪ್ಪಿಸಿದನು. ಆದರೆ ಮಾನವರು ಪಾಪ ಮಾಡಿದಾಗ, 'ದೇವರು ಲೋಕದ ಮಾನವರ ಮೇಲೆ ಎಷ್ಟೋ ಪ್ರೀತಿಯನ್ನಿಟ್ಟು ತನ್ನ ಒಬ್ಬನೇ ಮಗನಾದ ಯೇಸುವನ್ನು ಕೊಟ್ಟನು; ಆತನನ್ನು ನಂಬುವ ಒಬ್ಬನಾದರೂ ನಾಶವಾಗದೆ ಎಲ್ಲರೂ ಮೋಕ್ಷವನ್ನು ಪಡೆಯಬೇಕೆಂದು ಆತನನ್ನು ಕೊಟ್ಟನು.' ಎಂದು ಪವಿತ್ರ ಸತ್ಯವೇದ ಹೇಳುತ್ತದೆ.

ಕ್ರಿಸ್ತ ಪೂರ್ವ ಸುಮಾರು 700 ವರ್ಷಗಳ ಹಿಂದೆಯೇ ಯೆಶಾಯನೆಂಬ ಕಾಲಜ್ಞಾನಿಯು 'ವರದ ಮಗನು ನಮಗೆ ದೊರೆತನು; ಆಡಳಿತವು ಅವನ ಬಾಹುವಿನ ಮೇಲಿರುವುದು; ಅದ್ಭುತ ಸ್ವರೂಪನು, ಆಲೋಚನಾ ಕರ್ತನು, ಪರಾಕ್ರಮಿಯಾದ ದೇವರು, ನಿತ್ಯನಾದ ತಂದೆ, ಸಮಾಧಾನದ ಪ್ರಭು ಎಂಬವು ಅವನ ಹೆಸರು' ಎಂದು ಕಾಲಜ್ಞಾನ ಹೇಳಿರುತ್ತಾನೆ.

ಕಾಲವು ಪರಿಪೂರ್ಣವಾದಾಗ ದೇವರು ತನ್ನ ಮಗನನ್ನು ಈ ಲೋಕಕ್ಕೆ ಕಳುಹಿಸಿಕೊಟ್ಟನು. ಹೇಗೆಂದರೆ ಮರಿಯ ಎಂಬ ಕನ್ನಿಕೆಯು ಪವಿತ್ರಾತ್ಮನಿಂದ ಗರ್ಭಧರಿಸಿ ಬೇತ್ಲೆಹೇಮ್ ಎಂಬ ಊರಿಗೆ ಪ್ರಯಾಣ ಮಾಡುತ್ತಿರುವಾಗ ದಿನತುಂಬಿ ತನ್ನ ಚೊಚ್ಚಲ ಮಗನನ್ನು ಹೆತ್ತು ಬಟ್ಟೆಯಲ್ಲಿ ಸುತ್ತಿ ಛತ್ರದಲ್ಲಿ ಅವರಿಗೆ ಸ್ಥಳವಿಲ್ಲದ ಕಾರಣ ಮಗುವನ್ನು ಗೋಶಾಲೆಯ ಗೋದಲಿಯಲ್ಲಿ ಮಲಗಿಸಿದಳು ಹಾಗೂ ದೇವದೂತನು ಮೊದಲೇ ಸೂಚಿಸಿದಂತೆ ಆ ಕೂಸಿಗೆ 'ಯೇಸು' ಎಂದು ಹೆಸರಿಟ್ಟರು. ಯಾಕೆಂದರೆ ಆತನೇ ತನ್ನ ಜನರನ್ನು ಅವರ ಪಾಪಗಳಿಂದ ಬಿಡಿಸಿ ಕಾಯುವನು.

'ಆದಿಯಲ್ಲಿ ವಾಕ್ಯವಿತ್ತು; ಆ ವಾಕ್ಯವು ದೇವರ ಬಳಿಯಲ್ಲಿತ್ತು; ಆ ವಾಕ್ಯವು ದೇವರಾಗಿತ್ತು, ಆ ವಾಕ್ಯವೆಂಬವನು ಆದಿಯಲ್ಲಿ ದೇವರ ಬಳಿಯಲ್ಲಿದ್ದನು. ಆತನ ಮೂಲಕವಾಗಿ ಸಮಸ್ತವು ಉಂಟಾಯಿತು. ಆತನಲ್ಲಿ ಜೀವವಿತ್ತು; ಆ ಜೀವವು ಮನುಷ್ಯರಿಗೆ ಬೆಳಕಾಗಿತ್ತು. ಆ ವಾಕ್ಯವೆಂಬವನು ನರಾವತಾರ ಎತ್ತಿ ನಮ್ಮ ಮಧ್ಯದಲ್ಲಿ ವಾಸಮಾಡಿದನು. ಆತನು ಕೃಪೆಯಿಂದಲೂ ಸತ್ಯದಿಂದಲೂ ತುಂಬಿದವನಾಗಿದ್ದನು. ಆತನ ಮೂಲಕವಾಗಿಯೇ ಕೃಪೆಯೂ, ಸತ್ಯವೂ ಮಾನವರಿಗೆ ಅನುಗ್ರಹಿಸಲ್ಪಟ್ಟವು.



ದೇವರನ್ನು ಯಾರೂ ಎಂದೂ ಕಂಡಿಲ್ಲ; ಯಾವನು ಏಕಪುತ್ರನೂ ಸ್ವತಃ ದೇವರೂ ಆಗಿದ್ದು ದೇವರ ಎದೆಯಲ್ಲಿದ್ದಾನೋ ಆತನೇ ತಿಳಿಯಪಡಿಸಿದನು.'

ಯೋಹಾನ ಎಂಬ ಒಬ್ಬ ಕಾಲಜ್ಞಾನಿಯು ಯೇಸು ಕ್ರಿಸ್ತರನ್ನು ನೋಡಿ– 'ಅಗೋ, ಯಜ್ಞಕ್ಕೆ ದೇವರು ನೇಮಿಸಿದ ಕುರಿ, ಲೋಕದ ಪಾಪವನ್ನು ನಿವಾರಣೆ ಮಾಡುವವನು' ಅಂದನು. ಅದೇನೆಂದರೆ, ನಾವು ರಕ್ತ ಮಾಂಸಧಾರಿಗಳಾಗಿರುವುದರಿಂದ ದೇವರು ಶರೀರಧಾರಿಯಾಗಿ ಪ್ರತ್ಯಕ್ಷನಾದನು; ಆತ್ಮ ಸಂಬಂಧವಾಗಿ ಕ್ರಿಸ್ತ(ಅಭಿಷಿಕ್ತ)ನೇ ಎಂದು ಸ್ಥಾಪಿಸಲ್ಪಟ್ಟನು.

ಯೇಸು ಕ್ರಿಸ್ತರು ದೇವಸ್ವರೂಪರಾಗಿದ್ದರೂ ದೇವರಿಗೆ ಸರಿಸಮಾನನಾಗಿರುವುದೆಂಬ ಅಮೂಲ್ಯ ಪದವಿಯನ್ನು ಬಿಡಲೊಲ್ಲೆನು ಎಂದೆಣಿಸದೆ ತಮ್ಮನ್ನು ಬರಿದುಮಾಡಿಕೊಂಡು ಮನುಷ್ಯರಿಗೆ ಸದೃಶರಾದರು ಹಾಗೂ ತಮ್ಮನ್ನು ತಗ್ಗಿಸಿಕೊಂಡು ತಮ್ಮ ಮರಣದಿಂದಲೇ ಮರಣಾಧಿಕಾರಿಯಾದ ಸೈತಾನನನ್ನು ಅಡಗಿಸಿ ಬಿಡುವುದಕ್ಕೆ ಶಿಲುಬೆಯ ಮರಣವನ್ನಾದರೂ ಹೊಂದುವಷ್ಟು ವಿಧೇಯರಾದರು.

ಈ ಕಾರಣದಿಂದ ದೇವರು ಆತನನ್ನು ಅತ್ಯುನ್ನತ ಸ್ಥಾನಕ್ಕೆ ಏರಿಸಿ ಎಲ್ಲಾ ಹೆಸರುಗಳಿಗಿಂತ ಶ್ರೇಷ್ಠವಾದ ಹೆಸರನ್ನು ಆತನಿಗೆ ದಯಪಾಲಿಸಿದ್ದಾನೆ. ಆದ್ದರಿಂದ ಸ್ವರ್ಗ, ಮರ್ತ್ಯ, ಪಾತಾಳಗಳಲ್ಲಿರುವವರೆಲ್ಲರೂ ಯೇಸುವಿನ ಹೆಸರಿನಲ್ಲಿ ಅಡ್ಡಬಿದ್ದು ಯೇಸು ಕ್ರಿಸ್ತರನ್ನು ಒಡೆಯನೆಂದು ಪ್ರತಿಜ್ಞೆ ಮಾಡಿ ತಂದೆಯಾದ ದೇವರಿಗೆ ಘನವನ್ನು ಸಲ್ಲಿಸುವರು.

ದೇವರು ನಮಗೆ ನಿತ್ಯಜೀವ(ಮೋಕ್ಷ)ವನ್ನು ಅನುಗ್ರಹಿಸಿದನು, ಆ ಜೀವ(ಮೋಕ್ಷ) ಯೇಸು ಕ್ರಿಸ್ತರಲ್ಲಿದೆ. ಆದಕಾರಣ ಯೇಸು ಕ್ರಿಸ್ತರು ತನ್ನ ಮೂಲಕ ದೇವರ ಬಳಿಗೆ ಬರುವವರನ್ನು ಸಂಪೂರ್ಣವಾಗಿ ರಕ್ಷಿಸುವುದಕ್ಕೆ ಶಕ್ತರಾಗಿದ್ದಾರೆ.

ಯೇಸುವು ಹೋತಗಳ ಮತ್ತು ಹೋರಿಕರುಗಳ ರಕ್ತವನ್ನು ತೆಗೆದುಕೊಳ್ಳದೆ ಸ್ವಂತ ರಕ್ತವನ್ನೇ ತೆಗೆದುಕೊಂಡು ನಮಗೋಸ್ಕರ ನಿತ್ಯ ವಿಮೋಚನೆಯನ್ನು ಶಿಲುಬೆಯ ಮೇಲೆ ಸಂಪಾದಿಸಿಕೊಂಡವರಾಗಿ ಕ್ರಿಸ್ತ ಶಕ 33 ರಲ್ಲಿ ಒಂದೇ ಸಾರಿ ದೇವರ ಸನ್ನಿಧಾನಕ್ಕೆ ಪ್ರವೇಶಿಸಿದರು. ತನ್ನನ್ನು ತಾನೇ ನಿರ್ದೋಷಿಯನ್ನಾಗಿ ದೇವರಿಗೆ ಸಮರ್ಪಿಸಿಕೊಂಡ ಯೇಸು ಕ್ರಿಸ್ತರ ರಕ್ತವು ಎಷ್ಟೋ ಹೆಚ್ಚಾಗಿ ನಮ್ಮನ್ನು ನಿರ್ಜೀವ ಕರ್ಮಗಳಿಂದ ಬಿಡಿಸಿ ಶುದ್ಧೀಕರಿಸುವುದಲ್ಲವೇ.

ಧರ್ಮಶಾಸ್ತ್ರದಲ್ಲಿ ಮುಂತಿಳಿಸಿರುವ ಪ್ರಕಾರ ಕ್ರಿಸ್ತರು ನಮ್ಮ ಪಾಪಗಳ ನಿವಾರಣೆಗಾಗಿ ಸತ್ತರು; ಹೂಣಲ್ಪಟ್ಟರು; ಧರ್ಮಶಾಸ್ತ್ರದ ಪ್ರಕಾರವೇ ಮೂರನೆಯ ದಿನದಲ್ಲಿ ಎಬ್ಬಿಸಲ್ಪಟ್ಟರು. (1 ಕೋರಿಯಂತ 15:3–4)

ಯೇಸು ಕ್ರಿಸ್ತರು ಪಾಪಿಗಳನ್ನು ಹುಡುಕಿ ರಕ್ಷಿಸುವುದಕ್ಕೋಸ್ಕರ ಈ ಲೋಕಕ್ಕೆ ಬಂದರು ಎಂಬ ಮಾತು ನಂಬತಕ್ಕದ್ದಾಗಿಯೂ ಸರ್ವಾಂಗೀಕಾರಕ್ಕೆ ಯೋಗ್ಯವಾದದ್ದೂ ಆಗಿದೆ ಎಂದು ಪವಿತ್ರ ಸತ್ಯವೇದ ಹೇಳುತ್ತದೆ.

**ಯೇಸು ಕ್ರಿಸ್ತರು ದೇವ ಕುಮಾರನು ಎಂಬುದಕ್ಕೆ ಪವಿತ್ರ ಸತ್ಯವೇದದಲ್ಲಿನ ಸಾಕ್ಷಿಗಳು:**

1) ದೇವರು ಸ್ವತಃ ಹೇಳಿದ್ದು: **'ಈತನು ಪ್ರಿಯನಾಗಿರುವ ನನ್ನ ಮಗನು, ಈತನನ್ನು ನಾನು ಮೆಚ್ಚಿದ್ದೇನೆ.'** (ಮತ್ತಾಯ 3:17)
2) ಯೇಸು ಕ್ರಿಸ್ತರ ಅಪೋಸ್ತಲನಾದ ಪೇತ್ರನು ಹೇಳಿದ್ದು: **'ನೀನು ಬರಬೇಕಾದ ಕ್ರಿಸ್ತ (ಅಭಿಷೇಕಿಸಲ್ಪಟ್ಟವ)ನು, ಜೀವಸ್ವರೂಪನಾದ ದೇವರ ಕುಮಾರನು.'** (ಮತ್ತಾಯ: 16:16)
3) ಯೇಸು ಕ್ರಿಸ್ತರನ್ನು ಶಿಲುಬೆಗೇರಿಸಿದ ಶತಾಧಿಪತಿ ಹೇಳಿದ್ದು: **'ನಿಜವಾಗಿ ಈತನು ದೇವ ಕುಮಾರನಾಗಿದ್ದನು.'** (ಮತ್ತಾಯ 27:54)
4) ಯೇಸು ಕ್ರಿಸ್ತರ 12 ಮಂದಿ ಅಪೋಸ್ತಲರಲ್ಲಿ ಒಬ್ಬನಾದ ತೋಮನು ಪುನರುತ್ಥಾನರಾದ ಯೇಸುವನ್ನು ನೋಡಿ ಹೇಳಿದ್ದು: **'ನನ್ನ ಸ್ವಾಮಿ, ನನ್ನ ದೇವರು!'** (ಯೋಹಾನ 20:28)
5) ಯೇಸು ಕ್ರಿಸ್ತರು ತಾವೇ ಹೇಳಿದ್ದು: **'ನನ್ನನ್ನು ನೋಡಿದವನು ತಂದೆಯ(ದೇವರ)ನ್ನು ನೋಡಿದ್ದಾನೆ. ನಾನು ತಂದೆಯಲ್ಲಿದ್ದೇನೆ, ತಂದೆಯು(ದೇವರು) ನನ್ನಲ್ಲಿದ್ದಾನೆ.'** (ಯೋಹಾನ 14:8–10)
6) ದೆವ್ವಗಳು ಪ್ರಭು ಕ್ರಿಸ್ತರನ್ನು ಕಂಡಾಗೆಲ್ಲಾ ಆತನ ಪಾದಕ್ಕೆ ಬಿದ್ದು– **'ನೀನು ದೇವ ಕುಮಾರನು.'** ಎಂದು ಕೂಗುತ್ತಿದ್ದವು. (ಮಾರ್ಕ 3:11)

~*~*~*~*~



# 4. ಕ್ಷಮಾದಾನ

**ಭಗವದ್ಗೀತೆಯ ಅಧ್ಯಾಯ 4 : 8 ಜ್ಞಾನ ಯೋಗದಲ್ಲಿ ಒಂದು ಶ್ಲೋಕ ಈ ರೀತಿಯಾಗಿದೆ:**

**परित्राणाय साधूनां विनाशाय च दुष्कृताम् ।**
**धर्मसंस्थापनार्थाय सम्भवामि युगे युगे ॥**

***ಪರಿತ್ರಾಣಾಯ ಸಾಧೂನಾಂ ವಿನಾಶಾಯ ಚ ದುಷ್ಕೃತಾಮ್ ।***
***ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ ॥***

**ಶ್ಲೋಕದ ಅರ್ಥ :** ದುಷ್ಟರನ್ನು ಸಂಹರಿಸಿ, ಶಿಷ್ಟರನ್ನು ರಕ್ಷಿಸಿ ಯುಗಯುಗಗಳಲ್ಲಿ ಧರ್ಮವನ್ನು ಸ್ಥಾಪಿಸುವುದಕ್ಕಾಗಿಯೇ ನಾನು ತಿರುಗಿ ಅವತರಿಸಿ ಬರುತ್ತೇನೆ.

ಇದರ ಪ್ರಕಾರವಾಗಿ ಏನಾದರೂ ನಡೆದರೆ ಇಡೀ ಜಗತ್ತು ನಾಶವಾಗಿ ದೇವರು ಮಾತ್ರ ಉಳಿಯುತ್ತಾನೆ. ಆದರೆ ದೇವರು ಪ್ರೀತಿ ಸ್ವರೂಪನು. ಈ ಬಗ್ಗೆ ಪವಿತ್ರ ಕುರ್‌ಆನ್ **'ಪರಮ ದಯಾಮಯನೂ ಕರುಣಾನಿಧಿಯೂ ಆದ ಅಲ್ಲಾಹನ ನಾಮದಿಂದ'** ಎಂದು ಪ್ರಾರಂಭವಾಗುತ್ತದೆ. ಪವಿತ್ರ ಸತ್ಯವೇದದಲ್ಲಿ ಸಹ ದೇವರು ಹೇಳಿರುವುದು: **'ನನ್ನ ಜೀವದಾಣೆ, ದುಷ್ಟನ ಸಾವಿನಲ್ಲಿ ನನಗೆ ಲೇಶವಾದರೂ ಸಂತೋಷವಿಲ್ಲ; ಅವನು ತನ್ನ ದುರ್ಮಾರ್ಗವನ್ನು ಬಿಟ್ಟು ಬಾಳುವುದೇ ನನಗೆ ಸಂತೋಷ.'**

ದೇವರು ನಮ್ಮ ಅಪರಾಧಕ್ಕೆ ತಕ್ಕಂತೆ ನಮ್ಮನ್ನು ಶಿಕ್ಷಿಸಿದ್ದರೆ ನಾವು ಈವರೆಗೆ ಉಳಿಯುತ್ತಿರಲಿಲ್ಲ. ನಾವು ಉಳಿದಿರುವುದು ದೇವರ ಕರುಣೆಯೇ; ಆತನ ಕೃಪಾವರಗಳು ನಿಂತು ಹೋಗುವುದಿಲ್ಲ. ದಿನದಿನವು ಹೊಸಹೊಸದಾಗಿ ಒದಗುತ್ತವೆ; ಆತನ ಸತ್ಯಸಂಧತೆಯು ದೊಡ್ಡದು.

ನಮ್ಮ ಭಾರತದ ಸಂವಿಧಾನದಲ್ಲಿ ದೇಶದ ರಾಷ್ಟ್ರಪತಿಗಳಿಗೆ ಕ್ಷಮಾದಾನ ನೀಡುವ ಪರಮೋಚ್ಚ ಅಧಿಕಾರವನ್ನು ಕಲ್ಪಿಸಲಾಗಿರುತ್ತದೆ. ಹಾಗೂ ಕ್ಷಮೆಯ ಬಗ್ಗೆ ಸುಂದರವಾದ ವ್ಯಾಖ್ಯಾನವನ್ನು ಈ ಕೆಳಗಿನಂತೆ ನೀಡಲಾಗಿರುತ್ತದೆ.

"ಕ್ಷಮೆ/ದಯೆ ಅನುಗ್ರಹದ ಕಾರ್ಯವಾಗಿದೆ. ಇದನ್ನು ಹಕ್ಕಿನ ಹಾಗೆ ಕೇಳಲಿಕ್ಕಾಗದು. ಕ್ಷಮೆಯು ಅಪರಾಧಿಯನ್ನು ಎಲ್ಲಾ ಶಿಕ್ಷೆಗಳಿಂದ, ದಂಡನೆಗಳಿಂದ ಹಾಗೂ ಅನರ್ಹತೆಗಳಿಂದ ವಿಮುಕ್ತಿಗೊಳಿಸುತ್ತದೆ ಹಾಗೂ ಅವನು ಯಾವುದೇ ಅಪರಾಧವನ್ನು ಎಂದೂ ಮಾಡದಿರುವಂತಹ ಸ್ಥಾನದಲ್ಲಿ ಅವನನ್ನು ಇಡುತ್ತದೆ.

ಅವನನ್ನು ಅಪರಾಧಿ ಎಂದು ನಿರ್ಣಯಿಸುವುದಕ್ಕಿಂತ ಮೊದಲು ಅವನಿಗೆ ಕ್ಷಮೆಯನ್ನು ಕೊಟ್ಟರೆ ಅದು ಅವನಿಗೆ ವಿಧಿಸಬಹುದಾದ ದಂಡನೆಗಳನ್ನು ಹಾಗೂ ಅನರ್ಹತೆಗಳನ್ನು ತಡೆಗಟ್ಟುತ್ತದೆ, ಅವನನ್ನು ಅಪರಾಧಿ ಎಂದು ನಿರ್ಣಯಿಸಿದ ನಂತರ ಅವನಿಗೆ ಕ್ಷಮೆಯನ್ನು ಕೊಟ್ಟರೆ, ಅದು ಅವನಿಗೆ ವಿಧಿಸಿದ ದಂಡನೆಗಳನ್ನು ಹಾಗೂ ಅನರ್ಹತೆಗಳನ್ನು ತೆಗೆದುಹಾಕುತ್ತದೆ." (ಅನುಚ್ಛೇದ: 72)

ದೇಶದ ಪ್ರಥಮ ಪ್ರಜೆ ಹಾಗೂ ಅತೀ ದೊಡ್ಡ ವ್ಯಕ್ತಿಗಳಾದ ಸನ್ಮಾನ್ಯ ರಾಷ್ಟ್ರಪತಿಗಳಿಗೆ ಇಷ್ಟೊಂದು ಅಧಿಕಾರವಿರುವುದಾದರೆ, ನಮ್ಮ ನಿರ್ಮಾಣಿಕನೂ, ಭೂಮಿ ಆಕಾಶಗಳನ್ನು ಸೃಷ್ಟಿಸಿದವನೂ ಆಗಿರುವ ದೇವರಿಗೆ ಇನ್ನೆಷ್ಟು ಅಧಿಕಾರವಿರಬೇಕು! ಊಹಿಸಿರಿ; ಆತನ ತೀರ್ಪನ್ನು ಏನಾದರೂ ಪ್ರಶ್ನೆ ಮಾಡಲಾದೀತೇ? ಅಥವಾ ಕಡೆಗಣಿಸಲಾದೀತೇ? ಯೋಚಿಸಿರಿ.

ಒಮ್ಮೆ ಪ್ರಾರ್ಥನೆ ಮಾಡಬೇಕೆಂದು ಇಬ್ಬರು ಮನುಷ್ಯರು ದೇವಾಲಯಕ್ಕೆ ಹೋದರು; ಒಬ್ಬನು ಫರಿಸಾಯನು, ಒಬ್ಬನು ಸುಂಕದವನು. ಫರಿಸಾಯನು ನಿಂತುಕೊಂಡು ಪ್ರಾರ್ಥಿಸುವಾಗ ತನ್ನೊಳಗೆ– ದೇವರೇ, ಸುಲಿಗೆ ಮಾಡುವವರೂ, ಅನ್ಯಾಯಗಾರರೂ, ವ್ಯಭಿಚಾರಮಾಡುವವರೂ ಆಗಿರುವ ಉಳಿದ ಜನರಂತೆ ನಾನಲ್ಲ, ಈ ಸುಂಕದವನಂತೆಯೂ ಅಲ್ಲ; ಆದ್ದರಿಂದ ನಾನು ನಿನಗೆ ಸ್ತೋತ್ರಮಾಡುತ್ತೇನೆ. ನಾನು ಸಂಪಾದಿಸುವ ಎಲ್ಲದರಲ್ಲಿಯೂ ಹತ್ತರಲ್ಲೊಂದು ಪಾಲು ಕಾಣಿಕೆ ಕೊಡುತ್ತೇನೆ ಅಂದುಕೊಂಡನು. ಆದರೆ ಆ ಸುಂಕದವನು ದೂರದಲ್ಲಿ ನಿಂತು ಆಕಾಶದ ಕಡೆಗೆ ಕಣ್ಣೆತ್ತಿ ನೋಡುವುದಕ್ಕೂ ಮನಸ್ಸಿಲ್ಲದೆ ಎದೆಯನ್ನು ಬಡಿದುಕೊಳ್ಳುತ್ತಾ– 'ದೇವರೇ, ಪಾಪಿಯಾದ ನನ್ನನ್ನು ಕರುಣಿಸು' ಅಂದನು. ಇವನು ನೀತಿವಂತನೆಂದು ನಿರ್ಣಯಿಸಲ್ಪಟ್ಟವನಾಗಿ ತನ್ನ ಮನೆಗೆ ಹೋದನು, ಆ ಫರಿಸಾಯನು ಅಂಥವನಾಗಿ ಹೋಗಲಿಲ್ಲ ಎಂದು ಪವಿತ್ರ ಸತ್ಯವೇದ ಹೇಳುತ್ತದೆ.

ಯೇಸು ಕ್ರಿಸ್ತರು ನಮ್ಮ ಅಪರಾಧಗಳ ದೋಷಾರೋಪಣಾ ಪಟ್ಟಿ (Charge sheet)ಯನ್ನು ಶಿಲುಬೆಗೆ ಜಡಿದು ಇಲ್ಲದಂತಾಗಿ ಮಾಡಿರುವುದರಿಂದ ನಾವು ಧರ್ಮಶಾಸ್ತ್ರಕ್ಕೆ ಅಧೀನರಲ್ಲ, ಕೃಪೆಗೆ ಅಧೀನರಾಗಿದ್ದೇವೆ. ಕರುಣೆಯು ನ್ಯಾಯತೀರ್ಪನ್ನು ಗೆದ್ದು ಹಿಗ್ಗುತ್ತದೆ. ಕ್ರಿಸ್ತ ಯೇಸುವಿನಲ್ಲಿ ಇರುವವರಿಗೆ ಅಪರಾಧನಿರ್ಣಯವು ಈಗ ಇಲ್ಲವೇ ಇಲ್ಲ ಎಂದು ಪವಿತ್ರ ಸತ್ಯವೇದ ಹೇಳುತ್ತದೆ.

ಜನ್ಮ / ಕರ್ಮ ಪಾಪಗಳಿಲ್ಲದ ಯೆಸು ಕ್ರಿಸ್ತರು ನಮಗೋಸ್ಕರ ತಮ್ಮ ರಕ್ತವನ್ನು ಸುರಿಸಿದ್ದರಿಂದ ನಮ್ಮ ಅಪರಾಧಗಳು ಪರಿಹಾರವಾಗಿ ನಮಗೆ ಬಿಡುಗಡೆಯಾಯಿತು. ಇದು ದೇವರ ಕೃಪಾತಿಶಯವೇ. (ಎಫೆಸದವರಿಗೆ 1:7)



# 5. ಪುರಾತನ ವೇದಗಳಲ್ಲಿನ ಪ್ರಜಾಪತಿ ಮತ್ತು ಪಶು ಯಜ್ಞದ ಕ್ರಮಗಳು ಯೇಸು ಕ್ರಿಸ್ತರಲ್ಲಿ ನೆರವೇರಿದ್ದು

ಪುರಾತನ ವೇದಗಳಲ್ಲಿ ಸರ್ವಮಾನವರ ಪಾಪಗಳ ಪರಿಹಾರಕ್ಕಾಗಿ ಪ್ರಾಣಿಗಳನ್ನು ದೇವರಿಗೆ ಯಜ್ಞವಾಗಿ ಸಮರ್ಪಿಸುತ್ತಿದ್ದರು. ಈ ಯಜ್ಞಗಳನ್ನು ಸಮರ್ಪಿಸುವ ಕ್ರಮಗಳನ್ನು ಕೃಷ್ಣಯಜುರ್ವೇದದಲ್ಲಿ ಈ ಕೆಳಗಿನಂತೆ ಉಲ್ಲೇಖಿಸಲಾಗಿರುತ್ತದೆ.

| ಕೃಷ್ಣಯಜುರ್ವೇದದಲ್ಲಿನ ಕ್ರಮಗಳು | ಯೇಸು ಕ್ರಿಸ್ತರಲ್ಲಿ ನೆರವೇರಿದ್ದು |
|---|---|

पशुं स्नपयन्ति कूटकर्णखण्डश्लोणसप्तशफ वर्जम् ॥

| | |
|---|---|
| ***1) ಪಶುಂ ಸ್ನಪಯಂತಿ ಕೂಟ ಕರ್ಣ ಖಂಡ ಬಂಡ ಶ್ಲೋಣ ಸಪ್ತಶಫವರ್ಜಂ ॥***<br>(ಆಪಸ್ತಂಭ ಶ್ರೌತ ಸೂತ್ರ)<br>(=7–12–1, ಪುಟ ಸಂಖ್ಯೆ:421)<br>**ಅರ್ಥ** : ಯಜ್ಞ ಪಶುವು ಪರಿಶುದ್ಧವಾಗಿರಬೇಕು ಹಾಗೂ ಅದು ಪೂರ್ಣಾಂಗವಾಗಿರಬೇಕು. | 1) ಯೇಸು ಕ್ರಿಸ್ತರು ಮನುಷ್ಯನ ವೀರ್ಯದಿಂದ ಜನಿಸದ ಕಾರಣ ಅವರಲ್ಲಿ ಜನ್ಮ ಪಾಪವಿಲ್ಲ.<br>(ಪವಿತ್ರ ಕುರ್‌ಆನ್)<br>* ಯೇಸು ಕ್ರಿಸ್ತರ ಜೀವನ ಮತ್ತು ಆಲೋಚನೆಗಳಲ್ಲಿಯೂ ಸಹ ಪಾಪಗಳಿರಲಿಲ್ಲವೆಂದು ಪವಿತ್ರ ಸತ್ಯವೇದ ಹೇಳುತ್ತದೆ. (ಯೋಹಾನ 8:46)<br>* ಅವನು ಸರ್ವಾಂಗದಲ್ಲಿಯೂ ಮನೋಹರನು. (ಪರಮ ಗೀತ 5:16) |

धर्षा मानुषानिति नि युनक्ति धृत्या अद्भ्यस्त्वौषधीभ्यः ॥

**ಅರ್ಥ** : ಯಜ್ಞ ಪಶುವನ್ನು ಯೂಪ ಸ್ತಂಭಕ್ಕೆ ಬಂಧಿಸಬೇಕು.

| | |
|---|---|
| ***2) ನಿ ಯುನಕ್ತಿ ಧೃತ್ಯಾ ॥***<br>(ತೈತ್ತಿರೀಯ ಸಂಹಿತಾ)<br>(ಕಾಂಡ 6, ಪ್ರಶ್ನೆ 3, ಪುಟ ಸಂಖ್ಯೆ:304)<br> | 2) ಯೇಸು ಕ್ರಿಸ್ತರನ್ನು ಗೊಲ್ಗೊಥಾ ಎಂಬ ಸ್ಥಳದಲ್ಲಿ ಶಿಲುಬೆಗೆ ಅಂದರೆ ಮರದ ಕಂಬಕ್ಕೆ ಜಡಿದರು ಮತ್ತು 'ನಜರೇತಿನ ಯೇಸು, ಯೆಹೂದ್ಯರ ಅರಸನು' ಎಂದು ಬರೆದು ಮೇಲ್ಗಡೆ ಹಚ್ಚಿದರು. (ಯೋಹಾನ 19:18–19) |

वपाश्रपणी पुनरन्वारभतेऽस्मिन्नेव लोके प्रति तिष्ठति ॥

**3) *ವಪಾಶ್ರಪಣೀ ಪುನರನ್ವಾರಭತೇ ಽ ಸ್ಮಿನ್ನೇವ* ॥**
(ತೈತ್ತಿರೀಯ ಸಂಹಿತಾ)
(ಕಾಂಡ 6, ಪ್ರಶ್ನೆ 3, ಪುಟ ಸಂಖ್ಯೆ:306)

**ಅರ್ಥ :** ಯಜ್ಞ ಪಶುವಿಗೆ ಮುಳ್ಳನ್ನು ಚುಚ್ಚಬೇಕು.

3) ಸಿಪಾಯಿಗಳು ಯೇಸು ಕ್ರಿಸ್ತರ ಬಟ್ಟೆಗಳನ್ನು ತೆಗೆದು ಹಾಕಿ ಕೆಂಪು ನಿಲುವಂಗಿಯನ್ನು ಹೊದಿಸಿ ಮುಳ್ಳುಬಳ್ಳಿಯಿಂದ ಕಿರೀಟವನ್ನು ಹೆಣೆದು ಆತನ ತಲೆಯ ಮೇಲೆ ಇಟ್ಟು ಬೆತ್ತವನ್ನು ತೆಗೆದುಕೊಂಡು ತಲೆಯ ಮೇಲೆ ಹೊಡೆದರು.

(ಮತ್ತಾಯ 27:28–30)

दधातीडामुप ह्वयते पशवो वा इडा पशूनेवोप ह्वयते ॥

**4) *ದಧಾತೀಡಾಮುಪ ಹ್ವಯತೇ* ॥**
(ತೈತ್ತಿರೀಯ ಸಂಹಿತಾ)
(ಕಾಂಡ 6, ಪ್ರಶ್ನೆ 3, ಪುಟ ಸಂಖ್ಯೆ:308)

**ಅರ್ಥ :** ಯಜ್ಞ ಪಶುವಿನ ಮಾಂಸವನ್ನು ಸೇವನೆ ಮಾಡಬೇಕು.

4) ಯೇಸು ರೊಟ್ಟಿಯನ್ನು ತೆಗೆದುಕೊಂಡು ಸ್ತೋತ್ರಮಾಡಿ ಮುರಿದು ಶಿಷ್ಯರಿಗೆ ಕೊಟ್ಟು– ತೆಗೆದುಕೊಳ್ಳಿರಿ, ತಿನ್ನಿರಿ, ಇದು ನನ್ನ ದೇಹ ಅಂದರು.

(ಮತ್ತಾಯ 26:26–27)

यत्पशुरपां पेरुरसीत्याहैष ह्यपां पाता ॥

**5) *ಯತ್ಪಶುರಪಾಂ ಪೇರುರಸೀತ್ಯಾಹೈಷ ಹ್ಯಪಾಂ ಪಾತಾ* ॥**
(ತೈತ್ತಿರೀಯ ಸಂಹಿತಾ)
(ಕಾಂಡ 6, ಪ್ರಶ್ನೆ 3, ಪುಟ ಸಂಖ್ಯೆ:304)

**ಅರ್ಥ :** ಯಜ್ಞ ಪಶುವಿಗೆ ಪಾನಿಯವನ್ನು ಕುಡಿಸಬೇಕು.

5) ಶಿಲುಬೆಯ ಮೇಲೆ ಯೇಸು ಶಾಸ್ತ್ರದ ಮಾತು ನೆರವೇರುವಂತೆ ನನಗೆ ನೀರಡಿಕೆಯಾಗಿದೆ ಅಂದರು. ಅಲ್ಲಿ ಹುಳಿರಸ ತುಂಬಿದ ಗಡಿಗೆ ಇಟ್ಟಿರಲಾಗಿ ಸಿಪಾಯಿಗಳು ಸ್ಪಂಜನ್ನು ಹುಳಿರಸದಲ್ಲಿ ಅದ್ದಿ ಹಿಸೋಪ್ ಗಿಡದ ಕೋಲಿಗೆ ಸಿಕ್ಕಿಸಿ ಆತನ ಬಾಯಿಗೆ ಮುಟ್ಟಿಸಿದರು.

(ಯೋಹಾನ 19:28–29)



अमायुं कृण्वन्तं संज्ञपयत इत्युक्त्वा पराङावर्ततेऽध्वर्युः ॥

**6) *ಅಮಾಯುಂ ಕೃಣ್ವಂತಂ ಸಂಜ್ಞಪಯತ ಇತ್ಯುಕ್ತಾ ಪರಾಜ್ಞಾವರ್ತತೇಧ್ವರ್ಯು:* ॥**
(ಆಪಸ್ತಂಭ ಶ್ರೌತ ಸೂತ್ರ)
(=7–16–6, ಪುಟ ಸಂಖ್ಯೆ:433)

**ಅರ್ಥ :** ಯಜ್ಞ ಪಶುವು ಮೌನವಾಗಿರಬೇಕು ಹಾಗೂ ಅದಕ್ಕೆ ಹಿಂಸೆಯಾಗುವ ರೀತಿಯಲ್ಲಿ ವಧಿಸಬಾರದು.
(ಮೂಳೆಗಳನ್ನು ಮುರಿಯಬಾರದು)

6) ಯೇಸು ಕ್ರಿಸ್ತರು ವಧ್ಯಸ್ಥಾನಕ್ಕೆ ಒಯ್ಯಲ್ಪಡುವ ಕುರಿಯಂತೆಯೂ ಉಣ್ಣೆ ಕತ್ತರಿಸುವವರ ಮುಂದೆ ಮೌನವಾಗಿರುವ ಕುರಿಯ ಹಾಗೆ ಇದ್ದರು ಬಾಯಿ ತೆರೆಯಲೇ ಇಲ್ಲ. ಸಂಜೆ ಸಿಪಾಯಿಗಳು ಯೇಸುವಿನ ಶಿಲುಬೆಯ ಬಳಿ ಬಂದಾಗ ಆತನು ಆಗಲೇ ಸತ್ತಿರುವುದನ್ನು ಕಂಡು ಆತನ ಕಾಲುಗಳನ್ನು ಮುರಿಯಲಿಲ್ಲ.

(ಯೆಶಾಯ 53:7 ಮತ್ತು ಯೋಹಾನ 19:33)

स आत्मनो वपामुदखिदत्तामग्नौ प्रागृह्णात् ॥

**7) *ಸ ಆತ್ಮನೋ ವಪಾಮುದಖಿದತ್ ತಾಂ ಅಗ್ನೌ ಪ್ರಾಗೃಹ್ಣಾತ್* ॥**
(ತೈತ್ತಿರೀಯ ಸಂಹಿತಾ)
(2 ನೇ ಕಾಂಡ, 1 ನೇ ಅವತಾರ, 2ನೇಯ ಹನಸು, ಪುಟ ಸಂಖ್ಯೆ:62)

**ಅರ್ಥ :** ಪ್ರಜಾಪತಿಯು ತನ್ನ ಶರೀರವನ್ನೇ ಹೋಮ ಮಾಡಿದನು.

7) ಯೇಸು ಕ್ರಿಸ್ತರು ಹೋತಗಳ ಮತ್ತು ಹೋರಿಕರುಗಳ ರಕ್ತವನ್ನು ತೆಗೆದುಕೊಳ್ಳದೆ ನಿರ್ದೋಷಿಯಾದ ತನ್ನ ಸ್ವಂತ ರಕ್ತವನ್ನೇ ತೆಗೆದುಕೊಂಡು ನಿತ್ಯ ವಿಮೋಚನೆಯನ್ನು ಸಂಪಾದಿಸಿಕೊಂಡವರಾಗಿ ಒಂದೇ ಸಾರಿ ದೇವರ ಸನ್ನಿಧಾನಕ್ಕೆ ಪ್ರವೇಶಿಸಿದರು. ಅವರ ರಕ್ತವು ನಮ್ಮನ್ನು ನಿರ್ಜೀವ ಕರ್ಮಗಳಿಂದ ಬಿಡಿಸುತ್ತದೆ.

(ಇಬ್ರಿಯರಿಗೆ 9:12–14)

**ಪುರಾತನ ವೇದಗಳ ಕಾಲದಲ್ಲಿ ಸರ್ವಮಾನವರ ಪಾಪಗಳ ಪರಿಹಾರಕ್ಕಾಗಿ ಅರ್ಪಿಸುತ್ತಿದ್ದ ಪಶು ಯಜ್ಞಕ್ಕೂ ಯೇಸು ಕ್ರಿಸ್ತರು ಶಿಲುಬೆಯಲ್ಲಿ ಸಮರ್ಪಿಸಿಕೊಂಡ ಯಜ್ಞಕ್ಕೂ ನೂರಕ್ಕೆ ನೂರರಷ್ಟು ಹೋಲಿಕೆಗಳಿರುವುದು ಕಂಡುಬರುತ್ತದೆಯಲ್ಲವೇ?**

## ಯೇಸು ಕ್ರಿಸ್ತರ ಕುರಿತು ಪವಿತ್ರ ಕುರ್‌ಆನ್ ಸಾಕ್ಷಿ

### ಪ್ರವಾದಿ ಮಹಮ್ಮದ್(ಸ) ಅವರು ಈ ರೀತಿ ಹೇಳಿರುತ್ತಾರೆ



ಈಸಾ(ಯೇಸು) ಅವರನ್ನು ಅಲ್ಲಾಹನ ಸಂದೇಶವಾಹಕರೆಂದು ನಂಬದವನು ಮುಸ್ಲಿಮ್ ಎಂದು ಪರಿಗಣಿಸಲ್ಪಡಲಾರ. ಅವರ ಪ್ರವಾದಿತ್ವವನ್ನು ನಿರಾಕರಿಸುವವನು ಇಸ್ಲಾಮ್ ಧರ್ಮದಿಂದ ಭ್ರಷ್ಟನಾಗುತ್ತಾನೆ. ಪವಿತ್ರ ಕುರ್‌ಆನ್‌ನಿನಲ್ಲಿ ಹೆಸರಿನೊಂದಿಗೆ ಪ್ರಸ್ತಾಪಿಸಲ್ಪಟ್ಟಿರುವಂತಹ ಏಕೈಕ ಮಹಿಳೆ ಯೇಸುವಿನ ತಾಯಿ ಮರಿಯ ಅಥವಾ ಮರ್ಯಮ್(ಅ) ಆಗಿರುವರು, ಅವರ ಚಾರಿತ್ರ್ಯವನ್ನು ಪವಿತ್ರ ಕುರ್‌ಆನ್ ಒಂದು ಆದರ್ಶವಾಗಿ ಜಗತ್ತಿನ ಮುಂದಿರಿಸಿದೆ.'ನನ್ನ ಪ್ರಾಣವು ಯಾರ ಕೈಯಲ್ಲಿದೆಯೋ ಅವನ ಆಣೆ, ಮರ್ಯಮ್ಮರ ಪುತ್ರ ಖಂಡಿತವಾಗಿಯೂ ನಿಮ್ಮ ಮಧ್ಯೆ ನ್ಯಾಯಪೂರ್ಣ ಆಡಳಿತಗಾರರಾಗಿ ಇಳಿಯುವರು. ಈಸಾ (ಅ)ಅವರ ಪುನರಾಗಮನದ ತನಕ ಪುನರುತ್ಥಾನದ ಗಳಿಗೆ ಬರಲಾರದು.'

ಕ್ರಿಸ್ತರ ಜನನದ ಕುರಿತು ಇಗೋ ಒಬ್ಬ ಕನ್ನಿಕೆಯು ಗರ್ಭಿಣಿಯಾಗಿ ಒಬ್ಬ ಮಗನನ್ನು ಹೆರುವಳು; ಎಂಬುದಾಗಿ ಪವಿತ್ರ ಸತ್ಯವೇದದಲ್ಲಿದ್ದು ಇದು ಪವಿತ್ರ ಕುರ್‌ಆನ್ ನಲ್ಲಿ ಸಹ ಈ ಕೆಳಗಿನಂತೆ ದಾಖಲಾಗಿರುತ್ತದೆ.

### 3. ಆಲಿ ಇಮ್‌ರಾನ್

### 3:Al-i'Imran سُوۡرَةُ آل عِمرَان ٣

:45 (وہ وقت بھی یاد کرنے کے لائق ہے) جب فرشتوں نے (مریم سے کہا)

کہ مریم خدا تم کو اپنی طرف سے ایک فیض کی بشارت دیتا ہے جس کا نام
مسیح (اور مشہور) عیسیٰ ابن مریم ہوگا (اور) جو دنیا اور آخرت میں باآبرو
اور (خدا کے) خاصوں میں سے ہوگا

**45 : ದೇವಚರರು ಹೀಗೆಂದರು–** 'ಓ ಮರ್ಯಮ್, ಅಲ್ಲಾಹ್ ನಿನಗೆ ತನ್ನ ಒಂದು ಫರಮಾನಿನ (ಆಜ್ಞೆಯ)ಸುವಾರ್ತೆ ನೀಡುತ್ತಾನೆ. ಅವನ ಹೆಸರು ಮರ್ಯಮ್ಮಳ ಪುತ್ರ ಮಸೀಹ್ ಈಸಾ (ಯೇಸು) ಎಂದಿರುವುದು. **ಅವನು ಇಹ ಮತ್ತು ಪರಗಳಲ್ಲಿ ಪ್ರತಿಷ್ಠಿತನಾಗುವನು.** ಮತ್ತು ಅವನನ್ನು ಸಂದೇಶವಾಹಕನನ್ನಾಗಿ ಮಾಡುವೆನು.'



47: مریم نے کہا پروردگار میرے ہاں بچہ کیونکر ہوگا کہ کسی انسان نے
مجھے ہاتھ تک تو لگایا نہیں فرمایا کہ خدا اسی طرح جو چاہتا ہے پیدا کرتا
ہے جب وہ کوئی کام کرنا چاہتا ہے تو ارشاد فرما دیتا ہے کہ ہوجا تو وہ ہو
جاتا ہے

**47 : ಇದನ್ನು ಕೇಳಿ ಮರ್ಯಮ್ ಹೇಳಿದರು–** 'ಓ ನನ್ನ ಪ್ರಭೂ, ನನ್ನಲ್ಲಿ ಮಗುವಾಗುವುದೆಲ್ಲಿಂದ? ನನ್ನನ್ನಂತು ಪುರುಷನಾರೂ ಸ್ಪರ್ಶಿಸಿಲ್ಲ.' ಉತ್ತರ ಸಿಕ್ಕಿತು,– 'ಹಾಗೆಯೇ ಸಂಭವಿಸುವುದು.' ಅಲ್ಲಾಹ್ ತಾನಿಚ್ಛಿಸುವುದನ್ನು ಸೃಷ್ಟಿಸುತ್ತಾನೆ. ಅವನು ಯಾವುದಾದರೊಂದು ಕಾರ್ಯವನ್ನು ಮಾಡಲು ನಿರ್ಧರಿಸಿದಾಗ, 'ಆಗು' ಎನ್ನುತ್ತಾನೆ ಮತ್ತು ಅದು ಆಗಿ ಬಿಡುತ್ತದೆ.

49: اور (عیسیٰ) بنی اسرائیل کی طرف پیغمبر (ہو کر جائیں گے اور کہیں گے)
کہ میں تمہارے پروردگار کی طرف سے نشانی لے کر آیا ہوں وہ یہ کہ
تمہارے سامنے مٹی کی مورت بشکل پرند بناتا ہوں پھر اس میں پھونک
مارتا ہوں تو وہ خدا کے حکم سے (سچ مچ) جانور ہو جاتا ہے اور اندھے
اور ابرص کو تندرست کر دیتا ہوں اور خدا کے حکم سے مردے میں جان
ڈال دیتا ہوں اور جو کچھ تم کھا کر آتے ہو اور جو اپنے گھروں میں جمع کر
رکھتے ہو سب تم کو بتا دیتا ہوں اگر تم صاحب ایمان ہو تو ان باتوں میں
تمہارے لیے (قدرت خدا کی) نشانی ہے

**49 : ಈಸಾ ಹೇಳಿದ್ದು–** ನಾನು ನಿಮ್ಮ ಪ್ರಭುವಿನ ವತಿಯಿಂದ ನಿಮ್ಮ ಬಳಿಗೆ ಕುರುಹುಗಳೊಂದಿಗೆ ಬಂದಿರುತ್ತೇನೆ. ನಾನು ನಿಮ್ಮ ಮುಂದೆ ಪಕ್ಷಿ ರೂಪದ ಆಕೃತಿ ಮಾಡುತ್ತೇನೆ ಮತ್ತು ಅದಕ್ಕೆ ಉಸಿರು ಊದಿಬಿಡುತ್ತೇನೆ, ಅದು ಪಕ್ಷಿಯಾಗುತ್ತದೆ. ನಾನು ಅಲ್ಲಾಹನ ಅಪ್ಪಣೆಯಿಂದ ಹುಟ್ಟು ಕುರುಡರನ್ನೂ ಕುಷ್ಠರೋಗಿಗಳನ್ನೂ ಗುಣಪಡಿಸುತ್ತೇನೆ ಮತ್ತು ಅವನ ಆಜ್ಞೆಯಿಂದ ಸತ್ತವರನ್ನು ಜೀವಂತಗೊಳಿಸುತ್ತೇನೆ.

55: اس وقت خدا نے فرمایا کہ عیسیٰ! میں تمہاری دنیا میں رہنے کی مدت پوری
کرکے تم کو اپنی طرف اٹھا لوں گا اور تمہیں کافروں (کی صحبت) سے پاک
کر دوں گا اور جو لوگ تمہاری پیروی کریں گے ان کو کافروں پر قیامت تک
فائق (وغالب) رکھوں گا پھر تم سب میر ے پاس لوٹ کر آؤ گے تو جن باتوں
میں تم اختلاف کرتے تھے اس دن تم میں ان کا فیصلہ کردوں گا

**55 : ಅಲ್ಲಾಹ್ ಹೀಗೆ ಹೇಳಿದನು–** 'ಓ ಈಸಾ, ನಾನೀಗ ನಿನ್ನನ್ನು ನನ್ನ ಕಡೆಗೆ ಎತ್ತಿಕೊಳ್ಳುವೆನು ಮತ್ತು ನಿನ್ನನ್ನು ನಿರಾಕರಿಸಿದವರಿಂದ ನಿನ್ನನ್ನು ಪರಿಶುದ್ಧಗೊಳಿಸುವೆನು ಮತ್ತು **ಪುನರುತ್ಥಾನದವರೆಗೂ ನಿನ್ನ ಅನುಸರಣೆ ಮಾಡುವವರನ್ನು ನಿನ್ನನ್ನು ನಿಷೇಧಿಸುವವರ ಮೇಲೆ ಶ್ರೇಷ್ಠತೆಯಲ್ಲಿರಿಸುವೆನು. ನಿಮಗೆಲ್ಲರಿಗೂ ಕಟ್ಟಕಡೆಗೆ ನನ್ನ ಬಳಿ ಬರಲಿಕ್ಕಿದೆ.'**

~*~*~*~*~

## 6. ಯೇಸು ಕ್ರಿಸ್ತರ ಪುನರುತ್ಥಾನ ಮತ್ತು ಸ್ವರ್ಗಾರೋಹಣ

ವಾರದ ಮೊದಲನೆಯ ದಿವಸ ಕೆಲವು ಸ್ತ್ರೀಯರು ಕ್ರಿಸ್ತರ ಸಮಾಧಿಯನ್ನು ನೋಡುವುದಕ್ಕೆ ಬಂದರು. ಆಗ ಮಹಾ ಭೂಕಂಪವಾಯಿತು. ದೇವದೂತನು ಆಕಾಶದಿಂದ ಇಳಿದು ಬಂದು ಸಮಾಧಿಯ ಬಾಗಿಲಿನಲ್ಲಿದ್ದ ಕಲ್ಲನ್ನು ಉರುಳಿಸಿ ಅದರ ಮೇಲೆ ಕೂತುಕೊಂಡನು. ಆ ದೇವದೂತನು ಅವರಿಗೆ, 'ನೀವು ಹೆದರಬೇಡಿರಿ; ಶಿಲುಬೆಗೆ ಹಾಕಲ್ಪಟ್ಟ ಯೇಸು ಕ್ರಿಸ್ತರನ್ನು ಹುಡುಕುತ್ತೀರೆಂದು ಬಲ್ಲೆನು; ಅವರು ಇಲ್ಲಿ ಇಲ್ಲ; ತಾವು ಹೇಳಿದಂತೆ ಎದ್ದಿದ್ದಾರೆ; ಬನ್ನಿ, ಅವರು ಮಲಗಿದ್ದ ಸ್ಥಳವನ್ನು ನೋಡಿರಿ' ಅಂದನು. ಆಮೇಲೆ ಯೇಸು ಅವರ ಎದುರಿಗೆ ಪ್ರತ್ಯಕ್ಷರಾಗಿ, 'ನಿಮಗೆ ಶುಭವಾಗಲಿ' ಅಂದರು. ಶಿಷ್ಯರು ಹತ್ತಿರಕ್ಕೆ ಬಂದು ಅವರ ಪಾದಗಳನ್ನು ಹಿಡಿದು ನಮಸ್ಕಾರ ಮಾಡಿದರು.

ಆ ಸಮಯದಲ್ಲಿ ಯೇಸುವಿನ 12 ಮಂದಿ ಅಪೋಸ್ತಲರಲ್ಲಿ ಒಬ್ಬನಾದ ತೋಮನು ಅಲ್ಲಿರಲಿಲ್ಲ. ಆದ್ದರಿಂದ ಅವನು– ನಾನು ಕ್ರಿಸ್ತರ ಕೈಗಳಲ್ಲಿ ಮೊಳೆಗಳಿಂದಾದ ಗಾಯವನ್ನು ನೋಡಿ ಆ ಮೊಳೆಯ ಗಾಯದಲ್ಲಿ ನನ್ನ ಬೆರಳನ್ನು ಇಟ್ಟು ಅವರ ಪಕ್ಕೆಯಲ್ಲಿ ನನ್ನ ಕೈಯನ್ನು ಹಾಕದ ಹೊರತು ನಿಮ್ಮ ಮಾತನ್ನು ನಂಬುವುದೇ ಇಲ್ಲ ಅಂದನು.

ಎಂಟು ದಿವಸಗಳಾದ ಮೇಲೆ ಕ್ರಿಸ್ತರ ಶಿಷ್ಯರು ಪುನಃ ಮನೆಯೊಳಗೆ ಇದ್ದಾಗ ತೋಮನೂ ಅವರ ಸಂಗಡ ಇದ್ದನು. ಬಾಗಿಲುಗಳು ಮುಚ್ಚಿದ್ದವು. ಆಗ ಯೇಸು ಕ್ರಿಸ್ತರು ಪ್ರತ್ಯಕ್ಷರಾಗಿ ಬಂದು ನಡುವೆ ನಿಂತು– ನಿಮಗೆ ಸಮಾಧಾನವಾಗಲಿ ಅಂದರು. ನಂತರ ಯಾಕೆ ಕಳವಳಗೊಳ್ಳುತ್ತೀರಿ? ನಿಮ್ಮ ಹೃದಯದಲ್ಲಿ ಅನುಮಾನಗಳು ಹುಟ್ಟುವುದೇಕೆ? ನನ್ನ ಕೈಕಾಲುಗಳನ್ನು ಮುಟ್ಟಿ ನೋಡಿರಿ, ನಿಮಗೆ ಕಾಣುವ ಪ್ರಕಾರ ನನಗೆ ಮಾಂಸವೂ ಎಲುಬುಗಳೂ



ಉಂಟು; ಅವು ಭೂತಕ್ಕೆ ಇರುವುದಿಲ್ಲ ಎಂದು ಹೇಳಿದರು. ಆಮೇಲೆ ತೋಮನಿಗೆ– ನಿನ್ನ ಬೆರಳನ್ನು ಈ ಕಡೆ ಚಾಚಿ ನನ್ನ ಕೈಗಳನ್ನು ಮುಟ್ಟಿನೋಡು; ನಿನ್ನ ಕೈಚಾಚಿ ನನ್ನ ಪಕ್ಕೆಯಲ್ಲಿ ಹಾಕು; ನಂಬದವನಾಗಿರಬೇಡ, ನಂಬುವವನಾಗು ಎಂದು ಹೇಳಿದರು. ಆಗ ತೋಮನು ಕ್ರಿಸ್ತರಿಗೆ– ನನ್ನ ಸ್ವಾಮಿ, ನನ್ನ ದೇವರು! ಎಂದು ಹೇಳಿದನು. ಯೇಸು ಕ್ರಿಸ್ತರು ಅವನಿಗೆ– ನೀನು ನನ್ನನ್ನು ನೋಡಿದ್ದರಿಂದ ನಂಬಿದ್ದೀ; ನೋಡದೆ ನಂಬಿದವರು ಧನ್ಯರು ಎಂದು ಹೇಳಿದರು.

ಯೇಸು ಕ್ರಿಸ್ತರು ಹೇಳಿದ್ದು, 'ನಾನೇ ಪುನರುತ್ಥಾನವೂ ಜೀವವೂ ಆಗಿದ್ದೇನೆ; ನನ್ನಲ್ಲಿ ನಂಬಿಕೆ ಇಡುವವನು ಸತ್ತರೂ ಬದುಕುವನು. ಯಾವನಾದರೂ ಬದುಕುತ್ತಾ ನನ್ನಲ್ಲಿ ನಂಬಿಕೆಯಿಡುವುದಾದರೆ ಅವನು ಎಂದಿಗೂ ಸಾಯುವುದಿಲ್ಲ.' (ಯೋಹಾನನು 11:25–26)

ಪುನರುತ್ಥಾನರಾದ ಕ್ರಿಸ್ತರು 40 ದಿನಗಳವರೆಗೆ ತಮ್ಮ ಶಿಷ್ಯರಿಗೆ ಅಲ್ಲಲ್ಲಿ ದರ್ಶನ ನೀಡಿದ ನಂತರ ಗಲಿಲಾಯವೆಂಬ ಊರಲ್ಲಿ ಗೊತ್ತು ಮಾಡಲ್ಪಟ್ಟ ಬೆಟ್ಟದಲ್ಲಿ ತಮ್ಮ ಶಿಷ್ಯರೊಂದಿಗೆ ಸೇರಿದ್ದಾಗ ಶಿಷ್ಯರು ಅವರನ್ನು ಕಂಡು ಅಡ್ಡಬಿದ್ದರು. ಆಗ ಯೇಸು ಹತ್ತಿರಕ್ಕೆ ಬಂದು– 'ಸ್ವರ್ಗಲೋಕದಲ್ಲಿಯೂ ಭೂಲೋಕದಲ್ಲಿಯೂ ಎಲ್ಲಾ ಅಧಿಕಾರವು ನನಗೆ ಕೊಡಲ್ಪಟ್ಟದೆ. ನಾನು ಯುಗದ ಸಮಾಪ್ತಿಯವರೆಗೆ ಎಲ್ಲಾ ದಿವಸ ನಿಮ್ಮ ಸಂಗಡ ಇರುತ್ತೇನೆ. ಆದ್ದರಿಂದ ನೀವು ಹೊರಟುಹೋಗಿ ಜಗತ್ತಿಗೆಲ್ಲಾ ಮುಕ್ತಿಯ ಮಾರ್ಗವನ್ನು ಸಾರಿರಿ' ಅಂದರು. ಆಮೇಲೆ ಸುಮಾರು 500 ಜನರ ಸಮ್ಮುಖದಲ್ಲಿಯೇ ಆಕಾಶಕ್ಕೆ ಏರಿಹೋಗಿ ದೇವರ ಬಲಗಡೆಯಲ್ಲಿ ಆಸನಾರೂಢರಾದರು. ಇತ್ತಲಾಗಿ ಆತನ ಶಿಷ್ಯರು ಹೊರಟುಹೋಗಿ ಎಲ್ಲಾ ಕಡೆಗಳಲ್ಲಿಯೂ ಆತನ ಉಪದೇಶಗಳನ್ನು ಸಾರಿದರು.

ಯೇಸು ಕ್ರಿಸ್ತರ ಸಮಾಧಿಯನ್ನು ಭದ್ರಪಡಿಸಿ ಸರ್ಕಾರದ ಮುದ್ರೆ ಹಾಕಿ ಕಾವಲು ಕಾದಾಗ್ಯೂ ಸಹ ಆತನು ಮೊದಲೇ ಹೇಳಿದಂತೆ ಪುನರುತ್ಥಾನರಾಗಿದ್ದು ಆತನ ಮೃತದೇಹ ಸಮಾಧಿಯಲ್ಲಿ ಇರುವುದಿಲ್ಲ ಹಾಗೂ ಈವರೆಗೆ ಎಲ್ಲಿಯೂ ಪತ್ತೆಯಾಗಿರುವುದಿಲ್ಲ ಆದ್ದರಿಂದ ಆತನ ಪುನರುತ್ಥಾನದ ಬಗ್ಗೆ ಯಾವುದೇ ಗೊಂದಲಗಳು ಇರುವುದಿಲ್ಲ. ಆದ್ದರಿಂದ ಇಂದು ಜಗತ್ತು ಆರಾಧಿಸುತ್ತಿರುವುದು ಸತ್ತಂತಹ ಯೇಸು ಕ್ರಿಸ್ತರನ್ನಲ್ಲ ಮರಣವನ್ನು ಜಯಿಸಿದಂತಹ ಸದಾಕಾಲ ಜೀವಿಸುವ ಮೃತ್ಯುಂಜಯರಾದ ಯೇಸು ಕ್ರಿಸ್ತರನ್ನು ಆರಾಧಿಸುತ್ತಿದೆ.

# 7. ಯೇಸು ಕ್ರಿಸ್ತರು ತಿರುಗಿ ಬರುತ್ತಾರೆ

**ಯೇಸು ಕ್ರಿಸ್ತರು ಸ್ವರ್ಗಾರೋಹಣವಾಗುವಾಗ ದೇವದೂತರು ಆತನ ಶಿಷ್ಯರಿಗೆ ಹೇಳಿದ್ದು–**

ಗಲಿಲಾಯದವರೇ, ನೀವು ಏಕೆ ಆಕಾಶದ ಕಡೆಗೆ ನೋಡುತ್ತಾ ನಿಂತಿದ್ದೀರಿ? ಈ ಯೇಸು ಕ್ರಿಸ್ತರು ಯಾವ ರೀತಿ ಆಕಾಶದೊಳಕ್ಕೆ ಹೋಗಿರುವುದನ್ನು ನೀವು ಕಂಡಿರೋ ಅದೇ ರೀತಿಯಲ್ಲಿ ತಿರುಗಿ ಬರುತ್ತಾರೆ ಎಂದು ಹೇಳಿದರು. (ಅಪೊಸ್ತಲರ ಕೃತ್ಯಗಳು 1:9–11)

ಯೇಸುವು ದೇವರ ಪ್ರಭಾವದೊಡನೆ ತನ್ನ ದೂತರ ಸಮೇತರಾಗಿ ಬೇಗನೆ ಬರುತ್ತಾರೆ. ಬಂದು ಪ್ರತಿಯೊಬ್ಬನಿಗೆ ಅವನವನ ನಡತೆಯ ಪ್ರಕಾರ ತಕ್ಕ ಪ್ರತಿಫಲವನ್ನು ಕೊಡುತ್ತಾರೆ. ಮರಣದ ಮತ್ತು ಪಾತಾಳದ ಬೀಗದ ಕೈಗಳು ಅವರ ಕೈಯಲ್ಲಿವೆ. (ಮತ್ತಾಯ 16:27, ಪ್ರಕಟನೆ 1:18)

ಕ್ರಿಸ್ತರು ತಾವೇ ಆಜ್ಞಾಘೋಷದೊಡನೆಯೂ ಪ್ರಧಾನ ದೂತನ ಶಬ್ದದೊಡನೆಯೂ ದೇವರ ತುತ್ತೂರಿ ಧ್ವನಿಯೊಡನೆಯೂ ಆಕಾಶದಿಂದ ಇಳಿದು ಬರುವರು; ಆಗ ಕ್ರಿಸ್ತರನ್ನು ನಂಬಿ ಸತ್ತಿರುವವರು ಮೊದಲು ಎದ್ದು ಬರುವರು. ಆಮೇಲೆ ಜೀವದಿಂದುಳಿದಿರುವ ನಾವು ಅಂತರಿಕ್ಷದಲ್ಲಿ ಕ್ರಿಸ್ತರನ್ನು ಎದುರುಗೊಳ್ಳುವುದಕ್ಕಾಗಿ ಅವರ ಸಂಗಡವೇ ಮೇಘ ವಾಹನರಾಗಿ ಫಕ್ಕನೆ ಒಯ್ಯಲ್ಪಡುವೆವು; ಹೀಗಾಗಿ ನಾವು ಸದಾಕಾಲವೂ ಕ್ರಿಸ್ತರ ಜೊತೆಯಲ್ಲಿರುವೆವು. (1 ಥೆಸಲೋನಿಕ 4:16–17)

ಆದ ಕಾರಣ ನೀವೂ ಸಹ ಸಿದ್ಧವಾಗಿರಿ, ನೀವು ನೆನಸದ ಗಳಿಗೆಯಲ್ಲಿ ಯೇಸು ಕ್ರಿಸ್ತರು ತಿರುಗಿ ಬರುತ್ತಾರೆ. ಅತಿಭೋಜನದ ಮದದಿಂದಲೂ, ಅಮಲಿನಿಂದಲೂ ಪ್ರಪಂಚದ ಚಿಂತೆಗಳಿಂದಲೂ ನಿಮ್ಮ ಹೃದಯಗಳು ಭಾರವಾಗಿರಲಾಗಿ ಆ ದಿನವು ನಿಮ್ಮ ಮೇಲೆ ಉರ್ಲಿನಂತೆ ಫಕ್ಕನೆ ಬಂದೀತು, ಎಚ್ಚರವಾಗಿರಿ. (ಲೂಕ 21:34–35)

~*~*~*~*~



# 8. ಪಾಪ ವಿಮೋಚನೆಯು ಯಾರಿಂದ?

ಪುರಾತನ ಕಾಲದಿಂದಲೂ ನಮ್ಮ ಭಾರತ ದೇಶವು ನಾಗರಿಕತೆಗೆ ಹೆಸರುವಾಸಿಯಾಗಿದೆ. ಹಿಂದೆ ನಮ್ಮ ಋಷಿಗಳು, ಹಿರಿಯರು ಜ್ಞಾನದಲ್ಲಿ ಪ್ರಖ್ಯಾತಿ ಹೊಂದಿದವರಾಗಿದ್ದರು. ಇದಕ್ಕೆ ಉದಾಹರಣೆಯಾಗಿ ಬೃಹದಾರಣ್ಯಕ ಉಪನಿಷತ್ 1:3:28 ರಲ್ಲಿ ಅವರ ಒಂದು ಅರ್ಥಗರ್ಭಿತ ಪ್ರಾರ್ಥನೆ ಹೀಗಿದೆ.

**असतो मा सद्गमय ।**

**तमसो मा ज्योतिर्गमय ।**

**मृत्योर्मा अमृतं गमय ।**

**ॐ शान्तिः शान्तिः शान्तिः ॥**

***Asato ma Sadgamaya |***
***Tamaso ma Jyotirgamaya |***
***Mrityorma Amritamgamaya |***
***Om Shanti, Shanti, Shantihi! ||***

***ಅಸತೋ ಮಾ ಸದ್ಗಮಯ । – ದೇವಾ ನನ್ನನ್ನು ಅಸತ್ಯದಿಂದ ಸತ್ಯಕ್ಕೂ***
***ತಮಸೋ ಮಾ ಜ್ಯೋತಿರ್ಗಮಯ । – ಕತ್ತಲೆಯಿಂದ ಬೆಳಕಿಗೂ***
***ಮೃತ್ಯೋರ್ಮಾ ಅಮೃತಂಗಮಯ । – ಮರಣದಿಂದ ನಿತ್ಯ ಜೀವಕ್ಕೂ***
***ಓಂ ಶಾಂತಿಃ ಶಾಂತಿಃ ಶಾಂತಿಃ ॥ – ಅಶಾಂತಿಯಿಂದ ಸಮಾಧಾನಕ್ಕೆ ನಡೆಸು***

ಯೇಸು ಕ್ರಿಸ್ತರು ಹೇಳಿರುವುದು: **'ನಾನೇ ಮಾರ್ಗವೂ, ಸತ್ಯವೂ, ಜೀವವೂ ಆಗಿದ್ದೇನೆ. ನನ್ನ ಮೂಲಕವಾಗಿ ಹೊರತು ಯಾರೂ ತಂದೆ(ದೇವರ)ಯ ಬಳಿಗೆ (ಸ್ವರ್ಗಕ್ಕೆ) ಬರುವುದಿಲ್ಲ.'** (ಯೋಹಾನ 14:6)

ಯೇಸು ಕ್ರಿಸ್ತರು ಈ ರೀತಿಯಾಗಿ 'ನಾನೇ' ಎಂದು ಹೇಳಿರುತ್ತಾರೆ. ಈ ರೀತಿ ಹೇಳಬೇಕಾದರೆ ಆತನು ವಂಚಕನೋ? ಮಾನಸಿಕ ಅಸ್ವಸ್ಥನೋ? ಅಥವಾ ಸತ್ಯವನ್ನೇ ಹೇಳಿರುವನೋ? ಈ ಬಗ್ಗೆ ಮುಂದಿನ ಪುಟಗಳನ್ನು ನೋಡಿ ತಾವೇ ತೀರ್ಮಾನಿಸಿಕೊಳ್ಳಿರಿ.

# 9. ಪವಿತ್ರ ಸತ್ಯವೇದದ ಚರಿತ್ರೆ

ಬೈಬಲ್ ಎಂಬ ಶಬ್ಧವು ಗ್ರೀಕ್ ಶಬ್ಧದ ಬಿಬ್ಲಿಯಾಸ್ ಎಂಬುವುದರಿಂದ ಬಂದಿರುತ್ತದೆ. ಬಿಬ್ಲಿಯಾಸ್ ಎಂದರೆ ಪುಸ್ತಕಗಳು ಅಥವಾ ಸುರುಳಿಗಳು ಎಂದರ್ಥ. ಇಂತಹ ಪುಸ್ತಕಗಳ/ಸುರುಳಿಗಳ ಸಮುಚ್ಚಯವೇ ಬೈಬಲ್/ಸತ್ಯವೇದ ಆಗಿರುತ್ತದೆ. ಇದು ವಿವಿಧ ಹಿನ್ನೆಲೆಗಳುಳ್ಳ 40 ಕ್ಕೂ ಹೆಚ್ಚಿನ ಗ್ರಂಥಕರ್ತರಿಂದ ಸುಮಾರು 1600 ವರ್ಷಗಳ ಅವಧಿಯಲ್ಲಿ ಬರೆಯಲ್ಪಟ್ಟ ಸುರುಳಿಗಳ ಅತೀ ಪುರಾತನ ಸಂಗ್ರಹವಾಗಿರುತ್ತದೆ. ಸತ್ಯವೇದದಲ್ಲಿನ ಕೆಲವು ಭಾಗಗಳು ಬಾಯಿಂದ ಬಾಯಿಗೆ ಬಂದಂತಹ ವಿಷಯಗಳಾಗಿದ್ದು ನಂತರ ಬೇರೆ ಬೇರೆ ಸಾಧನಗಳ ಮೇಲೆ ಬರೆಯಲ್ಪಟ್ಟಿರುತ್ತದೆ. ಇದು ಆಫ್ರಿಕಾ, ಏಷ್ಯಾ ಮತ್ತು ಯೂರೋಪ್ ಖಂಡಗಳಲ್ಲಿ ಹದಮಾಡಿದ ಪ್ರಾಣಿಗಳ ಚರ್ಮ, ಜೊಂಡು ಹುಲ್ಲಿನಲ್ಲಿ ತಯಾರಿಸಿದ ಸುರುಳಿಗಳಲ್ಲಿ ಹಾಗೂ ಕಲ್ಲಿನ ಮೇಲೆ ಇಬ್ರಿಯ, ಅರಮಾಯ ಮತ್ತು ಗ್ರೀಕ್ ಭಾಷೆಗಳಲ್ಲಿ ಬರೆಯಲಾಗಿದ್ದು ಈ ಸುರುಳಿಗಳನ್ನು ಪುಸ್ತಕಗಳಂತೆ ಜೋಡಿಸಲು ಆಗುತ್ತಿರಲಿಲ್ಲ ಏಕೆಂದರೆ ಅವುಗಳು ವಿವಿಧ ಅಳತೆಯಲ್ಲಿದ್ದವು ಹಾಗೂ ಗ್ರೀಕ್ ಭಾಷೆಯನ್ನು ಎಡದಿಂದ ಬಲಕ್ಕೂ, ಇಬ್ರಿಯ ಭಾಷೆಯನ್ನು ಬಲದಿಂದ ಎಡಕ್ಕೂ ಬರೆಯುತ್ತಿದ್ದರು.

ಕ್ರಿಸ್ತ ಶಕ 13 ನೇ ಶತಮಾನದಲ್ಲಿ ಕಾಗದವನ್ನು ತಯಾರಿಸುವ ವಿಧಾನವನ್ನು ಕಂಡುಹಿಡಿಯಲಾಯಿತು. 1382 ರಲ್ಲಿ ಜಾನ್ ವಿಕ್ಲಿಫ್ ಎಂಬಾತನು ಮೊದಲನೇ ಇಂಗ್ಲೀಷ್ ಬೈಬಲ್‌ಅನ್ನು ಪ್ರಕಟಿಸಿದನು. ಪ್ರಪಂಚದ ಇತಿಹಾಸದಲ್ಲೇ 1456 ರಲ್ಲಿ ಮೊಟ್ಟಮೊದಲಿಗೆ ಮುದ್ರಿಸಲ್ಪಟ್ಟ ಗ್ರಂಥ ಲ್ಯಾಟಿನ್ ಭಾಷೆಯ ಪವಿತ್ರ ಸತ್ಯವೇದ. ಭಾರತದಲ್ಲಿ ಮೊದಲ ಸತ್ಯವೇದ 1727 ರಲ್ಲಿ ತಮಿಳು ಭಾಷೆಯಲ್ಲಿ ಪ್ರಕಟವಾಯಿತು. ವಿಲಿಯಂ ಕೇರಿ ಎಂಬುವವರು 1823 ರಲ್ಲಿ ಪ್ರಾರಂಭಿಸಿದ ಕನ್ನಡ ಸತ್ಯವೇದವನ್ನು 1865 ರಲ್ಲಿ ಜಾನ್‌ಹಾಂಡ್ಸ್ ಎಂಬ ಆಂಗ್ಲ ಪಂಡಿತನು ಬಳ್ಳಾರಿಯಲ್ಲಿ ಅಂತಿಮಗೊಳಿಸಿದನು.

ಸತ್ಯವೇದದಲ್ಲಿನ ಎಲ್ಲಾ ಅಧ್ಯಾಯಗಳು ವಿಶೇಷವಾದ ಐಕ್ಯತೆಯನ್ನು ಹೊಂದಿದ್ದು ವೈಜ್ಞಾನಿಕ, ಚಾರಿತ್ರಿಕ, ಪುರಾತತ್ವ ಮತ್ತು ಪ್ರವಾದನೆಗಳ ನೆರವೇರುವಿಕೆ ಇನ್ನಿತರೆ ವಿಷಯಗಳಲ್ಲಿ ಯಾವುದೇ ವ್ಯತಿರಿಕ್ತ ಅಭಿಪ್ರಾಯಗಳನ್ನು ಒಳಗೊಂಡಿರುವುದಿಲ್ಲ. ಸತ್ಯವೇದದಲ್ಲಿ ಬರೆಯಲ್ಪಟ್ಟ ಪ್ರತಿಯೊಬ್ಬ ವ್ಯಕ್ತಿ, ಸ್ಥಳ ಮತ್ತು ಸಂದರ್ಭವನ್ನು ನಾವು ಇಂದಿಗೂ ಚರಿತ್ರೆಯಲ್ಲಿ ನೋಡಬಹುದು. ಪವಿತ್ರ ಸತ್ಯವೇದವು ಸಜೀವವಾದದ್ದು, ಕಾರ್ಯಸಾಧಕವಾದದ್ದು, ಯಾವ ಇಬ್ಬಾಯಿಕತ್ತಿಗಿಂತಲೂ ಹರಿತವಾದದ್ದು ಆಗಿರುತ್ತದೆ. ನಮ್ಮ ಜೀವಿತದ ಪ್ರತಿಯೊಂದು ಪ್ರಶ್ನೆಗೂ ಸಮಾಧಾನ ನೀಡುತ್ತದೆ. ಬಾಧೆಗಳಲ್ಲಿ ಆದರಣೆ



ನೀಡುತ್ತದೆ. ಮಾನವ ಸಂಸ್ಕೃತಿಯ ಇತಿಹಾಸ ನಿರ್ಮಾಣದಲ್ಲಿ ಇದು ಪ್ರಮುಖ ಪಾತ್ರ ವಹಿಸಿದ್ದು ಎಲ್ಲಾ ಕಾಲ/ದೇಶ/ಸಂಸ್ಕೃತಿಗಳಿಗೂ ಅನ್ವಯಿಸುವುದು. ಆದ್ದರಿಂದ ಇದರ ಗ್ರಂಥಕರ್ತನು ದೇವರೆಂದು ನಂಬಬಹುದಾಗಿದೆ. ಪ್ರಸ್ತುತ ಇದು ಸುಮಾರು 3000 ಭಾಷೆಗಳಲ್ಲಿ ಭಾಷಾಂತರಗೊಂಡಿದ್ದು ಪ್ರಪಂಚದಲ್ಲಿನ 95% ರಷ್ಟು ಜನರು ಅವರ ಮಾತೃ ಭಾಷೆಯಲ್ಲಿಯೇ ಸತ್ಯವೇದವನ್ನು ಓದಬಹುದಾಗಿರುತ್ತದೆ. ಚಂದ್ರ ಗ್ರಹದ ಮೇಲೂ ಸಹ ಇದನ್ನು ಭದ್ರವಾಗಿ ಇಡಲಾಗಿರುತ್ತದೆ. ಪ್ರತಿ ವ್ಯಕ್ತಿ/ಕ್ರೈಸ್ತ ಕುಟುಂಬವೂ ವೈಯುಕ್ತಿಕ ಬೈಬಲ್ ಹೊಂದಿದ್ದು, ಪ್ರತಿ ವರ್ಷ ಕೋಟಿಗಟ್ಟಲೇ ಪ್ರತಿಗಳು ಮಾರಾಟವಾಗುತ್ತಿದೆ. ಆದ್ದರಿಂದ ಇದು ಸತ್ಯವೆಂದು ನಂಬಬಹುದಾಗಿರುತ್ತದೆ.

ನಮ್ಮ ದೇಶದ ನೋಟಿನ ಮೇಲೆ ಕ್ರಿಸ್ತ ಪೂರ್ವ ಸುಮಾರು 400 ವರ್ಷಗಳ ಹಿಂದೆ ನಮ್ಮ ದೇಶವನ್ನು ಆಳಿದ ಅಶೋಕ ಚಕ್ರವರ್ತಿಯ ಸ್ಥಂಭವಿದ್ದು ಆ ಸ್ಥಂಭದ ಕೆಳಗೆ ಅಥರ್ವಣವೇದದ ಮಂಡಕೋಪನಿಷತ್‌ನಲ್ಲಿನ ***'ಸತ್ಯಮೇವ ಜಯತೆ'*** (***Truth Alone Triumphs***) ಎಂಬ ಧ್ಯೇಯವಾಕ್ಯ (ಘೋಷಣೆ) ಇರುತ್ತದೆ. ಅದರ ಅರ್ಥವೇನೆಂದರೆ ಸತ್ಯವೇ ಜಯಿಸುತ್ತದೆ ಹಾಗೂ ಉಳಿಯುತ್ತದೆ ಎಂಬುದಾಗಿರುತ್ತದೆ. ಒಂದು ವೇಳೆ ಯೇಸು ಕ್ರಿಸ್ತರು ವಂಚಕರಾಗಿದ್ದು ಅವರ ಮಾತುಗಳು ಸುಳ್ಳಾಗಿದ್ದಲ್ಲಿ ಅವು ಇಂದಿನವರೆಗೆ ಉಳಿಯುತ್ತಿರಲಿಲ್ಲ. ಆತನ ಬೋಧನೆಗಳು ಇಂದು ಜಗತ್ತಿನಾದ್ಯಂತ ವ್ಯಾಪಿಸಿದ್ದು ಅಸಂಖ್ಯ ಜನರ ಜೀವನಗಳನ್ನು ಸನ್ಮಾರ್ಗಕ್ಕೆ ನಡೆಸಿರುತ್ತದೆ.

ಜಗತ್ತಿನಲ್ಲಿ ಇಂದಿಗೂ ಸಹ ಕ್ರಿಸ್ತರನ್ನು ಅಂದರೆ ಪವಿತ್ರ ಸತ್ಯವೇದವನ್ನು ಅನುಸರಿಸುವವರೇ ಬಹುಸಂಖ್ಯಾತರಾಗಿರುತ್ತಾರೆ. ಜಾತಿ, ಕುಲ, ಮತ ಬೇಧಗಳಿಲ್ಲದೇ ಎಲ್ಲಾ ಜನರು ಓದುತ್ತಿರುವ ಏಕೈಕ ಗ್ರಂಥ ಪವಿತ್ರ ಸತ್ಯವೇದ ಆಗಿರುತ್ತದೆ. ಎಷ್ಟೇ ಅಡ್ಡಿ/ಹಿಂಸೆಗಳು ಬಂದರೂ ಈ ಭೂಮಿ ಆಕಾಶಗಳು ನಾಶವಾಗಿ ಹೋದರೂ ಆತನ ಉಪದೇಶಗಳು ಅಳಿದು ಹೋಗುವುದಿಲ್ಲವೆಂದು ಹೇಳುವಲ್ಲಿ ನಾನು ನನ್ನ ಹದ್ದುಮೀರಿ ಮಾತನಾಡುತ್ತಿಲ್ಲ ಎಂದೆನಿಸುತ್ತದೆ, ಏಕೆಂದರೆ ಅವು ಸತ್ಯವಾದವುಗಳೇ ಆಗಿರುತ್ತವೆ.

ಪವಿತ್ರ ಸತ್ಯವೇದದ ಬೋಧನೆಯನ್ನು ಅನುಸರಿಸುವ ಪ್ರತಿಯೊಬ್ಬನು ಪ್ರೀತಿ, ದಯೆ, ಸಹೋದರತ್ವ ಈ ಮೊದಲಾದ ದೈವಿಕ ಗುಣಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಮುಕ್ತಿಯನ್ನು ಸಂಪಾದಿಸಿಕೊಳ್ಳುತ್ತಾರೆ. ಹಾಗೂ ಸ್ವಾಮಿ ವಿವೇಕಾನಂದರು, ಮಹಾತ್ಮ ಗಾಂಧೀಜಿಯವರು ಮತ್ತು ಮದರ್ ತೆರೆಸಾ ರವರಂತೆ ಆದರ್ಶ ವ್ಯಕ್ತಿಗಳಾಗಿ ಬಾಳಿ ಸಮಾಜಕ್ಕೆ ಉತ್ತಮ ಕೊಡುಗೆಗಳನ್ನು ನೀಡುತ್ತಾರೆ.



## ಮಹಾತ್ಮ ಗಾಂಧೀಜಿಯವರ ಸಾಕ್ಷಿ:

**ಮಾನವರಿಗೆ ಲಭಿಸಿದ ಅತ್ಯುತ್ತಮ ಗುರುಗಳಲ್ಲಿ ಯೇಸು ಕ್ರಿಸ್ತರು ಒಬ್ಬರು. ಪರಮಾತ್ಮನೊಂದಿಗೆ ಕ್ರಿಸ್ತರಿಗಿರುವ ಸಾಮಿಪ್ಯಕ್ಕೆ ಆತನ ಜೀವಿತವೇ ನಿದರ್ಶನವಾಗಿದೆ. ಪರಮಾತ್ಮನ ಸಂಕಲ್ಪವನ್ನು, ಶಕ್ತಿಯನ್ನು ಯೇಸು ಬಹಿರಂಗಪಡಿಸಿದಂತೆ ಬೇರೆ ಯಾರೂ ಬಹಿರಂಗಪಡಿಸಲಿಲ್ಲ. ಆದ್ದರಿಂದಲೇ ನಾವು ಆತನನ್ನು ದೇವಕುಮಾರನೆಂದು ಭಾವಿಸುತ್ತೇವೆ. – ಮಹಾತ್ಮ ಗಾಂಧೀಜಿ**

ಒಮ್ಮೆ ಒಬ್ಬ ಬಿಳಿಯ ಮನುಷ್ಯನು ಗಾಂಧೀಜಿಯವರನ್ನು ನೋಡಿ 'ನೀವು ಹೇಗೆ ಭಾರತಕ್ಕೆ ಸ್ವಾತಂತ್ರವನ್ನು ತಂದು ಕೊಡುವಿರಿ?' ಎಂದು ಕೇಳಿದಾಗ, ಅವರು ಶಾಂತತೆಯಿಂದ, ಪವಿತ್ರ ಸತ್ಯವೇದದಲ್ಲಿನ ಮತ್ತಾಯ 5 ನೇ ಅಧ್ಯಾಯವನ್ನು ತೆರೆದು ತೋರಿಸಿ, 'ಶಾಂತರು ಧನ್ಯರು; ಅವರು ಭೂಮಿಗೆ ಬಾಧ್ಯರಾಗುವರು' ಎಂಬುದನ್ನು ನೀವು ಓದಲಿಲ್ಲವೇ? ನಾನು ಶಾಂತ ಗುಣವುಳ್ಳವನಾಗಿದ್ದು ಯಾಕೆ ಭಾರತವನ್ನು ಸ್ವತಂತ್ರಿಸಿಕೊಳ್ಳಲು ಸಾಧ್ಯವಿಲ್ಲ? ಎಂದು ಕೇಳಿದರು. ಅದೇ ರೀತಿಯಾಗಿ ನಮ್ಮ ದೇಶಕ್ಕೆ ಸ್ವಾತಂತ್ರ ಸಿಕ್ಕಿದ್ದು ಕ್ರಿಸ್ತರು ಬೋಧಿಸಿ ತಮ್ಮ ಜೀವನದಲ್ಲಿ ಅಳವಡಿಸಿಕೊಂಡಿದ್ದಂತಹ ಅಹಿಂಸಾ ಮಾರ್ಗದಿಂದಲೇ, ಇಲ್ಲದಿದ್ದರೆ ಇನ್ನು ಎಷ್ಟೋ ಮಂದಿ ನಮ್ಮ ದೇಶ ಪ್ರೇಮಿಗಳು ಹುತಾತ್ಮರಾಗಬೇಕಾಗಿತ್ತು. ಅದರಿಂದಾಗಿ ಗಾಂಧೀಜಿಯವರು ಮಹಾತ್ಮ ಎಂಬ ಬಿರುದಿನೊಂದಿಗೆ ರಾಷ್ಟ್ರಪಿತ ಎಂದೂ ಕರೆಯಲ್ಪಟ್ಟರು ಹಾಗೂ ನಮ್ಮ ದೇಶದ ರೂಪಾಯಿಯ ಮೇಲೆ ಅವರ ಭಾವಚಿತ್ರ ಇರುತ್ತದೆ.

ಮಹಾತ್ಮ ಗಾಂಧೀಜಿಯವರ ಹತ್ಯೆಯಾದಾಗ ಅವರು ಯಾವುದೇ ದೇಶದ ಪ್ರಧಾನಿ ಅಥವಾ ಅಧ್ಯಕ್ಷರಾಗಿರಲಿಲ್ಲ ಅವರಿಗೆ ಸ್ವಂತ ಮನೆ ಇರಲಿಲ್ಲ ಬ್ಯಾಂಕಿನಲ್ಲಿ ಒಂದು ಖಾತೆ ಸಹ ಇರಲಿಲ್ಲ ಅವರಿಗೆ ಇದ್ದ ಆಸ್ತಿಯೆಂದರೆ ಒಂದಿಷ್ಟು ಬಟ್ಟೆ, ಒಂದು ಜೊತೆ ಚಪ್ಪಲಿ ಮತ್ತು ಒಂದು ಗಡಿಯಾರ ಅಷ್ಟೇ. ಆತ ನೋಡಲು ಮನಮೋಹಕನೂ ಅಲ್ಲ; ಅರೆಬೆತ್ತಲೆ ಫಕೀರ ಎಂದು ಕರೆಸಿಕೊಂಡ ಒಬ್ಬ ವಯೋವೃದ್ಧನ ಹತ್ಯೆಯಾದಾಗ ಅಮೇರಿಕಾ ದೇಶದ ನ್ಯೂಯಾರ್ಕ್ ಪಟ್ಟಣದಲ್ಲಿರುವ ವಿಶ್ವಸಂಸ್ಥೆ ಕಟ್ಟಡದ ಮೇಲಿನ 55 ದೇಶಗಳ ರಾಷ್ಟ್ರ ಧ್ವಜಗಳನ್ನು ಅರ್ಧಕ್ಕೆ ಇಳಿಸಿ ಗೌರವ ಸಲ್ಲಿಸಿ ಸಂತಾಪ ಸೂಚಿಸ ಲಾಗಿರುತ್ತದೆ. ಅಂಥಹ ಗೌರವ ಜಗತ್ತಿನಲ್ಲಿ ಈ ವರೆಗೆ ಯಾರಿಗೂ ಸಿಕ್ಕಿರುವುದಿಲ್ಲ. ಇದು ಪ್ರತಿಯೊಬ್ಬ ಭಾರತೀಯನೂ ಹೆಮ್ಮೆಪಡುವ ವಿಷಯ, ಇಂದು ಅವರ ಜನ್ಮ ದಿನಾಚರಣೆಯನ್ನು ಅನೇಕ ದೇಶಗಳು ಆಚರಣೆ ಮಾಡುತ್ತವೆ.



## 10. ಭೋಗಪುರುಷನು-ಭಿಕ್ಷಗಾರನು ಇವರ ದೃಷ್ಟಾಂತ

ಐಶ್ವರ್ಯವಂತನಾದ ಒಬ್ಬ ಮನುಷ್ಯನಿದ್ದನು. ಅವನು ಸಕಲಾತಿ ನಯವಾದ ನಾರುಮಡಿ ಮುಂತಾದ ವಸ್ತ್ರಗಳನ್ನು ಧರಿಸಿಕೊಂಡು ಪ್ರತಿದಿನವೂ ವೈಭವದೊಡನೆ ಸುಖ ಸಂತೋಷಪಡುತ್ತಿದ್ದನು. ಅವನ ಮನೆ ಬಾಗಿಲಲ್ಲಿ ಲಾಜರನೆಂಬ ಒಬ್ಬ ಭಿಕ್ಷುಕನು ಬಿದ್ದುಕೊಂಡಿದ್ದನು. ಇವನು ಮೈತುಂಬಾ ಹುಣ್ಣೆದ್ದವನು; ಐಶ್ವರ್ಯವಂತನ ಮೇಜಿನಿಂದ ಬಿದ್ದ ಎಂಜಲನ್ನು ತಿಂದು ಹಸಿವು ತೀರಿಸಿಕೊಳ್ಳಬೇಕೆಂದಿದ್ದನು; ಇಷ್ಟು ಮಾತ್ರವಲ್ಲದೆ ನಾಯಿಗಳು ಸಹ ಬಂದು ಅವನ ಹುಣ್ಣುಗಳನ್ನು ನೆಕ್ಕುತ್ತಿದ್ದವು.

ಹೀಗಿರುವಲ್ಲಿ ಸ್ವಲ್ಪಕಾಲದ ಮೇಲೆ ಆ ಭಿಕ್ಷುಕನು ಸತ್ತನು; ದೇವದೂತರು ಅವನನ್ನು ತೆಗೆದುಕೊಂಡು ಹೋಗಿ ಸ್ವರ್ಗದಲ್ಲಿರುವ ಮೂಲಪಿತೃವಾದ ಅಬ್ರಹಾಮನ ಎದೆಗೆ ಒರಗಿಸಿದರು. ಆ ಐಶ್ವರ್ಯವಂತನು ಸಹ ಸತ್ತನು; ಅವನಿಗೆ ಉತ್ತರಕ್ರಿಯೆಗಳು ಆದವು. ಅವನು ನರಕದೊಳಗೆ ಯಾತನೆ ಪಡುತ್ತಾ ಇರುವಲ್ಲಿ ಕಣ್ಣೆತ್ತಿ ದೂರದಿಂದ ಅಬ್ರಹಾಮನನ್ನೂ ಅವನ ಎದೆಗೆ ಒರಗಿಕೊಂಡಿದ್ದ ಲಾಜರನನ್ನೂ ನೋಡಿ– ತಂದೆಯೇ, ಅಬ್ರಹಾಮನೇ, ನನ್ನ ಮೇಲೆ ದಯವಿಟ್ಟು ಲಾಜರನನ್ನು ಕಳುಹಿಸು; ಅವನು ತನ್ನ ತುದಿಬೆರಳನ್ನು ನೀರಿನಲ್ಲಿ ಅದ್ದಿ ನನ್ನ ನಾಲಿಗೆಯನ್ನು ತಣ್ಣಗೆ ಮಾಡಲಿ; ಈ ಉರಿಯಲ್ಲಿ ಸಂಕಟಪಡುತ್ತಿದ್ದೇನೆ ಎಂದು ಕೂಗಿ ಹೇಳಿದನು.

ಆದರೆ ಅಬ್ರಹಾಮನು– ಕಂದಾ, ನೀನು ಆಶಿಸಿದ ಸುಖವನ್ನು ನಿನ್ನ ಜೀವಮಾನದಲ್ಲಿ ಹೊಂದಿರುವಿ; ಹಾಗೆಯೇ ಲಾಜರನು ಕಷ್ಟವನ್ನು ಹೊಂದಿದನು ಎಂಬುದನ್ನು ನೆನಪಿಗೆ ತಂದುಕೋ. ಈಗಲಾದರೋ ಇಲ್ಲಿ ಇವನಿಗೆ ಸಮಾಧಾನ, ಆದರೆ ನಿನಗೆ ಸಂಕಟ ಇದು ಮಾತ್ರವಲ್ಲದೆ ನಮಗೂ ನಿಮಗೂ ನಡುವೆ ದೊಡ್ಡದೊಂದು ಡೊಂಗರ(ಬಿರುಕು) ಸ್ಥಾಪಿಸಿದೆ; ಆದಕಾರಣ ಈ ಕಡೆಯಿಂದ ನಿಮ್ಮ ಬಳಿಗೆ ಹೋಗಬೇಕೆಂದಿರುವವರು ಹೋಗಲಾರರು; ಮತ್ತು ಆ ಕಡೆಯಿಂದ ನಮ್ಮ ಬಳಿಗೆ ಯಾರೂ ದಾಟುವುದಕ್ಕಾಗದು ಅಂದನು.

ಆಗ ಅವನು– ಅಪ್ಪಾ, ಹಾಗಾದರೆ ಲಾಜರನನ್ನು ನನ್ನ ತಂದೆಯ ಮನೆಗೆ ಕಳುಹಿಸಬೇಕೆಂದು ನಿನ್ನನ್ನು ಬೇಡಿಕೊಳ್ಳುತ್ತೇನೆ. ನನಗೆ ಐದು ಮಂದಿ ಅಣ್ಣತಮ್ಮಂದಿರಿದ್ದಾರೆ; ಅವರು ಸಹ ಈ ಯಾತನೆಯ ಸ್ಥಳಕ್ಕೆ ಬಂದಾರು; ಬಾರದಂತೆ ಅವನು ತಾನು ಕಂಡದ್ದನ್ನು ಅವರಿಗೆ ಚೆನ್ನಾಗಿ ಹೇಳಲಿ ಅಂದನು. ಆದರೆ ಅಬ್ರಹಾಮನು– ಮೋಶೆಯ ಧರ್ಮಶಾಸ್ತ್ರವೂ ಪ್ರವಾದಿಗಳ ಗ್ರಂಥಗಳೂ

ಅವರಲ್ಲಿ ಇವೆ; ಅವುಗಳನ್ನು ಕೇಳಲಿ ಅನ್ನಲು ಅವನು– ತಂದೆಯೇ, ಅಬ್ರಹಾಮನೇ, ಹಾಗಲ್ಲ; ಸತ್ತವರ ಕಡೆಯಿಂದ ಒಬ್ಬನು ಅವರ ಬಳಿಗೆ ಹೋದರೆ ಅವರು ದೇವರ ಕಡೆಗೆ ತಿರುಗಿಕೊಳ್ಳುವರು ಅಂದನು. ಅಬ್ರಹಾಮನು ಅವನಿಗೆ– ಅವರು ಮೋಶೆಯ ಮಾತನ್ನೂ ಪ್ರವಾದಿಗಳ (ಪವಿತ್ರ ಸತ್ಯವೇದದ) ಮಾತನ್ನೂ ಕೇಳದಿದ್ದರೆ ಸತ್ತುಹೋಗಿದ್ದವನೊಬ್ಬನು ಜೀವಂತನಾಗಿ ಎದ್ದರೂ ಅವರು ಒಪ್ಪುವುದಿಲ್ಲ ಎಂದು ಹೇಳಿದನು. (ಲೂಕ 16:19–31)

## 11. ಯೇಸು ಕ್ರಿಸ್ತರು ಯಾರು? ಈ ಬಗ್ಗೆ ನಿಮ್ಮ ತೀರ್ಮಾನ?

ನನ್ನ ಪ್ರೀತಿಯ ಸಹೋದರ/ಸಹೋದರಿ, ಹಿಂದಿನ ಪುಟಗಳಲ್ಲಿ ನಾನು ವಿವರಿಸಿದ ಹಾಗೆ ತಾವು ಯೇಸು ಕ್ರಿಸ್ತರನ್ನು ಯಾರೆಂದು ತೀರ್ಮಾನ ಮಾಡುತ್ತೀರಿ. ವಂಚಕನೋ? ಮಾನಸಿಕ ಅಸ್ವಸ್ಥನೋ? ಅಥವಾ ಸತ್ಯದೇವರೋ? ಒಂದು ವೇಳೆ ತಾವು ಯೇಸು ಕ್ರಿಸ್ತರನ್ನು ಸತ್ಯದೇವರೆಂದು ತೀರ್ಮಾನಿಸುವುದಾದರೆ ನೀವೂ ಸಹ ಮುಕ್ತಿಯನ್ನು ಪಡೆಯಬಹುದು.

ಮುಕ್ತಿಯು ಮಾನವನಿಗೆ ಇರುವ ಸ್ಥಳ/ಪರಿಸ್ಥಿತಿಯಲ್ಲಿ ಕ್ಷಣಮಾತ್ರದಲ್ಲಿಯೇ ದೊರಕುವಂಥದ್ದಾಗಿರುತ್ತದೆ. ಅದಕ್ಕಾಗಿ ನಮ್ಮ ಆತ್ಮವು ಅನೇಕ ಜನ್ಮಗಳನ್ನು ತಾಳಬೇಕಾಗಿರುವುದಿಲ್ಲ ಹಾಗೂ ನಾವು ಯಾವುದೇ ರೀತಿಯ ದೇಹದಂಡನೆ, ತೀರ್ಥಯಾತ್ರೆ ಹಾಗೂ ದೀರ್ಘಕಾಲದ ಕಠಿಣವಾದ ಯಾವ ಕಾರ್ಯಗಳನ್ನು ಸಹ ಮಾಡುವ ಅಗತ್ಯವಿಲ್ಲ. ಅದು ಯಾವುದೇ ಜಾತಿ ಧರ್ಮ, ಸ್ತ್ರೀ–ಪುರುಷ ಎಂಬ ಭೇದಭಾವವಿಲ್ಲದೇ ಸಂಪೂರ್ಣ ಉಚಿತವಾಗಿ ದೊರಕುವಂಥದಾಗಿರುತ್ತದೆ. ಯಾಕೆಂದರೆ ಎಲ್ಲಾ ಮನುಷ್ಯರು ಮುಕ್ತಿಯನ್ನು ಹೊಂದಿ ಸತ್ಯದ ಜ್ಞಾನಕ್ಕೆ ಸೇರಬೇಕೆಂಬುದು ದೇವರ ಚಿತ್ತವೆಂದು ಪವಿತ್ರ ಸತ್ಯವೇದ ಹೇಳುತ್ತದೆ.

**ತಾವೂ ಸಹ ಮುಕ್ತಿಯನ್ನು ಹೊಂದಲು ಬಯಸಿದಲ್ಲಿ ದಯಮಾಡಿ ಈ ಕೆಳಕಂಡ ಪ್ರಾರ್ಥನೆಯನ್ನು ಮಾಡಿರಿ.**

ಕೃಪೆಯಲ್ಲಿ ಐಶ್ವರ್ಯವಂತರಾದ ಯೇಸು ಕ್ರಿಸ್ತರೇ, ತಾವು ನಮ್ಮನ್ನು ಪ್ರೀತಿಸಿ ನಮಗೆ ಮುಕ್ತಿಯನ್ನು ಅನುಗ್ರಹಿಸಲೆಂದೇ ಸುಮಾರು 2024 ವರ್ಷಗಳ ಹಿಂದೆ ಈ ಲೋಕಕ್ಕೆ ಬಂದಿದ್ದಕ್ಕಾಗಿ ವಂದನೆಗಳು. ತಮ್ಮ ಬಗ್ಗೆ ತಿಳಿದ ನಾನು ಪಾಪಿಯೆಂದು ಹಾಗೂ ಪರಿಶುದ್ಧರಾದ ತಾವು ಶಿಲುಬೆಯ ಮೇಲೆ ಯಾತನೆಯ ಶಿಕ್ಷೆಯನ್ನು ಅನುಭವಿಸಿದ್ದು ನನ್ನ ಪಾಪಗಳ ನಿಮಿತ್ತವೇ ಎಂಬುದನ್ನು ಒಪ್ಪಿಕೊಳ್ಳುತ್ತೇನೆ. ನನ್ನ ಪಾಪಗಳನ್ನು ಕ್ಷಮಿಸಿರಿ.



ತಾವು ನನಗಾಗಿ ಶಿಲುಬೆಯ ಮೇಲೆ ಸತ್ತು, ಹೂಣಲ್ಪಟ್ಟು ನಂತರ ಮೂರನೆಯ ದಿನದಲ್ಲಿ ಮೃತ್ಯುಂಜಯರಾಗಿ ಎದ್ದು ಬಂದಿರುವುದನ್ನು ನನ್ನ ಹೃದಯದಿಂದ ನಂಬಿ; ನೀವು ಸತ್ಯದೇವರೆಂದು ಬಾಯಿಂದ ಅರಿಕೆ ಮಾಡುತ್ತೇನೆ. ನನ್ನ ಹೆಸರನ್ನು ಮೋಕ್ಷಪ್ರಾಪ್ತರ ಪಟ್ಟಿಯಲ್ಲಿ ಸೇರಿಸಿದ್ದಕ್ಕಾಗಿ ವಂದನೆ. ಹಾಗೂ ತಾವು ತಿರುಗಿ ಬಂದು ನನ್ನನ್ನು ಸ್ವರ್ಗಲೋಕಕ್ಕೆ ಕರೆದುಕೊಂಡು ಹೋಗುತ್ತೀರೆಂದು ನಂಬಿ ನಿರೀಕ್ಷಿಸುತ್ತೇನೆ. ವಂದನೆಗಳು.

ಪುಟ ಸಂಖ್ಯೆ: 11 ರಲ್ಲಿ ವಿವರಿಸಲಾದಂತಹಾ ಸ್ವರ್ಗರಾಜ್ಯಕ್ಕೆ ಬಾಧ್ಯಸ್ಥರಾದ ತಮಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಮತ್ತು ಅಲ್ಲಿ ನನ್ನನ್ನು ನೆನಪು ಮಾಡಿಕೊಳ್ಳಿರಿ. ವಂದನೆಗಳು. **(ಎಸ್. ಗಿರಿ)**

~*~*~*~*~

## 12. ಯೇಸು ಕ್ರಿಸ್ತರು ಹೇಳಿರುವುದನ್ನು ನಾವು ಏಕೆ ನಂಬಬೇಕು

ಯೇಸು ಕ್ರಿಸ್ತರು ಒಬ್ಬ ಕಾಲ್ಪನಿಕ ವ್ಯಕ್ತಿಯಲ್ಲ. ಆತನು ಒಬ್ಬ ಚರಿತ್ರೆಯಲ್ಲಿನ ವ್ಯಕ್ತಿಯಾಗಿದ್ದು ಆತನು ಈ ಲೋಕಕ್ಕೆ ಬಂದಿದ್ದ ಬಗ್ಗೆ ಅನೇಕ ಆಧಾರಗಳಿವೆ. ಆತನು ಗಲಿಲಾಯ ಮತ್ತು ಜೆರೂಸಲೇಮ್ ಸೀಮೆಯನ್ನು ದಾಟಿದವನೂ ಅಲ್ಲ, ಮೂರು ದಶಕಗಳಿಗಿಂತ ಹೆಚ್ಚುಕಾಲ ಬದುಕಿ ಬಾಳಿದವನೂ ಅಲ್ಲ. ಆದರೂ ಆತನ ಹಾಗೆ ಚರಿತ್ರೆಯಲ್ಲಿ ಯಾರೂ ಇಷ್ಟೊಂದು ಪ್ರಭಾವ ಬೀರಿಲ್ಲ; ಹಾಗೂ ಆತನು ನಮ್ಮ ಏಷ್ಯಾ ಖಂಡದಲ್ಲಿಯೇ ಜನಿಸಿದವರಾಗಿರುತ್ತಾರೆ. ಆತನೊಂದಿಗಿದ್ದ 12 ಮಂದಿ ಅಪೋಸ್ತಲರಲ್ಲಿ ಇಬ್ಬರು ನಮ್ಮ ಭಾರತ ದೇಶಕ್ಕೆ ಭೇಟಿ ನೀಡಿರುತ್ತಾರೆ. ಹಾಗೂ ಕ್ರಿಸ್ತರ ಜನನದಿಂದಾಗಿ ಇಡೀ ಚರಿತ್ರೆಯೇ ಕ್ರಿಸ್ತ ಪೂರ್ವ (BC) ಹಾಗೂ ಕ್ರಿಸ್ತ ಶಕ (AD) ಎಂಬುದಾಗಿ ಇಬ್ಭಾಗವಾಗಿರುತ್ತದೆ. ಇದರಿಂದಾಗಿ ಹಾಗೂ ಈ ಕೆಳಕಂಡ ಕಾರಣಗಳಿಂದಾಗಿ ಅವರು ಸತ್ಯವನ್ನೇ ಹೇಳಿರುವವರು ಎಂದು ನಾವು ನಂಬಬಹುದಾಗಿರುತ್ತದೆ.

1) ಯೇಸು ಪರಿಪೂರ್ಣ ಪರಿಶುದ್ಧರಾಗಿದ್ದರು. (ಪುಟ ಸಂಖ್ಯೆ: 33 ನೋಡಿರಿ)
2) ಯೇಸು ನುಡಿದ ಹಾಗೆ ನಡೆದವರಾಗಿದ್ದು ಅವರ ಉಪದೇಶಗಳು ಇಡೀ ಜಗತ್ತನ್ನೇ ವ್ಯಾಪಿಸಿರುತ್ತವೆ. (ಪುಟ ಸಂಖ್ಯೆ: 36 ನೋಡಿರಿ)
3) ಅವರು ಪ್ರಕೃತಿ ಮತ್ತು ಮರಣದ ಮೇಲೆ ಅಧಿಕಾರ ಹೊಂದಿದ್ದು, ಎಲ್ಲಾ ತರಹದ ಅದ್ಭುತ ಸೂಚಕ ಕಾರ್ಯಗಳನ್ನು ಮಾಡಿರುತ್ತಾರೆ. (ಪುಟ ಸಂಖ್ಯೆ: 40 ನೋಡಿರಿ)

4) ಕ್ರಿಸ್ತರ ಮಾತುಗಳು ಹಾಗೂ ಕ್ರಿಯೆಗಳು ಅಧಿಕಾರದಿಂದ ಕೂಡಿದ್ದು ಶಿಲುಬೆಯ ಮೇಲೆ ಸುಮಾರು ಆರು ತಾಸು ಯಾತನೆಯನ್ನು ಅನುಭವಿಸುತ್ತಿರುವಾಗಲೂ ಸಹ ಅವರು ಮಾನಸಿಕ ಸೀಮಿತವನ್ನು ಕಳೆದುಕೊಳ್ಳದೆ ಏಳು ಮಾತುಗಳನ್ನು ಸ್ಪಷ್ಟವಾಗಿ ಆಡಿರುತ್ತಾರೆ. ಆದ್ದರಿಂದ ಅವರನ್ನು ಮಾನಸಿಕ ಅಸ್ವಸ್ಥರೆನ್ನಲು ಸಾಧ್ಯವೇ ಇಲ್ಲ. (ಪುಟ ಸಂಖ್ಯೆ: 55 ನೋಡಿರಿ)

5) ಎಷ್ಟೇ ಅಡೆತಡೆಗಳು ಸಂಕಟ ಹಿಂಸೆಗಳು ವಿರೋಧಗಳು ಬಂದರೂ ಆತನ ಉಪದೇಶಗಳನ್ನು ಸಾರುವ ಕಾರ್ಯ ನಿಂತು ಹೋಗಿಲ್ಲ ಹಾಗೂ ನಿಂತು ಹೋಗುವುದೂ ಇಲ್ಲ. (ಪುಟ ಸಂಖ್ಯೆ: 56 ನೋಡಿರಿ)

6) ಪವಿತ್ರ ಸತ್ಯವೇದವನ್ನು ನಂಬಿ ಅದರಲ್ಲಿನ ಬೋಧನೆಗಳನ್ನು ಕೈಗೊಂಡು ನಡೆದರೆ ದೈವಿಕ ಜ್ಞಾನ ದೊರೆಯುತ್ತದೆ. (ಪುಟ ಸಂಖ್ಯೆ: 68 ನೋಡಿರಿ)

~*~*~*~*~

**ಅಧ್ಯಾಯ 13 ರಿಂದ 20 ಗಳು ವಿವಿಧ ದಿನಪತ್ರಿಕೆಗಳಲ್ಲಿ ರಾಜ್ಯವ್ಯಾಪಿ ಪ್ರಕಟವಾದ ಲೇಖನಗಳಾಗಿದ್ದು ಅವುಗಳನ್ನು ತಮ್ಮ ಮಾಹಿತಿಗಾಗಿ ಈ ಪುಸ್ತಕದಲ್ಲಿ ಸೇರಿಸಲಾಗಿರುತ್ತದೆ.**

**ದಿ:25-12-2012 ರಂದು ಶಿವಮೊಗ್ಗ ಜಿಲ್ಲೆಯ ಸ್ಥಳೀಯ ದಿನಪತ್ರಿಕೆಗಳಲ್ಲಿ ಪ್ರಕಟವಾದ ಲೇಖನ**

# 13. ಯೇಸು ದೇವರು ಪರಿಶುದ್ಧರು

**“ನಾವು ಮಾನವ ರೂಪವನ್ನು ಧರಿಸಿರುವ ಯೇಸುವನ್ನೇ ದೇವರೆಂದು ಪೂಜಿಸಬೇಕು. ನೀವು ಯೇಸುವನ್ನು ಬಿಟ್ಟು ದೇವರನ್ನು ಕಲ್ಪಿಸಿಕೊಳ್ಳುವುದಕ್ಕೆ ಮಾಡುವ ಪ್ರಯತ್ನವೆಲ್ಲ ನಿಷ್ಫಲವಾಗುವುದು.” –ಸ್ವಾಮಿ ವಿವೇಕಾನಂದರು.**
**(ಕೃತಿಶ್ರೇಣಿ, ಸಂಪುಟ–7, ಪ್ರವಚನ ಸಾರಾಂಶ, ಪುಟ ಸಂಖ್ಯೆ : 331)**

**ಮಾನವರ ನಡುವೆ ವಾಸಿಸಿದ ಯೇಸು ಕ್ರಿಸ್ತರ ಪರಿಶುದ್ಧತೆ ಕುರಿತಾದ ಸಾಕ್ಷಿಗಳು ಪವಿತ್ರ ಸತ್ಯವೇದದಲ್ಲಿ ಈ ಕೆಳಗಿನಂತೆ ದಾಖಲಾಗಿರುತ್ತದೆ.**

➢ **ಯೇಸು ಕ್ರಿಸ್ತರ ಜನನದ ಕುರಿತು ದೇವದೂತನು ಕನ್ನಿಕೆಯಾದ ಮರಿಯಳಿಗೆ ಹೇಳಿದ್ದು–**
ನಿನ್ನ ಮೇಲೆ ಪವಿತ್ರಾತ್ಮ ಬರುವುದು; ಪರಾತ್ಪರನ ಶಕ್ತಿಯ ನೆರಳು ನಿನ್ನ ಮೇಲೆ ಬೀಳುವುದು; ಆದದರಿಂದ ಹುಟ್ಟುವ ಆ **ಪವಿತ್ರ ಶಿಶು** ದೇವರ ಮಗನೆನಿಸಿಕೊಳ್ಳುವುದು. (ಲೂಕ 1:35)



➢ **ಯೇಸು ಕ್ರಿಸ್ತರು ಪರಿಪೂರ್ಣ ಮಾನವನಾಗಿ ಜನಿಸಿ ಈ ಲೋಕದಲ್ಲಿ 33 ½ ವರ್ಷ ಜೀವಿಸಿದ್ದಾಗ–**
ಯೇಸು ಕ್ರಿಸ್ತರು ಸರ್ವ ವಿಷಯಗಳಲ್ಲಿ ನಮ್ಮ ಹಾಗೆ ಶೋಧನೆಗೆ ಗುರಿಯಾದರು, **ಪಾಪ ಮಾತ್ರ ಮಾಡಲಿಲ್ಲ.** (ಇಬ್ರಿಯರಿಗೆ 4:15)

➢ **ಯೇಸು ಕ್ರಿಸ್ತರು ತನ್ನನ್ನು ಅನುಮಾನಿಸಿದ ಜನರನ್ನು ಕುರಿತು ಹೇಳಿದ್ದು– ನನ್ನಲ್ಲಿ ಪಾಪವನ್ನು ತೋರಿಸಿಕೊಡುವವರು** ನಿಮ್ಮೊಳಗೆ ಯಾರಿದ್ದಾರೆ? (ಯೋಹಾನ 8:45)

➢ **ಪಾಪವು ಕೊಡುವ ಸಂಬಳ ಮರಣ: ರಕ್ತಧಾರೆಯಿಲ್ಲದೆ ಪಾಪ ಪರಿಹಾರ ಉಂಟಾಗುವುದಿಲ್ಲವೆಂದು ಎಲ್ಲಾ ಧರ್ಮಶಾಸ್ತ್ರಗಳು ಹೇಳಿರುವುದರಿಂದ–**
ನಾವು ಯೇಸು ಕ್ರಿಸ್ತರಲ್ಲಿ ದೇವರಿಗೆ ಸಮರ್ಪಕರಾದ ನೀತಿ ಸ್ವರೂಪಿಗಳಾಗುವಂತೆ ದೇವರು **ಪಾಪಜ್ಞಾನವಿಲ್ಲದ ಯೇಸು ಕ್ರಿಸ್ತರನ್ನು** ನಮಗೋಸ್ಕರ ಪಾಪಸ್ವರೂಪಿಯನ್ನಾಗಿ ಮಾಡಿದನು.(2 ಕೊರಿಂಥ 5:21)

➢ **ಹೋತ, ಹೋರಿಗಳ ರಕ್ತದಿಂದ ಮಾನವರ ಪಾಪಗಳು ಪರಿಹಾರವಾಗುವುದು ಅಸಾಧ್ಯವಾದಾಗ–**
ಯೇಸು ಕ್ರಿಸ್ತರು ನಮಗೋಸ್ಕರ ತನ್ನ ರಕ್ತವನ್ನು ಸುರಿಸಿದ್ದರಿಂದ **ನಮ್ಮ ಅಪರಾಧಗಳು ಪರಿಹಾರವಾಗಿ** ನಮಗೆ ಬಿಡುಗಡೆಯಾಯಿತು. ಇದು ದೇವರ ಕೃಪಾತಿಶಯವೇ. (ಎಫೆಸ 1:7)

➢ **ಯೇಸು ಕ್ರಿಸ್ತರ 12 ಮಂದಿ ಅಪೋಸ್ತಲರಲ್ಲಿ ಒಬ್ಬನಾದ ಯೂದನು 30 ಬೆಳ್ಳಿ ನಾಣ್ಯಗಳಿಗೆ ಆಸೆಪಟ್ಟು ಯೇಸು ಕ್ರಿಸ್ತರನ್ನು ಹಿಡಿದುಕೊಟ್ಟ ನಂತರ ಪಶ್ಚಾತ್ತಾಪಪಟ್ಟು ಹೇಳಿದ್ದು–**

**ತಪ್ಪಿಲ್ಲದವನನ್ನು** ಮರಣಕ್ಕೆ ಒಪ್ಪಿಸಿಕೊಟ್ಟು ಪಾಪ ಮಾಡಿದೆನು ಅಂದನು. (ಮತ್ತಾಯ 27:4)

➢ **ಹಿರಿಯ ಸಭೆಯ ಮುಂದೆ ವಿಚಾರಣೆ ನಡೆದಾಗ–**
ಮಹಾಯಾಜಕರೂ ಹಿರೀಸಭೆಯವರೆಲ್ಲರೂ ಯೇಸು ಕ್ರಿಸ್ತರನ್ನು ಕೊಲ್ಲಿಸಬೇಕೆಂದು ಆತನ ಮೇಲೆ ಸಾಕ್ಷಿಯನ್ನು ಹುಡುಕಿದರು; **ಆದರೆ ಏನೂ ಸಿಕ್ಕಲಿಲ್ಲ.** ಬಹುಮಂದಿ ಬಂದು ಅವರ ಮೇಲೆ ಸುಳ್ಳು ಸಾಕ್ಷಿ ಹೇಳಿದರೂ **ಅವರ ಸಾಕ್ಷಿ ಒಂದಕ್ಕೊಂದು ಸರಿಬೀಳಲಿಲ್ಲ.** (ಮಾರ್ಕ 14:55–56)

➢ **ಪಿಲಾತನು ಹೇಳಿದ್ದು–** ನೀವು ಯೇಸು ಕ್ರಿಸ್ತರ ಮೇಲೆ ತಂದ ದೂರುಗಳ ವಿಷಯವಾಗಿ ನಾನು ನಿಮ್ಮ ಮುಂದೆಯೇ ವಿಚಾರಣೆ ಮಾಡಿದರೂ

ಇತನಲ್ಲಿ ಒಂದು ತಪ್ಪಾದರೂ ನನಗೆ ಕಾಣಲಿಲ್ಲ. ಹೆರೋದನಿಗಾದರೂ **ಕಾಣಲಿಲ್ಲ**. ಎಂದು ಹೇಳಿದನು. (ಲೂಕ 23:14)

- **ಪಿಲಾತನು ಹೇಳಿದ್ದು– ಈ ಮನುಷ್ಯನಲ್ಲಿ ನನಗೆ ಯಾವ ಅಪರಾಧವೂ ಕಾಣಿಸುವುದಿಲ್ಲ**ವೆಂದು ಹೇಳಿದನು. (ಲೂಕ 23:4)
- ಇದಲ್ಲದೆ ಪಿಲಾತನು ನ್ಯಾಯಾಸನದಲ್ಲಿ ಕೂತಿರುವಾಗ ಅವನ ಹೆಂಡತಿಯು ನೀನು ಆ **ಸತ್ಪುರುಷನ** ಗೊಡವೆಗೆ ಹೋಗಬೇಡ; ಅವನ ದೆಸೆಯಿಂದ ಈ ಹೊತ್ತು ಕನಸಿನಲ್ಲಿ ಬಹಳ ತೊಂದರೆ ಪಟ್ಟೆನು ಎಂದು ಅವನ ಬಳಿಗೆ ಹೇಳಿ ಕಳುಹಿಸಿದಳು. (ಮತ್ತಾಯ 27:19)
- **ಯೇಸು ಕ್ರಿಸ್ತರೊಂದಿಗೆ ಶಿಲುಬೆಗೆ ಹಾಕಲ್ಪಟ್ಟ ಇಬ್ಬರು ಕಳ್ಳರಲ್ಲಿ ಒಬ್ಬನು ಯೇಸು ಕ್ರಿಸ್ತರನ್ನು ದೂಷಿಸಿದಾಗ ಅವನಿಗೆ ಮತ್ತೊಬ್ಬನು ಹೇಳಿದ್ದು–**
  ನಾವಂತೂ ನ್ಯಾಯವಾಗಿಯೇ ನಮ್ಮ ಕೃತ್ಯಗಳಿಗೆ ತಕ್ಕ ಪ್ರತಿಫಲವನ್ನು ಹೊಂದುತ್ತಾ ಇದ್ದೇವೆ; **ಈತನಾದರೋ ಅಲ್ಲದ್ದೇನೂ ಮಾಡಲಿಲ್ಲ** ಎಂದು ಹೇಳಿದನು. (ಲೂಕ 23:41)
- **ನ್ಯಾಯಾಲಯದ ಆದೇಶದಂತೆ ಯೇಸು ಕ್ರಿಸ್ತರನ್ನು ಶಿಲುಬೆಗೇರಿಸಿದ ಶತಾಧಿಪತಿಯು ನಡೆದ ಸಂಗತಿಯನ್ನು ನೋಡಿ–**
  ಈ ಮನುಷ್ಯನು **ಸತ್ಪುರುಷನೇ** ನಿಜ ಎಂದು ದೇವರನ್ನು ಕೊಂಡಾಡಿದನು. (ಲೂಕ 23:47)
- **ಮೂರೂವರೆ ವರ್ಷಗಳು ಕ್ರಿಸ್ತರೊಂದಿಗೇ ಇದ್ದು ಸೇವೆ ಮಾಡಿದ್ದ ಆತನ 12 ಮಂದಿ ಅಪೋಸ್ತಲರಲ್ಲಿ ಒಬ್ಬನಾದ ಪೇತ್ರನು ಆತನ ಕುರಿತಾಗಿ ನುಡಿದ ಸಾಕ್ಷಿ–**
  ನಾವು ಆತನ ಹೆಜ್ಜೆಯ ಜಾಡಿನಲ್ಲಿ ನಡೆಯಬೇಕೆಂದು ಮಾದರಿಯನ್ನು ತೋರಿಸಿ ಹೋದರು, **ಯೇಸು ಕ್ರಿಸ್ತರು ಯಾವ ಪಾಪವನ್ನು ಮಾಡಲಿಲ್ಲ. ಅವರ ಬಾಯಲ್ಲಿ ಯಾವ ವಂಚನೆಯೂ ಸಿಕ್ಕಲಿಲ್ಲ;** ಬೈಯುವವರನ್ನು ಅವರು ಪ್ರತಿಯಾಗಿ ಬೈಯಲಿಲ್ಲ ಯಾರನ್ನೂ ಬೆದರಿಸಲಿಲ್ಲ. (1 ಪೇತ್ರ 2:21–22)

**ಯೇಸು ಕ್ರಿಸ್ತರು ತಮ್ಮ ಜನನ, ಜೀವನ, ಮರಣ ಹಾಗೂ ಪುನರುತ್ಥಾನಗಳಲ್ಲಿ ಪರಿಪೂರ್ಣ ಪರಿಶುದ್ಧರಾಗಿದ್ದರು. ಆತನ ಆಲೋಚನೆಗಳಲ್ಲಿಯೂ ಸಹ ಪಾಪಗಳಿರಲಿಲ್ಲ ಮತ್ತು ಅವರಲ್ಲಿ ಈವರೆಗೆ ಒಂದು ತಪ್ಪನ್ನಾದರೂ ಯಾರೂ ಗುರುತಿಸಿರುವುದಿಲ್ಲ. ದೇವರೆಂದರೆ ಹೀಗಿರಬೇಕಲ್ಲವೆ? ಆತನನ್ನು ಯಾರಿಗೆ ಹೋಲಿಸಲಾದೀತು!**

**– ಯೇಸುವಿಗೆ ನಮಸ್ಕಾರಗಳು.**



**ದಿ:17–03–2013 ರ ಸಂಯುಕ್ತ ಕರ್ನಾಟಕ ದಿನಪತ್ರಿಕೆಯಲ್ಲಿ ರಾಜ್ಯವ್ಯಾಪಿ ಪ್ರಕಟವಾದ ಲೇಖನ**

## 14. ಯೇಸು ಕ್ರಿಸ್ತರು ಪರ್ವತದ ಮೇಲೆ ಮಾಡಿದ ಬೋಧನೆಯ ಸಾರಾಂಶ

> **"ನಾನು ಪ್ರಾಚ್ಯನಂತೆ ಯೇಸು ಕ್ರಿಸ್ತರನ್ನು ಆರಾಧಿಸಬೇಕಾದರೆ ನನಗೆ ಇರುವುದೊಂದೆ ಮಾರ್ಗ. ಅದೇ ಆತನನ್ನು ದೇವರಂತೆ ಮಾತ್ರ ಪೂಜಿಸುವುದು."**
> **– ಸ್ವಾಮಿ ವಿವೇಕಾನಂದರು (ಕೃತಿಶ್ರೇಣಿ, ಸಂಪುಟ–7, ಪುಟ ಸಂಖ್ಯೆ : 59)**

ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ **'ನನ್ನ ಸತ್ಯಾನ್ವೇಷಣೆ'** ಎಂಬ ಪುಸ್ತಕದಲ್ಲಿ ಅವರು **'ಪವಿತ್ರ ಸತ್ಯವೇದ'** ಎಂಬ ಗ್ರಂಥವನ್ನು ಓದಿದಾಗ ಅದರಲ್ಲಿನ ಯೇಸು ಕ್ರಿಸ್ತರು ಪರ್ವತದ ಮೇಲೆ ಮಾಡಿದ ಬೋಧನೆಯು ನೇರವಾಗಿ ನನ್ನ ಹೃದಯವನ್ನೇ ಮುಟ್ಟಿತು; **'ಆತನ ಬೋಧನೆಗಳು ಕೇವಲ ಕ್ರೈಸ್ತರಿಗೆ ಮಾತ್ರ ಸೀಮಿತವಲ್ಲ ಪ್ರತಿಯೊಬ್ಬರಿಗೂ ಅವಶ್ಯಕ'** ಎಂದು ಹೇಳಿರುತ್ತಾರೆ.

**ಮಹಾತ್ಮ ಗಾಂಧೀಜಿಯವರ ಅಹಿಂಸಾ ಮಾರ್ಗಕ್ಕೆ / ಆದರ್ಶ ಬದುಕಿಗೆ ಪ್ರೇರಣೆ ಯಾದ ಯೇಸು ಕ್ರಿಸ್ತರು 'ಪರ್ವತದ ಮೇಲೆ ಮಾಡಿದ ಬೋಧನೆ'ಯ ಸಾರಾಂಶ:**

**ಯೇಸು ಕ್ರಿಸ್ತರು ಏನೇನು ಉಪದೇಶಗಳನ್ನು ಮಾಡಿದ್ದರೋ ಅದೇ ರೀತಿ ಜೀವಿಸಿದ್ದರು**

### ಧನ್ಯರು ಯಾರು ಅವರಿಗೆ ಏನು ದೊರಕುತ್ತದೆ ಎಂಬುದು

*॥ ಆತ್ಮದಲ್ಲಿ ಬಡವರಾಗಿರುವವರು ಧನ್ಯರು; ಪರಲೋಕ ರಾಜ್ಯವು ಅವರದು ॥*

*॥ ದು:ಖ ಪಡುವವರು ಧನ್ಯರು; ಅವರು ಸಮಾಧಾನ ಹೊಂದುವರು ॥*

*॥ ಶಾಂತರು ಧನ್ಯರು; ಅವರು ಭೂಮಿಗೆ ಬಾಧ್ಯರಾಗುವರು ॥*

*॥ ನೀತಿಗೆ ಹಸಿದು ಬಾಯಾರಿದವರು ಧನ್ಯರು; ಅವರಿಗೆ ತೃಪ್ತಿಯಾಗುವುದು ॥*

*॥ ಕರುಣೆಯುಳ್ಳವರು ಧನ್ಯರು; ಅವರು ಕರುಣೆ ಹೊಂದುವರು ॥*

*॥ ನಿರ್ಮಲ ಚಿತ್ತರು ಧನ್ಯರು; ಅವರು ದೇವರನ್ನು ನೋಡುವರು ॥*

*॥ ಸಮಾಧಾನ ಪಡಿಸುವವರು ಧನ್ಯರು; ಅವರು ದೇವರ ಮಕ್ಕಳು ಅನ್ನಿಸಿಕೊಳ್ಳುವರು ॥*

*॥ ನೀತಿಯ ನಿಮಿತ್ತವಾಗಿ ಹಿಂಸೆಯನ್ನು ತಾಳಿಕೊಳ್ಳುವವರು ಧನ್ಯರು; ಸ್ವರ್ಗರಾಜ್ಯವು ಅವರದು ॥*

# ಮನುಷ್ಯನ ಜೀವನ ಹೇಗಿರಬೇಕು?

* ನೀವು ಭೂಮಿಗೆ ಉಪ್ಪಾಗಿದ್ದೀರಿ. ಉಪ್ಪು ಸಪ್ಪಗಾದರೆ ಅದಕ್ಕೆ ಮತ್ತ್ಯಾವುದರಿಂದ ಉಪ್ಪಿನ ರುಚಿ ಬಂದೀತು? ಜನರು ಅದನ್ನು ಹೊರಗೆ ಹಾಕಿ ತುಳಿಯುವುದಕ್ಕೆ ಅದು ಯೋಗ್ಯವೇ ಹೊರತು ಮತ್ತ್ಯಾವ ಕೆಲಸಕ್ಕೂ ಬಾರದು.

* ನೀವು ಲೋಕಕ್ಕೆ ಬೆಳಕಾಗಿದ್ದೀರಿ. ದೀಪವನ್ನು ಹತ್ತಿಸಿ ಕೊಳಗದೊಳಗೆ ಇಡುವುದಿಲ್ಲ; ದೀಪಸ್ತಂಭದ ಮೇಲೆ ಇಡುತ್ತಾರಷ್ಟೆ. ಆಗ ಅದು ಮನೆಯಲ್ಲಿರುವವರೆಲ್ಲರಿಗೆ ಬೆಳಕು ಕೊಡುವುದು. ಅದರಂತೆ ನಿಮ್ಮ ಬೆಳಕು ಜನರ ಮುಂದೆ ಪ್ರಕಾಶಿಸಲಿ.

* ನಿನ್ನ ಬಲಗಣ್ಣು ನಿನ್ನನ್ನು ಪಾಪದಲ್ಲಿ ಸಿಕ್ಕಿಸುವುದಾದರೆ ಅದನ್ನು ಕಿತ್ತು ಬಿಸಾಕಿಬಿಡು; ನಿನ್ನ ಬಲಗೈಯು ನಿನ್ನನ್ನು ಪಾಪದಲ್ಲಿ ಸಿಕ್ಕಿಸುವದಾದರೆ ಅದನ್ನು ಕಡಿದು ಬಿಸಾಕಿಬಿಡು; ನಿನ್ನ ದೇಹವೆಲ್ಲಾ ನರಕದಲ್ಲಿ ಬೀಳುವುದಕ್ಕಿಂತ ಅವಯವಗಳಲ್ಲಿ ಒಂದು ಹೋಗುವುದು ನಿನಗೆ ಹಿತವಲ್ಲವೇ.

* ಕೆಡುಕನನ್ನು ಎದುರಿಸಬೇಡ ನಿನ್ನ ವಿರೋಧಿಯು ಇನ್ನೂ ದಾರಿಯಲ್ಲಿರುವಾಗಲೇ ಅವನ ಕೂಡ ಬೇಗ ಸಮಾಧಾನ ಮಾಡಿಕೋ; ಇಲ್ಲದಿದ್ದರೆ ಸೆರೆಯಲ್ಲಿ ಬೀಳುತ್ತೀಯ. ಒಬ್ಬನು ನಿನ್ನ ಬಲಗೆನ್ನೆಯ ಮೇಲೆ ಹೊಡೆದರೆ, ಅವನಿಗೆ ಮತ್ತೊಂದು ಕೆನ್ನೆಯನ್ನು ಒಡ್ಡು.

* ನಿಮ್ಮ ವೈರಿಗಳನ್ನು ಪ್ರೀತಿಸಿರಿ; ನಿಮ್ಮನ್ನು ಹಿಂಸೆಪಡಿಸುವವರಿಗೋಸ್ಕರ ದೇವರನ್ನು ಪ್ರಾರ್ಥಿಸಿರಿ. ನಿಮ್ಮನ್ನು ಹಗೆ ಮಾಡುವವರಿಗೆ ಉಪಕಾರ ಮಾಡಿರಿ; ನಿಮ್ಮನ್ನು ಶಪಿಸುವವರಿಗೆ ಆಶೀರ್ವಾದ ಮಾಡಿರಿ; ಹೀಗೆ ಮಾಡಿದರೆ ನೀವು ಸ್ವರ್ಗದಲ್ಲಿರುವ ದೇವರಿಗೆ ಮಕ್ಕಳಾಗುವಿರಿ.

* ನಿಮಗೆ ಪ್ರೀತಿ ತೋರಿಸುವವರನ್ನೇ ನೀವು ಪ್ರೀತಿಸಿದರೆ ಫಲವೇನು? ಭ್ರಷ್ಟರೂ ಹಾಗೆ ಮಾಡುವುದಿಲ್ಲವೇ. ದೇವರು ನೀತಿವಂತರ ಮೇಲೆಯೂ ಅನೀತಿವಂತರ ಮೇಲೆಯೂ ಸೂರ್ಯನು ಮೂಡುವಂತೆ ಮಾಡುತ್ತಾನೆ ಮತ್ತು ಮಳೆ ಸುರಿಸುತ್ತಾನೆ.

* ಜನರು ನೋಡಲಿ ಎಂದು ಧರ್ಮಕಾರ್ಯಗಳನ್ನು ಮಾಡಬೇಡಿರಿ, ಹಾಗೆ ಮಾಡಿದರೆ ನಿಮಗೆ ದೇವರಿಂದ ಫಲ ದೊರೆಯುವುದಿಲ್ಲ. ನಿಮ್ಮ ಬಲಗೈ ಮಾಡಿದ್ದು ಎಡಗೈಗೂ ತಿಳಿಯದ ಹಾಗೆ ಧರ್ಮಕಾರ್ಯಗಳನ್ನು ಮಾಡಿರಿ. ಹಾಗೂ ಪ್ರಾರ್ಥಿಸುವಾಗ ಒಳಗೆ ಹೋಗಿ ಬಾಗಿಲು ಮುಚ್ಚಿಕೊಂಡು ಪ್ರಾರ್ಥನೆ ಮಾಡಿರಿ;



ಅಂತರಂಗದಲ್ಲಿ ನೆಡೆಯುವುದನ್ನು ನೋಡುವ ನಿನ್ನ ದೇವರು ನಿಮಗೆ ಫಲ ಕೊಡುವನು.

* ಭೂಲೋಕದಲ್ಲಿ ಗಂಟು ಮಾಡಿ ಇಟ್ಟುಕೊಳ್ಳಬೇಡಿರಿ; ಆದರೆ ಸ್ವರ್ಗದಲ್ಲಿ ಗಂಟು ಮಾಡಿ ಇಟ್ಟುಕೊಳ್ಳಿರಿ; ಅಲ್ಲಿ ಅದು ಹಾಳಾಗುವುದಿಲ್ಲ, ಕಳ್ಳರು ಕದಿಯುವುದೂ ಇಲ್ಲ, ನಿನ್ನ ಗಂಟು ಇದ್ದಲ್ಲಿಯೇ ನಿನ್ನ ಮನಸ್ಸು ಇರುತ್ತದೆ.

* ಯಾವನು ಇಬ್ಬರು ಯಜಮಾನರಿಗೆ ಸೇವೆ ಮಾಡಲಾರನು. ನೀವು ದೇವರನ್ನೂ ಧನವನ್ನೂ ಕೂಡ ಸೇವಿಸಲಾರಿರಿ. ಗುರುವಿಗಿಂತ ಶಿಷ್ಯನು ದೊಡ್ಡವನಲ್ಲ. ಆದರೆ, ತೀರಾ ಕಲಿತವನಾದ ಪ್ರತಿಯೊಬ್ಬನು ತನ್ನ ಗುರುವಿನಂತಾಗಿರುವನು.

* ಉಪಕಾರ ಮಾಡುವುದಕ್ಕೆ ನಿನ್ನ ಕೈಲಾದಾಗ ಹೊಂದತಕ್ಕವರಿಗೆ ಅದನ್ನು ತಪ್ಪಿಸಬೇಡ. ನಿನ್ನನ್ನು ಬೇಡುವವರಿಗೆ ಕೊಡು. ನಿನ್ನಲ್ಲಿ ಸಾಲಕೇಳಲು ಬಂದವನಿಗೆ ಮುಖ ತಿರುಗಿಸಿಕೊಳ್ಳಬೇಡ. ಕೊಡತಕ್ಕದ್ದು ನಿನ್ನಲ್ಲಿದ್ದರೆ ನೆರೆಯವನಿಗೆ ಹೋಗಿ ಬಾ ನಾಳೆ ಕೊಡುತ್ತೇನೆ ಎಂದು ಹೇಳಬೇಡ.

* ನೆರೆಯವನಿಗೆ ಕೇಡನ್ನು ಕಲ್ಪಿಸಬಾರದು, ಪರರ ಸುಖ ದುಃಖಗಳಲ್ಲಿ ಸೇರುವವರಾಗಿರಿ; ಕರುಣೆಯೂ ದೀನಭಾವವೂ ಉಳ್ಳವರಾಗಿರಿ. ಅಪಕಾರಕ್ಕೆ ಅಪಕಾರವನ್ನು ನಿಂದೆಗೆ ನಿಂದೆಯನ್ನು ಮಾಡದೆ ಆಶೀರ್ವದಿಸಿರಿ. ಹೀಗೆ ಮಾಡುವುದಾದರೆ ನೀವು ಆಶೀರ್ವಾದವನ್ನು ಬಾಧ್ಯವಾಗಿ ಹೊಂದುವಿರಿ.

* ನಿನ್ನನ್ನು ಯಾರಾದರೂ ಊಟಕ್ಕೆ ಕರೆದಾಗ ಪಂಕ್ತಿಯ ಮೊದಲನೆಯ ಸ್ಥಾನದಲ್ಲಿ ಕುಳಿತುಕೊಳ್ಳಬೇಡ; ಒಂದು ವೇಳೆ ನಿನಗಿಂತ ಮಾನವುಳ್ಳವನನ್ನು ಅವನು ಕರೆದಿರಬಹುದು, ಆಗ ಅವನು ಬಂದು ಇವನಿಗೆ ಸ್ಥಳ ಬಿಡು ಎಂದು ನಿನಗೆ ಹೇಳುವಾಗ ನೀನು ನಾಚಿಕೊಂಡು ಕಡೆಯ ಸ್ಥಳದಲ್ಲಿ ಕುಳಿತುಕೊಳ್ಳುವುದಕ್ಕೆ ಹೋಗುವಿ. ಆದರೆ ಯಾವನಾದರೂ ನಿನ್ನನ್ನು ಕರೆದಾಗ ನೀನು ಹೋಗಿ ಕಡೆಯ ಸ್ಥಾನದಲ್ಲಿ ಕುಳಿತುಕೊ; ಹೀಗೆ ಮಾಡಿದರೆ ನಿನ್ನನ್ನು ಕರೆದವನು ಬಂದು ನಿನ್ನನ್ನು ನೋಡಿ ಸ್ನೇಹಿತನೇ, ಇನ್ನೂ ಮೇಲಕ್ಕೆ ಬಾ ಅನ್ನುವನು. ಆಗ ನಿನ್ನ ಸಂಗಡ ಕೂತಿರುವವರೆಲ್ಲರ ಮುಂದೆ ನಿನಗೆ ಮಾನ ಬರುವುದು. ತನ್ನನ್ನು ಹೆಚ್ಚಿಸಿಕೊಳ್ಳುವ ಪ್ರತಿಯೊಬ್ಬನು ತಗ್ಗಿಸಲ್ಪಡುವನು; ತನ್ನನ್ನು ತಗ್ಗಿಸಿಕೊಳ್ಳುವವನು ಹೆಚ್ಚಿಸಲ್ಪಡುವನು.

* ತೀರ್ಪು ಮಾಡಬೇಡಿರಿ; ಆಗ ನಿಮಗೂ ತೀರ್ಪಾಗುವುದಿಲ್ಲ. ಕುರುಡನು ಕುರುಡನಿಗೆ ದಾರಿ ತೋರಿಸುವುದಕ್ಕಾದೀತೆ? ಅವರಿಬ್ಬರೂ ಕುಣಿಯಲ್ಲಿ ಬೀಳುವರಲ್ಲವೇ. ಕಪಟಿಯೇ, ಮೊದಲು ನಿನ್ನ ಕಣ್ಣಿನಲ್ಲಿರುವ ತೊಲೆಯನ್ನು ತೆಗೆದು ಹಾಕಿಕೋ; ಆಮೇಲೆ ನಿನ್ನ ಸಹೋದರನ ಕಣ್ಣಿನೊಳಗಿಂದ ರವೆಯನ್ನು ತೆಗೆಯುವುದಕ್ಕೆ ಚೆನ್ನಾಗಿ ಕಾಣಿಸುವುದು.

* ಬಿಡಿಸಿರಿ ಆಗ ನಿಮ್ಮನ್ನೂ ಬಿಡಿಸುವರು. ಕೊಡಿರಿ ಆಗ ನಿಮಗೂ ಕೊಡುವರು. ಜನರು ನಿಮಗೆ ಏನೇನು ಮಾಡಬೇಕೆಂದು ಅಪೇಕ್ಷಿಸುತ್ತೀರೋ ಅದನ್ನೇ ನೀವು ಅವರಿಗೆ ಮಾಡಿರಿ.

* ನನ್ನನ್ನು ಸ್ವಾಮೀ, ಸ್ವಾಮೀ ಅನ್ನುವವರೆಲ್ಲರೂ ಮುಕ್ತಿಯನ್ನು ಪಡೆಯುವನೆಂದು ನೆನಸಬೇಡಿರಿ; ದೇವರ ಚಿತ್ತದಂತೆ ನಡೆಯುವವನೇ ಮುಕ್ತಿಯನ್ನು ಪಡೆಯುವನು.

* ಚಿಂತೆ ಮಾಡಿ ಒಂದು ಮೊಳ ಉದ್ದ ಬೆಳೆಯುವುದು ಯಾರಿಂದಾದೀತು. ನಿಮಗೆ ಏನೇನು ಅಗತ್ಯವಿದೆ ಎಂಬುದು ದೇವರಿಗೆ ತಿಳಿದಿದೆಯಷ್ಟೇ. ಆಕಾಶದಲ್ಲಿ ಹಾರಾಡುವ ಹಕ್ಕಿಗಳನ್ನು ನೋಡಿರಿ; ಅವು ಬಿತ್ತುವುದಿಲ್ಲ, ಕೊಯ್ಯುವುದಿಲ್ಲ, ಕಣಜಗಳಲ್ಲಿ ತುಂಬಿಟ್ಟುಕೊಳ್ಳುವುದಿಲ್ಲ; ಆದಾಗ್ಯೂ ದೇವರು ಅವುಗಳನ್ನು ಸಾಕಿ ಸಲಹುತ್ತಾನೆ; ಅವುಗಳಿಗಿಂತ ನೀವು ಹೆಚ್ಚಿನವರಲ್ಲವೋ? ಹೀಗಿರುವುದರಿಂದ ನೀವು ಮೊದಲು ದೇವರ ರಾಜ್ಯಕ್ಕಾಗಿಯೂ ನೀತಿಗಾಗಿಯೂ ತವಕಪಡಿರಿ. ಇವುಗಳ ಕೂಡ ಅವೆಲ್ಲವೂ ನಿಮಗೆ ದೊರೆಯುವವು.

* ಈ ನನ್ನ ಮಾತುಗಳನ್ನು ಕೇಳಿ ಅದರಂತೆ ನಡೆಯುವವನು ಬಂಡೆಯ ಮೇಲೆ ಮನೆಯನ್ನು ಕಟ್ಟಿಕೊಂಡ ಬುದ್ಧಿಯುಳ್ಳ ಮನುಷ್ಯನನ್ನು ಹೋಲುವನು.

## ನಾವು ಹೇಗೆ ಪ್ರಾರ್ಥಿಸಬೇಕು

ಸ್ವರ್ಗದಲ್ಲಿರುವ ನಮ್ಮ ತಂದೆಯೇ, (ದೇವರೇ) ನಿನ್ನ ನಾಮವು ಪರಿಶುದ್ಧವೆಂದು ಎಣಿಸಲ್ಪಡಲಿ. ನಿನ್ನ ರಾಜ್ಯವು ಬರಲಿ. ನಿನ್ನ ಚಿತ್ತವು ಸ್ವರ್ಗಲೋಕದಲ್ಲಿ ನೆರವೇರುವ ಪ್ರಕಾರ ಭೂಲೋಕದಲ್ಲಿಯೂ ನೆರವೇರಲಿ. ನಮ್ಮ ಅನುದಿನದ ಆಹಾರವನ್ನು ಈ ಹೊತ್ತೂ ದಯಪಾಲಿಸು. ನಮಗೆ ತಪ್ಪು ಮಾಡಿದವರನ್ನು ನಾವು ಕ್ಷಮಿಸಿದಂತೆ ನಮ್ಮ ತಪ್ಪುಗಳನ್ನು ಕ್ಷಮಿಸು. ನಮ್ಮನ್ನು ಶೋಧನೆಯೊಳಗೆ ಸೇರಿಸದೆ ಕೇಡಿನಿಂದ ತಪ್ಪಿಸು. ಯಾಕೆಂದರೆ ರಾಜ್ಯವೂ, ಬಲವೂ, ಮಹಿಮೆಯು, ಸದಾಕಾಲವೂ ನಿಮ್ಮದೇ. "ಆಮೆನ್."



ದಿ:02–04–2013 ರಂದು ಶಿವಮೊಗ್ಗ ನಗರದ ಪಾವನ ಸ್ಥಳೀಯ ದಿನಪತ್ರಿಕೆಯಲ್ಲಿ ಪ್ರಕಟವಾದ ಲೇಖನ

## 15. ಯೇಸು ಕ್ರಿಸ್ತರು ಮಾಡಿದ ಮುಖ್ಯವಾದ 37 ಅದ್ಭುತಗಳು



"ನಾನು ಯೇಸುವಿನ ಉಡುಪನ್ನು ಮುಟ್ಟಿದರೆ ಸಾಕು ಗುಣಹೊಂದುವೆನು"

**ಯೇಸು ಕ್ರಿಸ್ತರು ಸುಮಾರು 2024 ವರ್ಷಗಳ ಹಿಂದೆ ಈ ಲೋಕದಲ್ಲಿ ಜನಿಸಿ 33 ½ ವರ್ಷಗಳು ಮಾನವರ ಮಧ್ಯೆ ಜೀವಿಸಿದ್ದು, ಅವರ 3 ½ ವರ್ಷಗಳ ಸೇವಾ ಅವಧಿಯಲ್ಲಿ ಅವರು ಮಾಡಿದ ಮುಖ್ಯವಾದ 37 ಅದ್ಭುತ ಕಾರ್ಯಗಳು ಪವಿತ್ರ ಸತ್ಯವೇದದಲ್ಲಿ ಈ ಕೆಳಗಿನಂತೆ ದಾಖಲಿಸಲ್ಪಟ್ಟಿದೆ.**

1 ಕಾನಾ ಊರಿನ ಮದುವೆ ಮನೆಯಲ್ಲಿ ದ್ರಾಕ್ಷಾರಸದ ಕೊರತೆಬಿದ್ದಾಗ–ಯೇಸು ಎರಡು ಮೂರು ಕೊಳಗ ನೀರು ಹಿಡಿಯುವ ಆರು ಕಲ್ಲಿನ ಬಾನೆಗಳಲ್ಲಿನ ನೀರನ್ನು ದ್ರಾಕ್ಷಾರಸವನ್ನಾಗಿ ಮಾರ್ಪಡಿಸಿದರು. (ಯೋಹಾನ 2:1–11)

2. ಕಾನಾ ಊರಿನ ಅರಮನೆಯ ಪ್ರಧಾನನ ಮಗನು ಅಸ್ವಸ್ಥನಾಗಿದ್ದಾಗ– ಯೇಸು, 'ನಿನ್ನ ಮಗನು ಬದುಕುತ್ತಾನೆ ಹೋಗು' ಎಂದು ಹೇಳಿದ ಕ್ಷಣದಲ್ಲೇ ಅವನ ಮಗನಿಗೆ ಜ್ವರವು ಬಿಟ್ಟು ಹೋಗಿತ್ತು. (ಯೋಹಾನ 4:43–54)

3. ಸಭಾ ಮಂದಿರದಲ್ಲಿದ್ದ ಮನುಷ್ಯನಲ್ಲಿನ ದೆವ್ವವು ಕ್ರಿಸ್ತರಿಗೆ ನೀನು ನಮ್ಮನ್ನು ನಾಶ ಮಾಡುವುದಕ್ಕೆ ಬಂದೆಯಾ? ನೀನು ದೇವರು ಪ್ರತಿಷ್ಠಿಸಿದವನೇ ಎಂದು ಅಬ್ಬರಿಸಿದಾಗ– ಕ್ರಿಸ್ತರು ಅದನ್ನು ಗದರಿಸಿ– 'ಇವನನ್ನು ಬಿಟ್ಟು ಹೋಗು' ಎಂದು ಹೇಳಿದಾಗ ಅದು ಅವನಿಗೆ ಯಾವ ಕೇಡನ್ನೂ ಮಾಡದೇ ಬಿಟ್ಟು ಹೋಯಿತು. (ಲೂಕ 4:31–36)

4 ಯೇಸು ಕ್ರಿಸ್ತರು ತನ್ನ ಅಪೋಸ್ತಲನಾದ ಪೇತ್ರನ ಮನೆಗೆ ಬಂದಾಗ ಅವನ ಅತ್ತೆ ಜ್ವರದಲ್ಲಿ ಬಿದ್ದಿರುವುದನ್ನು ಕಂಡು ಆಕೆಯ ಕೈಯನ್ನು ಮುಟ್ಟಿದಾಗಲೇ, ಜ್ವರವು ಅವಳನ್ನು ಬಿಟ್ಟು ಹೋಯಿತು. (ಮತ್ತಾಯ 8:14–15)

5 ಸಂಜೆಯಾಗಲು ದೆವ್ವಹಿಡಿದ/ಮೈಯಲ್ಲಿ ನೆಟ್ಟಗಿಲ್ಲದ ಅನೇಕರನ್ನು ಕ್ರಿಸ್ತರ ಬಳಿಗೆ ಕರತಂದರು; ಆತನು ಮಾತು ಮಾತ್ರದಿಂದಲೇ ದೆವ್ವಗಳನ್ನು ಬಿಡಿಸಿದ್ದಲ್ಲದೆ ಮೈಯಲ್ಲಿ ನೆಟ್ಟಗಿಲ್ಲದವರೆಲ್ಲರನ್ನು ವಾಸಿಮಾಡಿದರು. (ಮತ್ತಾಯ 8:16–17)

6 ಪೇತ್ರ ಎಂಬ ಮೀನುಗಾರನು ರಾತ್ರಿಯೆಲ್ಲಾ ಪ್ರಯಾಸಪಟ್ಟರೂ ಒಂದು ಮೀನೂ ಸಿಕ್ಕದೆ ನಿರಾಶೆಯಲ್ಲಿದ್ದಾಗ– ಯೇಸು ಕ್ರಿಸ್ತರು ಅವನ ದೋಣಿಯ ಮೇಲೆ ನಿಂತು ಜನರಿಗೆ ಉಪದೇಶ ಮಾಡಿದ ನಂತರ ಕ್ರಿಸ್ತರ ಮಾತಿನಂತೆ ಬಲೆ ಬೀಸಿದಾಗ ರಾಶಿರಾಶಿಯಾಗಿ ಮೀನುಗಳು ಸಿಕ್ಕಿದವು. (ಲೂಕ 5:1–6)

7 ಮೈಯೆಲ್ಲಾ ಕುಷ್ಠರೋಗ ತುಂಬಿದ್ದ ಒಬ್ಬ ಮನುಷ್ಯನು ಕ್ರಿಸ್ತರಿಗೆ ಅಡ್ಡಬಿದ್ದು ಸ್ವಾಮಿ, ನಿಮಗೆ ಮನಸ್ಸಿದ್ದರೆ ನನ್ನನ್ನು ಗುಣವಾಡಬಲ್ಲೆ ಎಂದು ಬೇಡಿಕೊಂಡಾಗ– ಯೇಸು ಕ್ರಿಸ್ತರು, 'ನನಗೆ ಮನಸ್ಸುಂಟು; ಗುಣಹೊಂದು' ಎಂದು ಹೇಳಿದರು. ಕೂಡಲೇ ಅವನ ಕುಷ್ಠರೋಗ ಹೋಗಿ ಗುಣವಾದನು. (ಲೂಕ 5:12–13)

8 ಒಬ್ಬ ಶತಾಧಿಪತಿಯು ಕ್ರಿಸ್ತರ ಬಳಿ ಬಂದು– ಪ್ರಭುವೇ, ನನ್ನ ಆಳು ಅಸ್ವಸ್ಥನಾಗಿದ್ದಾನೆ; ತಾವು ನನ್ನ ಮನೆಗೆ ಬರುವಷ್ಟು ಯೋಗ್ಯತೆ ನನ್ನಲ್ಲಿಲ್ಲ; ತಾವು ಒಂದು ಮಾತು ಹೇಳಿದರೆ ಸಾಕು, ನನ್ನ ಆಳಿಗೆ ಗುಣವಾಗುವುದು ಎಂದು ಹೇಳಿದಾಗ– ಕ್ರಿಸ್ತರು 'ನೀನು ನಂಬಿದಂತೆ ನಿನಗಾಗಲಿ' ಎಂದು ಹೇಳಿದರು, ಅದೇ ಗಳಿಗೆಯಲ್ಲಿ ಆ ಆಳು ಗುಣಹೊಂದಿದನು. (ಮತ್ತಾಯ 8:5–13)

9 ಕ್ರಿಸ್ತರು ತನ್ನ ಬಳಿಗೆ ಹೊತ್ತು ತಂದ ಪಾರ್ಶ್ವವಾಯು ರೋಗಿಯನ್ನು ನೋಡಿ– ಅವನಿಗೆ 'ನಿನ್ನ ಹಾಸಿಗೆಯನ್ನು ಎತ್ತಿಕೊಂಡು ಮನೆಗೆ ಹೋಗು' ಅಂದರು, ಅವನು ಎದ್ದು ಮನೆಗೆ ಹೋದನು. (ಮತ್ತಾಯ 9:2–8)

10 ಕ್ರಿಸ್ತರು ಕೈಬತ್ತಿ ಹೋಗಿದ್ದ ಒಬ್ಬ ಮನುಷ್ಯನನ್ನು ನೋಡಿ– 'ನಿನ್ನ ಕೈ ಚಾಚು' ಎಂದು ಹೇಳಿದರು. ಅವನು ಕೈ ಚಾಚಿದನು.(ಮಾರ್ಕ 3:1–6)

11 ವಿಧವೆಗೆ ಇದ್ದ ಒಬ್ಬನೇ ಮಗನು ಮರಣ ಹೊಂದಿದ್ದಾಗ ಆ ವಿಧವೆಯನ್ನು ನೋಡಿ ಕನಿಕರಪಟ್ಟು– 'ಯೌವ್ವನಸ್ಥನೇ, ಏಳು' ಅಂದರು; ಹಾಗೆ ಅನ್ನುತ್ತಿರುವಾಗಲೇ ಸತ್ತಿದ್ದವನು ಎದ್ದು ಮಾತನಾಡಿದನು. (ಲೂಕ 7:11–17)

12 ಒಮ್ಮೆ ಸಮುದ್ರದಲ್ಲಿ ದೊಡ್ಡ ಬಿರುಗಾಳಿ ಎದ್ದು ದೋಣಿ ಮುಳುಗುವ ಹಾಗಿದ್ದಾಗ ಶಿಷ್ಯರು ಗುರುವೇ, ಕಾಪಾಡು ಎಂದು ಮೊರೆಯಿಟ್ಟಾಗ ಯೇಸು ಕ್ರಿಸ್ತರು ಎದ್ದು ಗಾಳಿಯನ್ನು ಗದರಿಸಿ ಸಮುದ್ರಕ್ಕೆ– 'ಸುಮ್ಮನಿರು, ಮೊರೆಯಬೇಡ' ಎಂದು ಅಪ್ಪಣೆಕೊಟ್ಟರು. ಕೂಡಲೇ ಎಲ್ಲಾ ಶಾಂತವಾಯಿತು. (ಮಾರ್ಕ 4:35–41)



13 ಗೆರಸೇನರ ಸೀಮೆಯಲ್ಲಿ ಸುಮಾರು 2000 ದೆವ್ವಗಳು ಹಿಡಿದು ಬಹು ಉಗ್ರನಾಗಿದ್ದ ಒಬ್ಬ ಮನುಷ್ಯನು ಕ್ರಿಸ್ತರಿಗೆ ಅಡ್ಡಬಿದ್ದು– ಪರಾತ್ಪರನಾದ ದೇವರ ಮಗನೇ, ನನ್ನನ್ನು ಕಾಡಬೇಡ ಎಂದು ಹೇಳಿದಾಗ– ಕ್ರಿಸ್ತರು 'ಎಲಾ ದೆವ್ವಾ, ಇವನನ್ನು ಬಿಟ್ಟು ಹೋಗು' ಎಂದು ಅಪ್ಪಣೆ ಕೊಡಲು ದೆವ್ವಗಳು ಬಿಟ್ಟು ಹೋಗಲು ಅವನು ಸ್ವಸ್ಥಬುದ್ಧಿಯುಳ್ಳವನಾದನು. (ಮಾರ್ಕ 5:1–20)

14 ಸುಮಾರು 12 ವರ್ಷಗಳಿಂದ ರಕ್ತಕುಸುಮ ರೋಗವಿದ್ದ ಒಬ್ಬ ಸ್ತ್ರೀ ಬಂದು, ನಾನು ಯೇಸು ಕ್ರಿಸ್ತರ ಉಡುಪನ್ನು ಮುಟ್ಟಿದರೆ ಸಾಕು ಗುಣ ಹೊಂದುವೆನು ಎಂದು ನೆನಸಿ ಹಿಂದಿನಿಂದ ಬಂದು ಅವರ ಉಡುಪನ್ನು ಮುಟ್ಟಿದಳು, ಕೂಡಲೇ ರಕ್ತ ಹರಿಯುವುದು ನಿಂತಿತು. (ಮಾರ್ಕ 5:25–34)

15 ಯಾಯೀರನೆಂಬ ಒಬ್ಬ ಅಧಿಕಾರಿಯ ಮಗಳು ಅಸ್ವಸ್ಥಳಾದಾಗ ಯೇಸು ಕ್ರಿಸ್ತರು ಅವನ ಮನೆ ಮುಟ್ಟುವದರೊಳಗೆ ಅವಳು ತೀರಿಹೋಗಿದ್ದಳು. ಆಗ ಕ್ರಿಸ್ತರು– 'ತಲಿಥಾ ಕೂಮ್' (ಅಂದರೆ ಅಮ್ಮಣ್ಣೀ, ಏಳೆನ್ನುತ್ತೇನೆ) ಅಂದರು. ಕೂಡಲೇ ಅವಳು ಎದ್ದು ನಡೆದಾಡಿದಳು. (ಮಾರ್ಕ 5:35–43)

16 ಇಬ್ಬರು ಕುರುಡರು– ಯೇಸುವೇ, ನಮ್ಮನ್ನು ಕರುಣಿಸು ಎಂದು ಹೇಳಿದಾಗ ಕ್ರಿಸ್ತರು ಅವರ ಕಣ್ಣುಗಳನ್ನು ಮುಟ್ಟಿ 'ನೀವು ನಂಬಿದಂತೆ ನಿಮಗಾಗಲಿ' ಅಂದರು. ಕೂಡಲೇ ಅವರಿಗೆ ಕಣ್ಣುಗಳು ಬಂದವು. (ಮತ್ತಾಯ 9:27–30)

17 ದೆವ್ವ ಹಿಡಿದ ಒಬ್ಬ ಮೂಕನನ್ನು ಕ್ರಿಸ್ತರ ಬಳಿಗೆ ತರಲು– ಅವರು ದೆವ್ವವನ್ನು ಬಿಡಿಸಿದ ಮೇಲೆ ಮೂಕನು ಮಾತಾಡುವವನಾದನು. (ಮತ್ತಾಯ 9:32–34)

18 ಬೇತ್ಸಥಾ ಎಂಬ ಕೊಳದ ಬಳಿಯಲ್ಲಿ 38 ವರ್ಷಗಳಿಂದ ರೋಗಿಯಾಗಿ ಬಿದ್ದಿದ್ದ ಒಬ್ಬ ಮನುಷ್ಯನನ್ನು ಕಂಡು– 'ನಿನಗೆ ಸ್ವಸ್ಥವಾಗಲಿಕ್ಕೆ ಮನಸ್ಸುಂಟೋ?' ಎಂದು ಕೇಳಿ, 'ಎದ್ದು ನಿನ್ನ ಹಾಸಿಗೆಯನ್ನು ಹೊತ್ತುಕೊಂಡು ನಡೆ' ಎಂದರು. ಕೂಡಲೇ ಅವನು ಸ್ವಸ್ಥನಾಗಿ ತನ್ನ ಹಾಸಿಗೆಯನ್ನು ಹೊತ್ತುಕೊಂಡು ಹೋದನು. (ಯೋಹಾನ 5:1–9)

19 ತನ್ನ ಉಪದೇಶ ಕೇಳಲು ಬಂದಿದ್ದ ಸುಮಾರು ಐದು ಸಾವಿರದಷ್ಟು ಪುರುಷರೇ ಇದ್ದ ಗುಂಪಿಗೆ– ಕೇವಲ ಐದು ರೊಟ್ಟಿ ಮತ್ತು ಎರಡು ಮೀನುಗಳನ್ನು ತೆಗೆದುಕೊಂಡು ದೇವರ ಸ್ತೋತ್ರ ಮಾಡಿ ಜನರಿಗೆ ಬಡಿಸಲಾಗಿ ಅವರು ಊಟಮಾಡಿ ತೃಪ್ತರಾದ ಮೇಲೆ ಉಳಿದ ತುಂಡುಗಳನ್ನು ಕೂಡಿಸಲಾಗಿ 12 ಬುಟ್ಟಿಯಾಯಿತು. (ಮತ್ತಾಯ 14:13–21)

20 ತನ್ನ ಶಿಷ್ಯರು ಪ್ರಯಾಣಿಸುತ್ತಿದ್ದ ದೋಣಿ ಬೆಳಗಿನ ನಾಲ್ಕನೆಯ ಜಾವದಲ್ಲಿ ದಡದಿಂದ ಬಹುದೂರದಲ್ಲಿ ಬಿರುಗಾಳಿಗೆ ಸಿಕ್ಕು ಮುಳುಗುವ ಹಾಗಿದ್ದಾಗ– ದಡದಲ್ಲಿದ್ದ ಕ್ರಿಸ್ತರು ನೀರಿನ ಮೇಲೆ ನಡೆದು ಅವರ ಬಳಿಗೆ ಹೋಗಿ ದೋಣಿಯನ್ನು ಹತ್ತಿದಾಗ ಎಲ್ಲಾ ಶಾಂತವಾಗಿ ಎಲ್ಲರೂ ಸುರಕ್ಷಿತವಾಗಿ ದಡ ಸೇರಿದರು. (ಮತ್ತಾಯ 14:22–33)

21 ಯೇಸು ಕ್ರಿಸ್ತರು ಮತ್ತು ಅವರ ಶಿಷ್ಯರು ದಡಕ್ಕೆ ಮುಟ್ಟಿದಾಗ ಆ ಊರಿನ ಜನರು ಆತನ ಗುರುತು ಹಿಡಿದು, ಆ ಸುತ್ತಲಿನ ಸೀಮೆಗೆಲ್ಲಾ ಹೇಳಿ ಕಳುಹಿಸಿ ಮೈಯಲ್ಲಿ ನೆಟ್ಟಗಿಲ್ಲದವರನ್ನೆಲ್ಲಾ ಕರೆಕಳುಹಿಸಿ ನಿನ್ನ ಉಡುಪಿನ ಗೊಂಡೆಯನ್ನಾದರೂ ಮುಟ್ಟಗೊಡಿಸಬೇಕೆಂದು ಬೇಡಿಕೊಂಡರು. ಮುಟ್ಟಿದವರೆಲ್ಲರೂ ಸ್ವಸ್ಥರಾದರು. (ಮತ್ತಾಯ 14:34–36)

22 ಯೇಸು ಕ್ರಿಸ್ತರು ಒಂದು ಮನೆಯಲ್ಲಿ ಇಳುಕೊಂಡಿದ್ದಾಗ ಅನ್ಯ ಮತಸ್ಥಳಾದ ಒಬ್ಬ ಹೆಂಗಸು ಬಂದು ಆತನ ಪಾದಗಳಿಗೆ ಬಿದ್ದು, ನನ್ನ ಮಗಳಿಗೆ ದೆವ್ವ ಹಿಡಿದಿದೆ ತಾವು ಬಂದು ಬಿಡಿಸಬೇಕೆಂದು ಬೇಡಿಕೊಂಡಳು. ಅದಕ್ಕೆ ಯೇಸು ಕ್ರಿಸ್ತರು 'ದೆವ್ವವು ನಿನ್ನ ಮಗಳನ್ನು ಬಿಟ್ಟು ಬಿಟ್ಟಿದೆ, ಹೋಗು' ಅಂದರು. ಆಕೆ ಮನೆಗೆ ಹೋಗಿ ನೋಡಲಾಗಿ ಮಗಳಿಗೆ ಹಿಡಿದಿದ್ದ ದೆವ್ವವು ಬಿಟ್ಟು ಹೋಗಿತ್ತು. (ಮಾರ್ಕ 7:24–30)

23 ಗಲಿಲಾಯ ಊರಿನಲ್ಲಿ ತೊದಲು ಮಾತಾಡುವ ಒಬ್ಬ ಕಿವುಡನನ್ನು ಯೇಸು ಕ್ರಿಸ್ತರ ಬಳಿಗೆ ಕರತಂದರು. ಆಗ ಯೇಸು ತನ್ನ ಬೆರಳನ್ನು ಅವನ ಕಿವಿಗಳಲ್ಲಿ ಇಟ್ಟು; ಅವನ ನಾಲಿಗೆಯನ್ನು ಮುಟ್ಟಿ, ಆಕಾಶದ ಕಡೆಗೆ ನೋಡಿ "ಎಪ್ಫಥಾ" (ತೆರೆಯಲಿ)ಎಂದರು. ಹೇಳುತ್ತಲೇ ಅವನ ಕಿವಿಗಳು ತೆರೆದವು; ನಾಲಿಗೆಯ ಕಟ್ಟು ಬಿಚ್ಚಿ ಹೋಯಿತು; ಅವನು ಸ್ಪಷ್ಟವಾಗಿ ಮಾತನಾಡಿದನು. (ಮಾರ್ಕ 7:31–35)

24 ಅಡವಿಯಲ್ಲಿ ಮೂರು ದಿವಸಗಳಿಂದ ತನ್ನ ಉಪದೇಶಗಳನ್ನು ಕೇಳುತ್ತಿದ್ದ ಸುಮಾರು 4000 ಮಂದಿ ಗಂಡಸರೇ ಇದ್ದ ಗುಂಪನ್ನು ನೋಡಿ ಕನಿಕರಪಟ್ಟು– 'ಇವರನ್ನು ಉಪವಾಸವಾಗಿ ಕಳುಹಿಸಿಬಿಡುವುದಕ್ಕೆ ನನಗೆ ಮನಸ್ಸಿಲ್ಲ; ದಾರಿಯಲ್ಲಿ ಬಳಲಿ ಹೋದಾರು' ಎಂದು ಹೇಳಿ; ಅವರ ಬಳಿಯಲ್ಲಿದ್ದ ಕೇವಲ ಏಳು ರೊಟ್ಟಿ ಮತ್ತು ಕೆಲವು ಸಣ್ಣ ಮೀನುಗಳನ್ನು ತೆಗೆದುಕೊಂಡು ದೇವರ ಸ್ತೋತ್ರಮಾಡಿ ಮುರಿದು ಹಂಚಿದರು. ಎಲ್ಲರೂ ಊಟಮಾಡಿ ತೃಪ್ತರಾದರು. ಮಿಕ್ಕ ತುಂಡುಗಳನ್ನು ಕೂಡಿಸಲಾಗಿ ಏಳು ಬುಟ್ಟಿ ತುಂಬಿದವು. (ಮತ್ತಾಯ 15:32–39)



25 ಬೇತ್ಸಾಯಿದ ಎಂಬ ಊರಿನಲ್ಲಿ ಒಬ್ಬ ಕುರುಡನನ್ನು ನೋಡಿ, ಅವನ ಕಣ್ಣುಗಳಲ್ಲಿ ಉಗುಳಿ ಆತನ ಮೇಲೆ ಕೈಯಿಟ್ಟಾಗ ಅವನ ಕಣ್ಣುಗಳು ಮಂಜುಮಂಜಾಗಿ ಕಂಡವು; ಪುನಃ ಅವನ ಕಣ್ಣುಗಳ ಮೇಲೆ ಕೈಯಿಟ್ಟಾಗ ಎಲ್ಲವೂ ಸ್ಪಷ್ಟವಾಗಿ ಕಾಣಿಸಿತು. (ಮಾರ್ಕ 8:22–26)

26 ಯೇಸು ಕ್ರಿಸ್ತರು ದಾರಿಯಲ್ಲಿ ಹಾದು ಹೋಗುತ್ತಿರುವಾಗ ಒಬ್ಬ ಹುಟ್ಟು ಕುರುಡನನ್ನು ಕಂಡು; ನೆಲದ ಮೇಲೆ ಉಗುಳಿ ಆ ಉಗುಳಿನಿಂದ ಕೆಸರು ಮಾಡಿ ಆ ಕೆಸರನ್ನು ಅವನ ಕಣ್ಣುಗಳಿಗೆ ಹಚ್ಚಿ– 'ನೀನು ಸಿಲೋವ ಕೊಳಕ್ಕೆ ಹೋಗಿ ತೊಳಕೊ' ಎಂದು ಹೇಳಿದರು ಅವನು ತೊಳಕೊಂಡು ಕಣ್ಣು ಹೊಂದಿದವನಾಗಿ ಬಂದನು. (ಯೋಹಾನ 9:1–7)

27 ಒಬ್ಬನು ಯೇಸು ಕ್ರಿಸ್ತರ ಹತ್ತಿರಕ್ಕೆ ಬಂದು ಮೊಣಕಾಲೂರಿ ವಂದಿಸಿ– ಸ್ವಾಮಿ, ನನ್ನ ಮಗನನ್ನು ಕರುಣಿಸು, ಅವನು ಮೂರ್ಛಾ ರೋಗದಿಂದ ಬಹಳ ಕಷ್ಟಪಡುತ್ತಾನೆ ಅಂದನು. ಆಗ ಕ್ರಿಸ್ತರು ಆ ಮಗನಲ್ಲಿದ್ದ ದೆವ್ವವನ್ನು ಗದರಿಸಲು ಅದು ಅವನನ್ನು ಬಿಟ್ಟು ಹೋಯಿತು; ಆ ಕ್ಷಣವೇ ಆ ಹುಡುಗನಿಗೆ ಸ್ವಸ್ಥವಾಯಿತು. (ಮತ್ತಾಯ 17:14–21)

28 ಯೇಸು ಕ್ರಿಸ್ತರು ತಮ್ಮ ಅಪೋಸ್ತಲನಾದ ಪೇತ್ರನಿಗೆ– 'ನೀನು ಸಮುದ್ರಕ್ಕೆ ಹೋಗಿ ಗಾಳಾ ಹಾಕಿ ಮೊದಲು ಸಿಕ್ಕುವ ಮೀನನ್ನು ಎತ್ತು; ಅದರ ಬಾಯಿ ತೆರೆದು ನೋಡಿದರೆ ಅದರಲ್ಲಿ ಒಂದು ರೂಪಾಯಿ ಸಿಕ್ಕುವುದು; ಅದನ್ನು ತೆಗೆದುಕೊಂಡು ಹೋಗಿ ನಮ್ಮಿಬ್ಬರ ಮಂಡೇ ತೆರಿಗೆಯನ್ನು ಕೊಡು' ಎಂದು ಹೇಳಿದರು. ಹಾಗೆಯೇ ಆಯಿತು. (ಮತ್ತಾಯ 17:24–27)

29 ಫರಿಸಾಯರು, ದೆವ್ವ ಹಿಡಿದು ಕುರುಡನೂ ಮೂಕನೂ ಆಗಿರುವ ಒಬ್ಬನನ್ನು ಯೇಸು ಕ್ರಿಸ್ತರ ಬಳಿಗೆ ತಂದರು; ಕ್ರಿಸ್ತರು ಅವನನ್ನು ಸ್ವಸ್ಥ ಮಾಡಲು ಆ ಮೂಕನಿಗೆ ಬಾಯಿ ಕಣ್ಣು ಎರಡೂ ಬಂದವು. (ಮತ್ತಾಯ 12:22)

30 ಹದಿನೆಂಟು ವರ್ಷಗಳಿಂದ ದೆವ್ವ ಹಿಡಿದು ಮೈಯಲ್ಲಿ ರೋಗವುಳ್ಳ ಒಬ್ಬ ಸ್ತ್ರೀ ಇದ್ದಳು. ಆಕೆಯ ನಡು ಬೊಗ್ಗಿಹೋಗಿ ಸ್ವಲ್ಪವಾದರೂ ಮೈಯನ್ನು ಮೇಲಕ್ಕೆ ಎತ್ತಲಾರದೇ ಇದ್ದಳು. ಯೇಸು ಕ್ರಿಸ್ತರು ಆಕೆಯನ್ನು ನೋಡಿ ಆಕೆಗೆ– ಅಮ್ಮಾ, 'ನಿನಗೆ ರೋಗ ಬಿಡುಗಡೆಯಾಯಿತು' ಎಂದು ಹೇಳಿ ಆಕೆಯ ಮೇಲೆ ತನ್ನ ಕೈಗಳನ್ನಿಟ್ಟರು; ಇಟ್ಟ ಕೂಡಲೇ ಆಕೆ ನೆಟ್ಟಗಾದಳು, ದೇವರನ್ನು ಕೊಂಡಾಡಿದಳು. (ಲೂಕ 13:10–13)

31 ಯೇಸು ಕ್ರಿಸ್ತರು ತನ್ನೆದುರಿಗೆ ಮೈಯೆಲ್ಲಾ ನೀರು ತುಂಬಿಕೊಂಡು ಬಾತುಹೋಗಿದ್ದ ಒಬ್ಬ ಮನುಷ್ಯನು ನಿಂತಿರುವುದನ್ನು ನೋಡಿ– ಅವನ ಕೈ ಹಿಡಿದು ಅವನಿಗೆ ವಾಸಿಮಾಡಿ ಕಳುಹಿಸಿದರು. (ಲೂಕ 14:1–4)

32 ಯೇಸು ಕ್ರಿಸ್ತರು ಒಂದು ಹಳ್ಳಿಗೆ ಬಂದಾಗ ಹತ್ತು ಮಂದಿ ಕುಷ್ಠರೋಗಿಗಳು ಬಂದು ಆತನೆದುರಿಗೆ ದೂರದಲ್ಲಿ ನಿಂತು– ಯೇಸುವೇ, ಗುರುವೇ, ನಮ್ಮ ಮೇಲೆ ದಯವಿಡು ಎಂದು ಕೂಗಿಹೇಳಿದರು. ಕ್ರಿಸ್ತರು ಅವರಿಗೆ 'ನೀವು ಹೋಗಿ ಯಾಜಕರಿಗೆ ಮೈ ತೋರಿಸಿಕೊಳ್ಳಿರಿ' ಎಂದು ಹೇಳಿದರು. ಅವರು ಹೋಗುತ್ತಿರುವಾಗಲೇ ಗುಣ ಹೊಂದಿದರು. (ಲೂಕ 17:11–19)

33 ಯೇಸು ಕ್ರಿಸ್ತರಿಗೆ ಪ್ರಿಯನಾಗಿದ್ದ ಲಾಜರನೆಂಬ ಒಬ್ಬನು ನಾಲ್ಕು ದಿನಗಳ ಹಿಂದೆ ತೀರಿಹೋಗಿ ಅವನ ಸಮಾಧಿ ಸಹ ಮಾಡಲಾಗಿರುತ್ತದೆ. ಅವನ ಸಹೋದರಿಯರು ಗೋಳಾಡುವುದನ್ನು ನೋಡಿ ಕ್ರಿಸ್ತರು ಕಣ್ಣೀರು ಬಿಟ್ಟರು. ಹಾಗೂ ಸಮಾಧಿಗೆ ಬಂದು ಸಮಾಧಿಯ ಕಲ್ಲನ್ನು ತೆಗೆಸಿ, ಪ್ರಾರ್ಥಿಸಿ, ದೊಡ್ಡ ಶಬ್ದದಿಂದ– 'ಲಾಜರನೇ, ಹೊರಗೆ ಬಾ' ಎಂದು ಕೂಗಿದರು. ಸತ್ತಿದ್ದವನು ಹೊರಗೆ ಬಂದನು. (ಯೋಹಾನ 11:1–44)

34 ಯೆರಿಕೋವಿನ ದಾರಿಯ ಮಗ್ಗುಲಲ್ಲಿ ಕೂತಿದ್ದ ಕುರುಡ ಭಿಕ್ಷುಕನಾದ ಬಾರ್ತಿಮಾಯನೆಂಬುವವನು– ಯೇಸುವೇ, ನನ್ನನ್ನು ಕರುಣಿಸು ಎಂದು ಕೂಗಿದನು. ಕ್ರಿಸ್ತರು ಅವನಿಗೆ, 'ನಾನು ನಿನಗೆ ಏನು ಮಾಡಬೇಕೆಂದು ಕೋರುತ್ತೀ' ಎಂದು ಕೇಳಲು ಆ ಕುರುಡನು– ನನಗೆ ಕಣ್ಣು ಬರುವಂತೆ ಮಾಡಬೇಕು ಗುರುವೇ ಅಂದನು. ಕ್ರಿಸ್ತರು ಅವನಿಗೆ– 'ಹೋಗು, ನಿನ್ನ ನಂಬಿಕೆಯೇ ನಿನ್ನನ್ನು ಸ್ವಸ್ಥಮಾಡಿದೆ' ಎಂದು ಹೇಳಿದರು; ಕೂಡಲೇ ಅವನಿಗೆ ಕಣ್ಣು ಬಂದವು. (ಮಾರ್ಕ 10:46–52)

35 ಯೇಸು ಕ್ರಿಸ್ತರು ದಾರಿಯಲ್ಲಿ ಹೋಗುತ್ತಿರುವಾಗ ಹಸಿದು ಒಂದು ಅಂಜೂರದ ಹಣ್ಣಿನ ಮರವನ್ನು ಕಂಡು ಅದರ ಹತ್ತಿರಕ್ಕೆ ಹೋಗಿ ನೋಡಲಾಗಿ, ಅದರಲ್ಲಿ ಬರೀ ಎಲೆಗಳೇ ಹೊರತು ಹಣ್ಣು ಇಲ್ಲದ್ದರಿಂದ ಅದಕ್ಕೆ– 'ಇನ್ನು ಮೇಲೆ ನಿನ್ನಲ್ಲಿ ಫಲವು ಎಂದೆಂದಿಗೂ ಆಗದೆ ಹೋಗಲಿ' ಎಂದು ಶಪಿಸಿದರು. ಆ ಕ್ಷಣವೇ ಆ ಅಂಜೂರದ ಮರವು ಒಣಗಿಹೋಯಿತು.(ಮತ್ತಾಯ 21:18–19)

36 ಯೇಸು ಕ್ರಿಸ್ತರನ್ನು ಶಿಲುಬೆಗೆ ಹಾಕುವುದಕ್ಕಾಗಿ ಹಿಡಿಯಲು ಬಂದ ಮಲ್ಕನೆಂಬ ಸಿಪಾಯಿಯನ್ನು, ಕ್ರಿಸ್ತರ ಅಪೋಸ್ತಲನಾದ ಪೇತ್ರನು ಕತ್ತಿಯಿಂದ ಹೊಡೆದಾಗ



ಅವನ ಬಲ ಕಿವಿ ಕತ್ತರಿಸಿ ಹೋಯಿತು. ಆಗ ಯೇಸು ಕ್ರಿಸ್ತರು ಪೇತ್ರನಿಗೆ 'ನಿನ್ನ ಕತ್ತಿಯನ್ನು ಒರೆಯಲ್ಲಿ ಹಾಕು; ಕತ್ತಿಯನ್ನು ಹಿಡಿದವರು ಕತ್ತಿಯಿಂದಲೇ ಸಾಯುವರು' ಎಂದು ಹೇಳಿ ಆ ಸಿಪಾಯಿಯ ಕಿವಿಯನ್ನು ಮುಟ್ಟಿ ಅವನಿಗೆ ವಾಸಿಮಾಡಿದರು. (ಲೂಕ 22:47–51 & ಮತ್ತಾಯ 26:52–53)

37 ಯೇಸು ಕ್ರಿಸ್ತರನ್ನು ಶಿಲುಬೆಗೆ ಹಾಕಿದ ನಂತರ ಆತನ ಶಿಷ್ಯರು ಕ್ರಿಸ್ತರ ಉಪದೇಶಗಳನ್ನು ಸಾರುವುದನ್ನು ಬಿಟ್ಟು ತಮ್ಮ ಕುಲಕಸುಬಾದ ಮೀನು ಹಿಡಿಯುವುದಕ್ಕೆ ಹಿಂದಿರುಗಿ ಹೋದಾಗ, ಆ ರಾತ್ರಿಯಲ್ಲಿ ಅವರಿಗೆ ಒಂದು ಮೀನೂ ಸಿಕ್ಕಲಿಲ್ಲ. ಬೆಳಗಾದಾಗ ಪುನರುತ್ಥಾನರಾದ ಕ್ರಿಸ್ತರು ಅವರೆದುರಿಗೆ ನಿಂತು, 'ಮಕ್ಕಳಿರಾ ನಿಮಗೆ ಊಟಕ್ಕೆ ಏನೂ ಇಲ್ಲವೇ ಎಂದು ಕೇಳಿ, ನೀವು ದೋಣಿಯ ಬಲಗಡೆಯಲ್ಲಿ ಬಲೆ ಬೀಸಿರಿ' ಎಂದು ಹೇಳಲು; ಅವರು ಹಾಗೆಯೇ ಬಲೆ ಬೀಸಿದಾಗ ಬಲೆಯನ್ನು ಎಳೆಯಲು ಆಗದಷ್ಟು ಮೀನುಗಳು ಸಿಕ್ಕಿದವು. (ಯೋಹಾನ 21:1–6)

ಇದಲ್ಲದೇ ಯೇಸು ಮಾಡಿದ್ದು ಇನ್ನೂ ಬಹಳವಿದೆ; ಅದನ್ನೆಲ್ಲಾ ಒಂದೊಂದಾಗಿ ಬರೆಯುವುದಾದರೆ ಬರೆಯಬೇಕಾದ ಪುಸ್ತಕವನ್ನು ಲೋಕವೇ ಹಿಡಿಸದೆ ಹೋದೀತು. (ಯೋಹಾನ 21:25)

ಯೇಸು ಹೇಳಿದ್ದು– 'ನಿಮಗೆ ನಿಜನಿಜವಾಗಿ ಹೇಳುತ್ತೇನೆ, ನನ್ನನ್ನು ನಂಬುವವನು ನಾನು ನಡೆಸುವ ಕ್ರಿಯೆಗಳನ್ನು ತಾನೂ ನಡೆಸುವನು; ಮತ್ತು ಅವುಗಳಿಗಿಂತ ಮಹತ್ತಾದ ಕ್ರಿಯೆಗಳನ್ನು ನಡೆಸುವನು. ಇದಲ್ಲದೆ ನೀವು ನನ್ನ ಹೆಸರಿನಲ್ಲಿ ಏನೇನು ಬೇಡಿಕೊಳ್ಳುವಿರೊ ಅದನ್ನು ನೆರವೇರಿಸುವೆನು.' (ಯೋಹಾನ 14:12–14)

ದೇವರೆಂದರೆ ಸರ್ವಶಕ್ತನು, ಸರ್ವಜ್ಞಾನಿಯೂ, ಸರ್ವವ್ಯಾಪಿಯೂ ಆಗಿರಬೇಕು ಆತನಿಗೆ ಯಾವುದೂ ಅಸಾಧ್ಯವಾಗಿರಬಾರದು. ಯೇಸು ಕ್ರಿಸ್ತರು ಎಲ್ಲಾ ತರಹದ ಅದ್ಭುತ/ಸೂಚಕ ಕಾರ್ಯಗಳನ್ನು ಮಾಡಿರುತ್ತಾರೆ. ಪ್ರಕೃತಿಯ ಮೇಲೆ, ದುರಾತ್ಮಗಳ ಮೇಲೆ, ಮರಣ ಮತ್ತು ಅಂಗವೈಕಲ್ಯತೆಗಳ ಮೇಲೆ ತನ್ನ ಅಧಿಕಾರವನ್ನು ಪ್ರದರ್ಶಿಸಿದ್ದು ಅವರಿಗೆ ಯಾವುದೂ ಅಸಾಧ್ಯವಾಗಿರಲಿಲ್ಲ ಏಕೆಂದರೆ ಅವರು ದೇವರು. **ಅವರನ್ನು ಅಡ್ಡಬಿದ್ದು ಆರಾಧಿಸೋಣ.**

~*~*~*~

ದಿ: 04–04–2013 ರಂದು ವಿಜಯ ಕರ್ನಾಟಕ ದಿನಪತ್ರಿಕೆಯಲ್ಲಿ ರಾಜ್ಯವ್ಯಾಪಿ ಪ್ರಕಟವಾದ ಲೇಖನ



## 16. ವ್ಯಭಿಚಾರದಲ್ಲಿ ಸಿಕ್ಕಿಬಿದ್ದ ಒಬ್ಬ ಸ್ತ್ರೀಯನ್ನು ಯೇಸು ಕ್ರಿಸ್ತರ ಮುಂದೆ ತೀರ್ಪಿಗಾಗಿ ನಿಲ್ಲಿಸಿದ್ದು !

**"ನಿಮಗೆ ಮುಕ್ತಿ ಬೇಕಾದರೆ ಯೇಸುವನ್ನೇ ಆರಾಧಿಸಿ, ನೀವು ಕಲ್ಪಿಸಿಕೊಳ್ಳಬಲ್ಲ ಎಲ್ಲಾ ದೇವರ ಭಾವನೆಗಳಿಗಿಂತ ಮಿಗಿಲಾಗಿರುವವನು ಆತ. ಅವನು ದೇವರು ಎಂದು ಭಾವಿಸಿದರೆ ಪೂಜಿಸಿ. ಯಾರು ಅವನನ್ನು ಮಾನವ ಎಂದು ಕರೆದು ಪೂಜಿಸುವವರೋ ಅವರು ಈಶ್ವರನಿಂದೆಯನ್ನು ಮಾಡುತ್ತಿರುವರು." – ಸ್ವಾಮಿ ವಿವೇಕಾನಂದರು**

**(ಕೃತಿಶ್ರೇಣಿ, ಸಂಪುಟ–7, ಪ್ರವಚನ ಸಾರಾಂಶ, ಪುಟ ಸಂಖ್ಯೆ : 331)**

ಯೇಸು ಕ್ರಿಸ್ತರು ದೇವಾಲಯದಲ್ಲಿ ಕೂತುಕೊಂಡು ಉಪದೇಶ ಮಾಡುತ್ತಿರುವಲ್ಲಿ ಶಾಸ್ತ್ರಿಗಳೂ ಫರಿಸಾಯರೂ ವ್ಯಭಿಚಾರದಲ್ಲಿ ಸಿಕ್ಕಿದ ಒಬ್ಬ ಸ್ತ್ರೀಯನ್ನು ಅವರ ಬಳಿಗೆ ತಂದು ಆಕೆಯನ್ನು ನಡುವೆ ನಿಲ್ಲಿಸಿ– ಯೇಸುವೇ, ಈ ಸ್ತ್ರೀ ವ್ಯಭಿಚಾರ ಮಾಡುತ್ತಿರುವಾಗಲೇ ಕೈಗೆ ಸಿಕ್ಕಿದಳು. ಇಂಥವಳನ್ನು ಕಲ್ಲಿನಿಂದ ಹೊಡೆದು ಕೊಲ್ಲಬೇಕೆಂದು ಮೋಶೆಯು ಧರ್ಮಶಾಸ್ತ್ರದಲ್ಲಿ ನಮಗೆ ಅಪ್ಪಣೆ ಕೊಟ್ಟಿದ್ದಾನೆ; ಈಕೆಯ ವಿಷಯದಲ್ಲಿ ನೀನು ಏನು ಹೇಳುತ್ತೀ ಎಂದು ಆತನನ್ನು ಕೇಳಿದರು. ಆತನ ಮೇಲೆ ತಪ್ಪುಹೊರಿಸುವದಕ್ಕೆ ಏನಾದರೂ ಒಂದು ಕಾರಣ ಬೇಕಾಗಿದ್ದರಿಂದ ಈತನು ಏನನ್ನುತ್ತಾನೋ ನೋಡೋಣ ಎಂದು ಹಾಗೆ ಕೇಳಿದರು.

ಅವರು ಆತನನ್ನು ಬಿಡದೆ ಕೇಳುತ್ತಿರುವಾಗ ಆತನು ಅವರಿಗೆ– **'ನಿಮ್ಮಲ್ಲಿ ಪಾಪವಿಲ್ಲದವನು ಯಾರೋ ಅವನೇ ಮೊದಲು ಆಕೆಯನ್ನು ಕಲ್ಲಿನಿಂದ ಹೊಡೆಯಲಿ'** ಎಂದು ಹೇಳಿದನು. ಆ ಮಾತನ್ನು ಕೇಳಿ ತಾವೇ ಪಾಪಿಗಳೆಂದು ಮನಸ್ಸಿನಲ್ಲಿ ತಿಳಿದುಕೊಂಡು ಹಿರಿಯರು ಮೊದಲುಗೊಂಡು ಕಿರಿಯರ ವರೆಗೂ ಒಬ್ಬರ ಹಿಂದೊಬ್ಬರು ಹೊರಗೆ ಹೋದರು; ಯೇಸು ಒಬ್ಬರೇ ಉಳಿದರು, ಮತ್ತು ನಡುವೆ ನಿಂತಿದ್ದ ಸ್ತ್ರೀ ಅಲ್ಲೇ ಇದ್ದಳು, ಯೇಸು ನೆಟ್ಟಗೆ ಕೂತುಕೊಂಡು ಆ ಸ್ತ್ರೀಯನ್ನೇ ಹೊರತು ಯಾರನ್ನೂ ನೋಡದೆ ಆಕೆಗೆ– ಅಮ್ಮಾ, 'ನಿನ್ನ ಮೇಲೆ ತಪ್ಪುಹೊರಿಸುವವರು ಎಲ್ಲಿದ್ದಾರೆ? ನಿನಗೆ ಯಾರೂ ಶಿಕ್ಷೆಯನ್ನು



ವಿಧಿಸಲಿಲ್ಲವೋ?' ಅಂದರು ಅದಕ್ಕೆ ಆಕೆ ಯಾರೂ ವಿಧಿಸಲಿಲ್ಲ, ಸ್ವಾಮೀ, ಅಂದಳು. ಯೇಸು ಆಕೆಗೆ– 'ನಾನೂ ನಿನಗೆ ಶಿಕ್ಷೆ ವಿಧಿಸುವುದಿಲ್ಲ; ಹೋಗು, ಇನ್ನು ಮೇಲೆ ಪಾಪ ಮಾಡಬೇಡ' ಎಂದು ಹೇಳಿದರು.(ಯೋಹಾನ 8:1–11)

**ಒಂದು ವೇಳೆ ಮೇಲಿನ ಸಂದರ್ಭದಲ್ಲಿ ಫರಿಸಾಯರ ಗುಂಪಿನಲ್ಲಿ ನೀವು ಇದ್ದಿದ್ದರೆ ಆ ಸ್ತ್ರೀಯನ್ನು ಕಲ್ಲಿನಿಂದ ಹೊಡೆಯುತ್ತಿದ್ದಿರೇ?**

ಯೇಸು ಕ್ರಿಸ್ತರು ಆ ಸ್ತ್ರೀಯನ್ನು ಕಲ್ಲಿನಿಂದ ಹೊಡೆದು ಕೊಲ್ಲಬಹುದಾಗಿತ್ತು. ಯಾಕೆಂದರೆ ಆತನು "ಪರಿಶುದ್ಧನೂ ನಿರ್ದೋಷಿಯೂ ನಿಷ್ಕಳಂಕನೂ ಪಾಪಿಗಳಲ್ಲಿ ಸೇರದೆ ಪ್ರತ್ಯೇಕವಾಗಿರುವವನೂ" ಎಂದು ಪವಿತ್ರ ಸತ್ಯವೇದ ಹೇಳುತ್ತದೆ. (ಇಬ್ರಿಯ 7:26)

'ದೇವರು ಲೋಕಕ್ಕೆ ರಕ್ಷಣೆ (ಎಲ್ಲಾ ಮಾನವರಿಗೂ ಮೋಕ್ಷ ಪ್ರಾಪ್ತಿ) ಯಾಗಬೇಕೆಂದು ಯೇಸು ಕ್ರಿಸ್ತರನ್ನು ಕಳುಹಿಸಿಕೊಟ್ಟನೇ ಹೊರತು ತೀರ್ಪು ಮಾಡುವುದಕ್ಕಾಗಿ ಕಳುಹಿಸಲಿಲ್ಲ.' ಯೇಸು ಕ್ರಿಸ್ತರು ದುಷ್ಟರನ್ನು ಸಂಹಾರ ಮಾಡಿ ಶಿಷ್ಟರನ್ನು ರಕ್ಷಿಸಲಿಕ್ಕೆ ಈ ಲೋಕಕ್ಕೆ ಬಂದವರಲ್ಲ. ಅವರು, 'ಕೆಟ್ಟು ಹೋಗಿರುವದನ್ನು (ಪಾಪಿಗಳನ್ನು) ಹುಡುಕಿ ರಕ್ಷಿಸುವುದಕ್ಕೆ ಈ ಲೋಕಕ್ಕೆ ಬಂದವರು.'

ಸ್ವರ್ಗ ರಾಜ್ಯದಲ್ಲಿ ಅಶುದ್ಧವಾದುದು ಒಂದೂ ಸೇರುವುದಿಲ್ಲ, ಅಸಹ್ಯವಾದದ್ದನ್ನೂ ಸುಳ್ಳಾದದ್ದನ್ನೂ ನಡಿಸುವವನು ಸೇರುವುದಿಲ್ಲ; ನಾನು ಪಾಪಿ; ನನ್ನ ಪಾಪಗಳಿಗಾಗಿಯೇ ಕ್ರಿಸ್ತರು ಶಿಲುಬೆಯ ಮೇಲೆ ಶಿಕ್ಷೆಯನ್ನು ಅನುಭವಿಸಿದರು ಎಂಬುದನ್ನು ನಂಬಿ ಅವರ ರಕ್ತದಿಂದ ತಮ್ಮ ಪಾಪಗಳಿಗೆ ಮುಕ್ತಿಯನ್ನು ಹೊಂದಿದವರ ಹೆಸರುಳ್ಳ ಜೀವಬಾಧ್ಯರ(ಮೋಕ್ಷ ಪ್ರಾಪ್ತರ) ಪುಸ್ತಕದಲ್ಲಿ ಹೆಸರುಳ್ಳವರು ಮಾತ್ರ ಸೇರುತ್ತಾರೆ. (ಪ್ರಕಟನೆ 21:27)

'ದೇವರು ಕನಿಕರವೂ, ದಯೆಯೂ, ದೀರ್ಘಶಾಂತಿಯೂ, ಪ್ರೀತಿಯೂ, ನಂಬಿಕೆಯೂ ಉಳ್ಳವನು; ದೋಷ ಅಪರಾಧಿಗಳನ್ನು ಕ್ಷಮಿಸುವವನೂ; ಆದರೂ ಅಪರಾಧಗಳನ್ನು ಶಿಕ್ಷಿಸದೆ ಬಿಡದವನಾಗಿದ್ದಾನೆ.' ಏಕೆಂದರೆ ದೇವರು ನೀತಿಯುಳ್ಳ ನ್ಯಾಯಾಧಿಪತಿಯಾಗಿದ್ದಾನೆ. (ವಿಮೋಚನಕಾಂಡ 34:7)

ಪವಿತ್ರ ಸತ್ಯವೇದ ಹೇಳುತ್ತದೆ ಮನುಷ್ಯರ ಮನಸಂಕಲ್ಪವು ಚಿಕ್ಕಂದಿನಿಂದಲೇ ಕೆಟ್ಟದ್ದು; 'ನೀತಿವಂತನು ಇಲ್ಲ, ಒಬ್ಬನಾದರೂ ಇಲ್ಲ; ಹೆಚ್ಚುಕಡಿಮೆ ಏನೂ ಇಲ್ಲ. ಎಲ್ಲರೂ ಪಾಪ ಮಾಡಿ ದೇವರ ಮಹಿಮೆಯನ್ನು ಹೊಂದದೆ ಹೋಗಿದ್ದಾರೆ.' (ರೋಮಾ 3:11 ಮತ್ತು 23)

'ದೋಷಗಳನ್ನು ಮುಚ್ಚಿಕೊಳ್ಳುವವನಿಗೆ ಶುಭವಾಗದು; ಅವುಗಳನ್ನು ಒಪ್ಪಿಕೊಂಡು ಬಿಟ್ಟುಬಿಡುವವನಿಗೆ ಕರುಣೆ ದೊರೆಯುವುದು.'

(ಜ್ಞಾನೋಕ್ತಿ 28:13)

'ಯೇಸು ಕ್ರಿಸ್ತರು ನಮ್ಮ ಪಾಪಗಳನ್ನು ನಿವಾರಣೆ ಮಾಡುವ ಯಜ್ಞವಾಗಿದ್ದಾರೆ; ನಮ್ಮ ಪಾಪಗಳನ್ನು ಮಾತ್ರವಲ್ಲದೇ, ಸಮಸ್ತ ಲೋಕದ ಪಾಪಗಳನ್ನು ಸಹ ನಿವಾರಣೆ ಮಾಡುತ್ತಾರೆ.' (1 ಯೋಹಾನನು 2:2)

'ಯೇಸುವಿನ ರಕ್ತವು ಸಕಲ ಪಾಪವನ್ನು ನಿವಾರಣೆ ಮಾಡಿ ನಮ್ಮನ್ನು ಶುದ್ಧಿ ಮಾಡುತ್ತದೆ. ನಮ್ಮಲ್ಲಿ ಪಾಪವಿಲ್ಲವೆಂದು ನಾವು ಹೇಳಿದರೆ ನಮ್ಮನ್ನು ನಾವೇ ಮೋಸಪಡಿಸಿಕೊಳ್ಳುತ್ತೇವೆ ಮತ್ತು ಸತ್ಯವೆಂಬುದು ನಮ್ಮಲ್ಲಿಲ್ಲ. ನಮ್ಮ ಪಾಪಗಳನ್ನು ಒಪ್ಪಿಕೊಂಡು ಅರಿಕೆ ಮಾಡಿದರೆ ಯೇಸು ಕ್ರಿಸ್ತರು ನಂಬಿಗಸ್ತರೂ ನೀತಿವಂತರೂ ಆಗಿರುವುದರಿಂದ ನಮ್ಮ ಪಾಪಗಳನ್ನು ಕ್ಷಮಿಸಿಬಿಟ್ಟು ಸಕಲ ಅನೀತಿಯನ್ನು ಪರಿಹರಿಸಿ ನಮ್ಮನ್ನು ಶುದ್ಧಿಮಾಡುತ್ತಾರೆ.'

(1 ಯೋಹಾನನು 1:7–9)

ಪಾಪವು ಕೊಡುವ ಸಂಬಳ ಮರಣ (ನಿತ್ಯ ನರಕ); ರಕ್ತಧಾರೆಯಿಲ್ಲದೆ ಪಾಪ ಪರಿಹಾರ ಉಂಟಾಗುವುದಿಲ್ಲ ಎಂದು ಎಲ್ಲಾ ಧರ್ಮಶಾಸ್ತ್ರಗಳೂ ಒಪ್ಪಿಕೊಳ್ಳುವಾಗ; ಹೋರಿಗಳ ಮತ್ತು ಹೋತಗಳ ರಕ್ತದಿಂದ ಪಾಪಗಳು ಪರಿಹಾರವಾಗುವುದು ಅಸಾಧ್ಯವಾಗಿರುವಾಗ, ವ್ಯಭಿಚಾರಿಣಿಯಾದ ಆ ಸ್ತ್ರೀಯ ಮತ್ತು ನಮ್ಮೆಲ್ಲರ ದೋಷ ಫಲವನ್ನು ದೇವರು ಯೇಸು ಕ್ರಿಸ್ತರ ಮೇಲೆ ಹಾಕಿದನು. 'ಯೇಸು ಕ್ರಿಸ್ತರು ನಮ್ಮ ಅಪರಾಧಗಳನ್ನೆಲ್ಲಾ ಕ್ಷಮಿಸಿ ನಮ್ಮ ಮೇಲೆ ದೋಷಾರೋಪಣೆ ಮಾಡಿದಂಥ ಆಜ್ಞಾರೂಪವಾಗಿದಂಥ (Charge sheet) ಪತ್ರವನ್ನು ಕೆಡಿಸಿ ಅದನ್ನು ಶಿಲುಬೆಗೆ ಜಡಿದು ಇಲ್ಲದಂತಾಗಿ ಮಾಡಿದರು.' (ಕೊಲೊಸ್ಸೆ 2:14)

ಪರಿಶುದ್ಧರೂ ಪರಿಪೂರ್ಣರೂ ಆಗಿರುವ ಕ್ರಿಸ್ತರು, ಯಜ್ಞದ ಕುರಿಮರಿಯಾಗಿ ಸ್ವಂತ ರಕ್ತವನ್ನೇ ತೆಗೆದುಕೊಂಡು ಒಂದೇ ಸಾರಿ ದೇಹ ಸಮರ್ಪಣೆಮಾಡಿ; ಸಕಲ ಕುಲ ಭಾಷೆ ಪ್ರಜೆ ಜನಾಂಗಗಳವರಿಂದ ಮನುಷ್ಯರನ್ನು ದೇವರಿಗಾಗಿ ಕೊಂಡುಕೊಂಡು 'ಎಲ್ಲಾ ನೆರವೇರಿತು' ಎಂದು ಹೇಳಿ ದೇವರ



ಚಿತ್ತವನ್ನು (ಬಲಿದಾನ) ನೆರವೇರಿಸಿದ್ದರಿಂದಲೇ ನಾವು ಶುದ್ಧರಾದೆವು. ನಮ್ಮ ದ್ರೋಹಗಳ ದೆಸೆಯಿಂದ ಯೇಸು ಕ್ರಿಸ್ತರಿಗೆ ಗಾಯವಾಯಿತು, ನಮ್ಮ ಅಪರಾಧಗಳ ನಿಮಿತ್ತ ಅವರು ಜಜ್ಜಲ್ಪಟ್ಟರು; ನಮಗೆ ಸುಕ್ಷೇಮವನ್ನುಂಟುಮಾಡುವ ದಂಡನೆಯನ್ನು ಅವರು ಅನುಭವಿಸಿದರು.

(ಇಬ್ರಿಯರಿಗೆ ಅಧ್ಯಾಯ 9 ಮತ್ತು 10, ಯೆಶಾಯ 53:5–6)

'ನಾವು ಪಾಪದ ಪಾಲಿಗೆ ಸತ್ತು ನೀತಿವಂತರಾಗಿ ಜೀವಿಸುವಂತೆ ಯೇಸು ಕ್ರಿಸ್ತರು ನಮ್ಮ ಪಾಪಗಳನ್ನು ತಾವೇ ತಮ್ಮ ದೇಹದಲ್ಲಿ ಹೊತ್ತುಕೊಂಡು ಮರಣದ ಕಂಬವನ್ನು(ಶಿಲುಬೆಯನ್ನು) ಏರಿದರು. ಆತನ ಬಾಸುಂಡೆಗಳಿಂದ ನಮಗೆ ಗುಣವಾಯಿತು.' (1 ಪೇತ್ರ 2:24)

'ಎಲ್ಲಾ ಮನುಷ್ಯರು ಮುಕ್ತಿಯನ್ನು ಹೊಂದಿ ಸತ್ಯದ ಜ್ಞಾನಕ್ಕೆ ಸೇರಬೇಕೆಂಬುದು ಯೇಸು ಕ್ರಿಸ್ತರ ಚಿತ್ತವಾಗಿದೆ ಏಕೆಂದರೆ ದೇವರು ಒಬ್ಬನೇ; ದೇವರಿಗೂ ಮನುಷ್ಯರಿಗೂ ಮಧ್ಯಸ್ಥನು ಒಬ್ಬನೇ; ಆತನು ಮನುಷ್ಯನಾಗಿ ಬಂದಿದ್ದ ಕ್ರಿಸ್ತ ಯೇಸುವೇ; ಅವರು ಎಲ್ಲರ ವಿಮೋಚನಾರ್ಥವಾಗಿ ತಮ್ಮ ಪ್ರಾಣವನ್ನೇ ಬಲಿಯಾಗಿ ಅರ್ಪಿಸಿದರು.' (1 ತಿಮೊಥೆ 2:4–5)

**ನಾವು ಪಾಪ ವಿಮೋಚನೆಯನ್ನು ಹೊಂದಿ ನರಕದಿಂದ ಪಾರಾಗಿ ಸ್ವರ್ಗಕ್ಕೆ ಹೋಗಬೇಕಾದರೆ ಏನು ಮಾಡಬೇಕು?**

'ಕರ್ತರಾದ ಯೇಸುವಿನ ಮೇಲೆ ನಂಬಿಕೆಯಿಡಿರಿ, ಆಗ ನೀವು ಮುಕ್ತಿ ಹೊಂದುವಿರಿ, ನಿಮ್ಮ ಮನೆಯವರು ಮುಕ್ತಿ ಹೊಂದುವರು. ಅದೇನೆಂದರೆ ನೀವು ಯೇಸುವನ್ನೇ ಕರ್ತ(ದೇವ)ರೆಂದು ಬಾಯಿಂದ ಅರಿಕೆ ಮಾಡಿಕೊಂಡು, ದೇವರು ಅವರನ್ನು ಸತ್ತವರೊಳಗಿಂದ ಎಬ್ಬಿಸಿದನೆಂದು ಹೃದಯದಿಂದ ನಂಬಿದರೆ ನಿಮಗೆ ಮೋಕ್ಷ ಪ್ರಾಪ್ತಿಯಾಗುವುದು. ಯೇಸು ಕ್ರಿಸ್ತರ ಮೇಲೆ ನಂಬಿಕೆಯಿಡುವ ಯಾವನಾದರೂ ಆಶಾಭಂಗಪಡುವುದಿಲ್ಲ. ಯೇಸು ಕ್ರಿಸ್ತರ ನಾಮವನ್ನು ಹೇಳಿಕೊಳ್ಳುವವರೆಲ್ಲರಿಗೆ ಮೋಕ್ಷ ಪ್ರಾಪ್ತಿಯಾಗುವುದು.'

(ಅಪೊಸ್ತಲರ ಕೃತ್ಯಗಳು 16:31, ರೋಮಾ 10:9–13)

~*~*~*~

**ದಿನಾಂಕ : 24-03-2013 ರಂದು ಉದಯವಾಣಿ ಮತ್ತು 24-05-2013 ರ ಪ್ರಜಾವಾಣಿ ದಿನಪತ್ರಿಕೆಗಳಲ್ಲಿ ರಾಜ್ಯವ್ಯಾಪಿ ಪ್ರಕಟವಾದ ಲೇಖನ**

# 17. ಮರಣದ ನಂತರ ಮುಂದೇನು ? ಪವಿತ್ರ ಗ್ರಂಥ ಸತ್ಯವೇದದಲ್ಲಿದೆ ಈ ಪ್ರಶ್ನೆಗೆ ಸ್ಪಷ್ಟ ಉತ್ತರ...

> "ಯಾರಿಗೂ ಯಾವ ಕಾಲದಲ್ಲಿಯೂ ದೇವರ ಮಗನ ಮೂಲಕವಲ್ಲದೆ ಪ್ರತ್ಯಕ್ಷ ದೇವರ ದರ್ಶನವಾಗಿಲ್ಲ" ಎಂದು ಯೇಸು ಹೇಳುವರು. ಇದು ಸತ್ಯ ದೇವರ ಮಗನಲ್ಲಿ ಅಲ್ಲದೆ ನಾವು ಬೇರೆಲ್ಲಿ ದೇವರನ್ನು ಕಾಣುವುದು.
> – ಸ್ವಾಮಿ ವಿವೇಕಾನಂದರು (ಕೃತಿಶ್ರೇಣಿ, ಸಂಪುಟ–7, ಪುಟ ಸಂಖ್ಯೆ : 53)

**ಲೋಕ ಅಂತ್ಯವಾಗಲೀ ಅಥವಾ ಆಗದೇ ಇರಲಿ ನಾವಂತೂ ಒಂದು ದಿನ ಈ ಲೋಕವನ್ನು ಬಿಟ್ಟು ಹೋಗುವುದು ಅಂದರೆ ಮರಣ ಹೊಂದುವುದು ನಿಶ್ಚಯ. ಆದ್ದರಿಂದ ನಾನು ಯಾರು? ಸತ್ತ ನಂತರ ಎಲ್ಲಿಗೆ ಹೋಗುತ್ತೇನೆ? ಎಂಬುದನ್ನು ತಿಳಿಯುವುದು ಅತ್ಯಗತ್ಯವಾಗಿರುತ್ತದೆ. ಆದ್ದರಿಂದ ಈ ಬಗ್ಗೆ ಪವಿತ್ರ ಸತ್ಯವೇದ ಏನು ಹೇಳುತ್ತದೆ ಎಂಬುದು ಈ ಕೆಳಗಿನಂತಿರುತ್ತದೆ.**

## ಭೂಮಿ ಆಕಾಶಗಳ ಸೃಷ್ಟಿ ಮತ್ತು ಮಾನವನು ಪಾಪದಲ್ಲಿ ಬಿದ್ದದ್ದು

ಆದಿಯಲ್ಲಿ ದೇವರು ಆಕಾಶವನ್ನೂ ಭೂಮಿಯನ್ನೂ ಉಂಟುಮಾಡಿದನು. ಆ ಮೇಲೆ ದೇವರು ತನ್ನ ಸ್ವರೂಪದಲ್ಲಿ ತನ್ನ ಹೋಲಿಕೆಗೆ ಸರಿಯಾಗಿ ನೆಲದ ಮಣ್ಣಿನಿಂದ ಮನುಷ್ಯನನ್ನು ರೂಪಿಸಿ ಅವನ ಮೂಗಿನಲ್ಲಿ ಜೀವ ಶ್ವಾಸವನ್ನು ಊದಿದನು; ಆಗ ಮನುಷ್ಯನು ಬದುಕುವ ಜೀವಾತ್ಮನಾದನು. ಅನಂತರ ದೇವರು ಮನುಷ್ಯನಿಗೆ ಗಾಢನಿದ್ರೆಯನ್ನು ಬರಮಾಡಿ ಅವನ ಪಕ್ಕೆಯ ಎಲುಬುಗಳಲ್ಲಿ ಒಂದನ್ನು ತೆಗೆದು ಅದನ್ನು ಸ್ತ್ರೀಯನ್ನಾಗಿ ಮಾಡಿದನು ಮತ್ತು ಅವರಿಗಾಗಿ ಒಂದು ಉದ್ಯಾನವನವನ್ನು ಮಾಡಿ ಮನುಷ್ಯನಿಗೆ ನೀನು ಒಳ್ಳೇದರ ಕೆಟ್ಟದ್ದರ ಅರುಹನ್ನು ಹುಟ್ಟಿಸುವ ವೃಕ್ಷದ ಹಣ್ಣನ್ನು ಹೊರತುಪಡಿಸಿ ಉಳಿದ ಎಲ್ಲಾ ವೃಕ್ಷಗಳ ಫಲಗಳನ್ನು ಯಥೇಚ್ಛವಾಗಿ ತಿನ್ನಬಹುದೆಂದು ವಿಧಿಸಿದನು. ಆದರೆ ಆ ಸ್ತ್ರೀ ದೇವರ ಮಾತಿಗೆ ಅವಿಧೇಯಳಾಗಿ ಆ ಮರದ ಹಣ್ಣನ್ನು ತಿಂದು ತನ್ನ ಗಂಡನಿಗೂ ಕೊಡಲು ಅವನೂ ತಿಂದನು. ಆ ಮೇಲೆ ದೇವರು ಮನುಷ್ಯರ ಕೆಟ್ಟತನವು ಭೂಮಿಯ ಮೇಲೆ ಹೆಚ್ಚಾಗಿರುವುದನ್ನೂ ಅವರು ಹೃದಯದಲ್ಲಿ ಯೋಚಿಸುವುದೆಲ್ಲವೂ ಯಾವಾಗಲೂ ಬರೀ ಕೆಟ್ಟದ್ದಾಗಿರುವುದನ್ನೂ ನೋಡಿ ತಾನು ಭೂಮಿಯ ಮೇಲೆ ಮನುಷ್ಯರನ್ನು ಉಂಟು ಮಾಡಿದ್ದಕ್ಕೆ ಪಶ್ಚಾತ್ತಾಪ ಪಟ್ಟು ತನ್ನ ಹೃದಯದಲ್ಲಿ ನೊಂದುಕೊಂಡನು.
(ಆದಿಕಾಂಡ ಅಧ್ಯಾಯ 1 ರಿಂದ 6)



## ಲೋಕಾಂತ್ಯದ ಸೂಚನೆಗಳು

ಜನಕ್ಕೆ ವಿರೋಧವಾಗಿ ಜನವೂ ರಾಜ್ಯಕ್ಕೆ ವಿರೋಧವಾಗಿ ರಾಜ್ಯವೂ ಏಳುವವು; ಮತ್ತು ಅಲ್ಲಲ್ಲಿ ಬರಗಳು ಬರುವವು, ಭೂಕಂಪಗಳು ಆಗುವವು; ಒಬ್ಬರ ಮೇಲೊಬ್ಬರು ದ್ವೇಷ ಮಾಡುವರು. ಬಹುಮಂದಿ ಸುಳ್ಳು ಪ್ರವಾದಿಗಳು (ಮುಂದಾಗುವುದನ್ನು ಹೇಳುವವರು) ಸಹ ಎದ್ದು ಅನೇಕರನ್ನು ಮೋಸಗೊಳಿಸುವರು. ಇದಲ್ಲದೆ ಅಧರ್ಮವು ಹೆಚ್ಚಾಗುವುದರಿಂದ ಬಹುಜನರ ಪ್ರೀತಿ ತಣ್ಣಗಾಗಿ ಹೋಗುವುದು. ಆದರೆ ಕಡೇವರೆಗೂ ತಾಳುವವನು ಮುಕ್ತಿ ಹೊಂದುವನು. ಇದಲ್ಲದೇ ಸ್ವರ್ಗಲೋಕದ ಈ ಸುವಾರ್ತೆಯು ಸರ್ವಲೋಕದಲ್ಲಿ ಎಲ್ಲಾ ಜನಾಂಗಗಳಿಗೆ ಸಾಕ್ಷಿಗಾಗಿ ಸಾರಲಾಗುವುದು; ಆಗ ಅಂತ್ಯವು(ಪ್ರಳಯ) ಬರುವುದು. (ಮತ್ತಾಯ 24:7–14)

## ಲೋಕಾಂತ್ಯ ಎಂದು ಆಗುವುದು ಮತ್ತು ಅಂದು ಏನಾಗುತ್ತದೆ?

ಆ ದಿನವು ಕಳ್ಳನು ಬರುವಂತೆ (ನೆನಸದ ಗಳಿಗೆಯಲ್ಲಿ) ಬರುತ್ತದೆ. ಆ ದಿನದಲ್ಲಿ ಆಕಾಶ ಮಂಡಲವು ಮಹಾ ಘೋಷದಿಂದ ಇಲ್ಲದೆ ಹೋಗುವುದು, ಸೂರ್ಯ ಚಂದ್ರ ನಕ್ಷತ್ರಗಳು ಉರಿದು ಲಯವಾಗಿ ಹೋಗುವವು, ಭೂಮಿಯೂ ಅದರಲ್ಲಿರುವ ಕೆಲಸಗಳೂ ಸುಟ್ಟು ಹೋಗುವವು. (2 ಪೇತ್ರ 3:10)

**ಈ ಸಂಗತಿಗಳನ್ನು ಸುಮಾರು 2024 ವರ್ಷಗಳ ಹಿಂದೆಯೇ ಯೇಸು ಕ್ರಿಸ್ತರ ಪ್ರೀತಿಯ ಅಪೋಸ್ತಲನಾದ ಶ್ರೀ ಯೋಹಾನನು ದರ್ಶನದಲ್ಲಿ ನೋಡಿ ಈ ಕೆಳಗಿನಂತೆ ದಾಖಲಿಸಿರುತ್ತಾನೆ:**

ಮಹಾ ಭೂಕಂಪ ಉಂಟಾಯಿತು; ಸೂರ್ಯನು ಕರೀಕಂಬಳಿಯಂತೆ ಕಪ್ಪಾದನು; ಪೂರ್ಣಚಂದ್ರನು ರಕ್ತದಂತಾದನು; ಅತ್ತೀಮರವು ಬಿರುಗಾಳಿಯಿಂದ ಅಲ್ಲಾಡಿಸಲ್ಪಟ್ಟು ತನ್ನ ಕಾಯಿಗಳನ್ನು ಉದುರಿಸುವ ಪ್ರಕಾರ ಆಕಾಶದ ನಕ್ಷತ್ರಗಳು ಭೂಮಿಗೆ ಬಿದ್ದವು. ಆಕಾಶವು ಸುರುಳಿಯ ಹಾಗೆ ಸುತ್ತಲ್ಪಟ್ಟು ಹೋಗಿಬಿಟ್ಟಿತು; ಎಲ್ಲಾ ಬೆಟ್ಟಗಳೂ ದ್ವೀಪಗಳೂ ತಮ್ಮ ತಮ್ಮ ಸ್ಥಳಗಳಿಂದ ಚಲಿಸಿದವು. ಇದಲ್ಲದೆ ಭೂರಾಜರೂ ಪ್ರಭುಗಳೂ ಸಹಸ್ರಾಧಿಪತಿಗಳೂ ಐಶ್ವರ್ಯವಂತರೂ ಪರಾಕ್ರಮಶಾಲಿಗಳೂ ಎಲ್ಲಾ ದಾಸರೂ ಸ್ವತಂತ್ರರೂ ಬೆಟ್ಟಗಳ ಗವಿಗಳಿಗೂ ಬಂಡೆಗಳ ಸಂದುಗಳಿಗೂ ಓಡಿಹೋಗಿ ತಮ್ಮನ್ನು ಮರೆಮಾಡಿಕೊಂಡು ಬೆಟ್ಟಗಳಿಗೂ ಬಂಡೆಗಳಿಗೂ– ನಮ್ಮ ಮೇಲೆ ಬೀಳಿರಿ, ಸಿಂಹಾಸನದ ಮೇಲೆ ಕೂತಿರುವಾತನ ಮುಖಕ್ಕೂ ಯೇಸು ಕ್ರಿಸ್ತರ ಕೋಪಕ್ಕೂ ನಮ್ಮನ್ನು ಮರೆಮಾಡಿರಿ; ಅವರ ಕೋಪವು ಕಾಣಿಸುವ ಮಹಾದಿನ ಬಂದಿದೆ; ಅದರ ಮುಂದೆ ನಿಲ್ಲುವುದಕ್ಕೆ ಯಾರು ಶಕ್ತರು ಎಂದು ಹೇಳಿದರು. (ಪ್ರಕಟನೆ 6:12–17)

## ದೇವರು ನರಕವನ್ನು ಯಾರಿಗಾಗಿ ಸೃಷ್ಟಿಸಿದ್ದಾನೆ?

ನ್ಯಾಯತೀರ್ಪಿನ ದಿನದಲ್ಲಿ ದೇವರು ತನ್ನ ಎಡಗಡೆಯಲ್ಲಿರುವವರಿಗೆ– ಶಾಪಗ್ರಸ್ತರೇ, ನನ್ನನ್ನು ಬಿಟ್ಟು ಪಿಶಾಚನಿಗೂ ಅವನ ದೂತರಿಗೂ ಸಿದ್ಧಮಾಡಿರುವ ನಿತ್ಯ ಬೆಂಕಿಯೊಳಕ್ಕೆ ಹೋಗಿರಿ. ನಾನು ಹಸಿದಿದ್ದೆನು, ನೀವು ನನಗೆ ಊಟಕ್ಕೆ ಕೊಡಲಿಲ್ಲ; ಬಾಯಾರಿದ್ದೆನು, ನೀವು ನನಗೆ ಕುಡಿಯುವುದಕ್ಕೆ ಕೊಡಲಿಲ್ಲ; ಪರದೇಶಿಯಾಗಿದ್ದೆನು, ನೀವು ನನ್ನನ್ನು ಸೇರಿಸಿಕೊಳ್ಳಲಿಲ್ಲ; ಬಟ್ಟೆಯಿಲ್ಲದವನಾಗಿದ್ದೆನು, ನೀವು ನನಗೆ ಉಡುವುದಕ್ಕೆ ಕೊಡಲಿಲ್ಲ; ರೋಗದಲ್ಲಿ ಬಿದ್ದಿದ್ದೆನು, ಸೆರೆಮನೆಯಲ್ಲಿದ್ದೆನು, ನೀವು ನನ್ನನ್ನು ಆರೈಕೆ ಮಾಡುವುದಕ್ಕೆ ಬರಲಿಲ್ಲವೆಂದು ಹೇಳುವನು. ಅದಕ್ಕೆ ಅವರು ಸಹ– ಸ್ವಾಮಿ, ಯಾವಾಗ ನೀನು ಹಸಿದದ್ದನ್ನೂ ನೀನು ಬಾಯಾರಿದ್ದನ್ನೂ ನೀನು ಪರದೇಶಿಯಾದದ್ದನ್ನೂ ಬಟ್ಟೆಯಿಲ್ಲದವನಾಗಿದ್ದದ್ದನ್ನೂ ರೋಗದಲ್ಲಿ ಬಿದ್ದದ್ದನ್ನೂ ಸೆರೆಮನೆಯಲ್ಲಿದ್ದದ್ದನ್ನೂ ಕಂಡು ನಿನಗೆ ಉಪಚಾರಮಾಡದೆ ಹೋದೆವು? ಅನ್ನುವರು. ಆಗ ಆತನು– ನೀವು ಈ ಕೇವಲ ಅಲ್ಪವಾದವರಲ್ಲಿ ಒಬ್ಬನಿಗೆ ಏನೇನು ಮಾಡದೆ ಹೋದಿರೋ ಅದನ್ನು ನನಗೂ ಮಾಡದೆ ಹೋದ ಹಾಗಾಯಿತು ಎಂದು ನಿಮಗೆ ಸತ್ಯವಾಗಿ ಹೇಳುತ್ತೇನೆ ಅನ್ನುವರು. ಮತ್ತು ಇವರು ನಿತ್ಯ ಶಿಕ್ಷೆಗೂ ಅಂದರೆ ನರಕಕ್ಕೂ, ನೀತಿವಂತರು ನಿತ್ಯ ಜೀವ ಅಂದರೆ ಸ್ವರ್ಗಕ್ಕೂ ಹೋಗುವರು.

(ಮತ್ತಾಯ 25:41–46)

## ಲೋಕಾಂತ್ಯದ/ಮರಣದ ನಂತರ ನಮಗೆ ಏನು ಸಂಭವಿಸುತ್ತದೆ?

ಒಂದೇ ಸಾರಿ ಸಾಯುವುದೂ ಆ ಮೇಲೆ ನ್ಯಾಯತೀರ್ಪು ಮನುಷ್ಯರಿಗೆ ನೇಮಕವಾಗಿದೆ. ಪ್ರತಿಯೊಬ್ಬನು ತಾನು ನಡೆಸಿದ ಒಳ್ಳೇದಕ್ಕಾಗಲಿ ಕೆಟ್ಟದ್ದಕ್ಕಾಗಲಿ ಸರಿಯಾಗಿ ಪ್ರತಿಫಲವನ್ನು ಹೊಂದುವುದಕ್ಕೋಸ್ಕರ ನಾವೆಲ್ಲರೂ ಯೇಸು ಕ್ರಿಸ್ತರ ನ್ಯಾಯಾಸನದ ಮುಂದೆ ಯಥಾಸ್ಥಿತಿಯಲ್ಲಿ ಕಾಣಿಸಿಕೊಳ್ಳಬೇಕು. ಆಗ ಪುಸ್ತಕಗಳು ತೆರೆಯಲ್ಪಡುವವು. (ಇಬ್ರಿಯ 9:27 & 2 ಕೊರಿಂಥ 5:10)

1. ಜೀವಬಾಧ್ಯರ ಪುಸ್ತಕದಲ್ಲಿ ಬರೆದಿದ್ದ ಸಂಗತಿಗಳ ಆಧಾರದ ಮೇಲೆ ಅವರವರ ಕೃತ್ಯಗಳ ಪ್ರಕಾರ ಕಿರೀಟ, ಬಹುಮಾನಗಳನ್ನು ಪಡೆಯುವರು. (ಪ್ರಕಟನೆ 20:12)
2. ನ್ಯಾಯತೀರ್ಪಿನ ಪುಸ್ತಕದಲ್ಲಿ ಬರೆಯಲ್ಪಟ್ಟ ಸಂಗತಿಗಳ ಆಧಾರದ ಮೇಲೆ ತೀರ್ಪು ಹೊಂದಿ ಬೆಂಕಿಯ ಕೆರೆಗೆ (ನಿತ್ಯ ನರಕಕ್ಕೆ) ದೊಬ್ಬಲ್ಪಡುವರು. (ಪ್ರಕಟನೆ 20:15)





ಆದರೆ ಹೇಡಿಗಳು, ನಂಬಿಕೆ ಇಲ್ಲದವರು, ಅಸಹ್ಯವಾದದ್ದರಲ್ಲಿ ಸೇರಿದವರು, ಕೊಲೆಗಾರರು, ವ್ಯಭಿಚಾರಿಗಳು, ಮಾಟಗಾರರು, ಆಕಾರಗಳನ್ನು ಆರಾಧಿಸುವವರು, ಎಲ್ಲಾ ಸುಳ್ಳುಗಾರರು ಇವರಿಗೆ ಸಿಕ್ಕುವ ಪಾಲು ಬೆಂಕಿ ಗಂಧಕಗಳುರಿಯುವ ಕೆರೆಯೇ; ಅಲ್ಲಿ ಅವರನ್ನು ಕಡಿಯುವ ಹುಳು ಸಾಯುವುದಿಲ್ಲ ಸುಡುವ ಬೆಂಕಿ ಆರುವುದಿಲ್ಲ. (ಪ್ರಕಟನೆ 21:8 & ಮಾರ್ಕ 9:48)

## ನಾವು ನರಕದಿಂದ ಪಾರಾಗಿ ಸ್ವರ್ಗಕ್ಕೆ ಹೋಗಬೇಕಾದರೆ ಏನು ಮಾಡಬೇಕು?

1) ಧರ್ಮಶಾಸ್ತ್ರವನ್ನು ಕೈಗೊಂಡು ನಡೆಯುತ್ತಿದ್ದ ಒಬ್ಬ ಐಶ್ವರ್ಯವಂತನು ಬಂದು ಯೇಸು ಕ್ರಿಸ್ತರನ್ನು ನಾನು ಸ್ವರ್ಗರಾಜ್ಯಕ್ಕೆ ಬಾಧ್ಯಸ್ಥನಾಗಬೇಕಾದರೆ ಏನು ಮಾಡಬೇಕೆಂದು ಕೇಳಲಾಗಿ; ಯೇಸು ಅವನಿಗೆ ನಿನ್ನನ್ನು ನೀನೇ ಪ್ರೀತಿಸಿಕೊಳ್ಳುವಂತೆ ನಿನ್ನ ನೆರೆಯವನನ್ನು ಪ್ರೀತಿಸಬೇಕು. ಹೋಗು, ನಿನ್ನ ಬದುಕನ್ನೆಲ್ಲಾ (ಆಸ್ತಿಯನ್ನೆಲ್ಲಾ) ಮಾರಿ ಬಡವರಿಗೆ ಕೊಡು; ಸ್ವರ್ಗರಾಜ್ಯದಲ್ಲಿ ನಿನಗೆ ಸಂಪತ್ತಿರುವುದು; ನೀನು ಬಂದು ನನ್ನನ್ನು ಹಿಂಬಾಲಿಸು ಎಂದು ಹೇಳಿದರು. ಆದರೆ ಅವನು ಬಹಳ ಆಸ್ತಿಯುಳ್ಳವನಾದ್ದರಿಂದ ದು:ಖದಿಂದ ಹಿಂದಿರುಗಿ ಹೋದನು. ಅದಕ್ಕೆ ಯೇಸು ಧನವಂತರು ದೇವರ ರಾಜ್ಯದಲ್ಲಿ ಸೇರುವುದು ಎಷ್ಟೋ ಕಷ್ಟ, ಆತ್ಮದಲ್ಲಿ ಬಡವ(ದೀನ)ರಾಗಿರುವವರು ಧನ್ಯರು; ಸ್ವರ್ಗರಾಜ್ಯವು ಅವರದು ಎಂದು ಹೇಳಿದರು. (ಮತ್ತಾಯ 19:16–26 & 5:3)
2) ಭೂಲೋಕದಲ್ಲಿ ಗಂಟು ಮಾಡಿ ಇಟ್ಟುಕೊಳ್ಳಬೇಡಿರಿ; ಆದರೆ ಸ್ವರ್ಗಲೋಕದಲ್ಲಿ ಗಂಟು ಮಾಡಿ ಇಟ್ಟುಕೊಳ್ಳಿರಿ; ಅಲ್ಲಿ ಅದು ಹಾಳಾಗುವುದಿಲ್ಲ, ಕಳ್ಳರು ಕದಿಯುವುದೂ ಇಲ್ಲ, ನಿನ್ನ ಗಂಟು ಇದ್ದಲ್ಲಿಯೇ ನಿನ್ನ ಮನಸ್ಸು ಇರುತ್ತದೆ. (ಮತ್ತಾಯ 6:19–21)
3) ಯೇಸು ಎಂಬ ಹೆಸರಿನಿಂದಲೇ ಹೊರತು ಆಕಾಶದ ಕೆಳಗೆ ಮನುಷ್ಯರೊಳಗೆ ಕೊಡಲ್ಪಟ್ಟಿರುವ ಬೇರೆ ಯಾವ ಹೆಸರಿನಿಂದಲೂ ನಮಗೆ ಮೋಕ್ಷ ಪ್ರಾಪ್ತಿಯಾಗುವುದಿಲ್ಲ. (ಅಪೋಸ್ತಲರ ಕೃತ್ಯಗಳು 4:12)
4) ಯೇಸುವಿನ ಹೆಸರಿನಲ್ಲಿ ನಂಬಿಕೆಯಿಡುವ ಪ್ರತಿಯೊಬ್ಬನು ಪಾಪ ಪರಿಹಾರವನ್ನು ಹೊಂದುವನು ಎಂದು ಕ್ರಿಸ್ತರ ವಿಷಯದಲ್ಲಿ ಪ್ರವಾದಿಗಳೆಲ್ಲರು ಸಾಕ್ಷಿಹೇಳಿದ್ದಾರೆ. (ಅಪೋಸ್ತಲರ ಕೃತ್ಯಗಳು 10:43)

ದಿನಾಂಕ: 06-04-2012 ರಂದು ಶಿವಮೊಗ್ಗ ಜಿಲ್ಲೆಯ ಎಲ್ಲಾ ದಿನಪತ್ರಿಕೆಗಳಲ್ಲಿ ಪ್ರಕಟವಾದ ಲೇಖನ

## 18. ಯೇಸು ಕ್ರಿಸ್ತರು ಶಿಲುಬೆಯ ಮೇಲೆ ನುಡಿದ ಸಪ್ತ ವಾಕ್ಯಗಳು

➢ ತನ್ನನ್ನು ಅವಮಾನಪಡಿಸಿ ಅಮಾನುಷವಾಗಿ ಹಿಂಸಿಸುತ್ತಿರುವವರನ್ನು ನೋಡಿ:

1) ಯೇಸು– **'ತಂದೆಯೇ, ಅವರನ್ನು ಕ್ಷಮಿಸು; ತಾವು ಏನು ಮಾಡುತ್ತೇವೆಂಬುದನ್ನು ಅರಿಯರು'** ಅಂದರು. (ಲೂಕ 23:34)

➢ ತನ್ನ ಪಾಪಗಳನ್ನು ಒಪ್ಪಿಕೊಂಡು ಅರಿಕೆ ಮಾಡಿ, ಸ್ವರ್ಗಲೋಕವನ್ನು ಬೇಡಿಕೊಂಡ ಪಕ್ಕದ ಶಿಲುಬೆಯಲ್ಲಿದ್ದ ಕಳ್ಳನನ್ನು ನೋಡಿ:

2) ಯೇಸು– **'ಈ ಹೊತ್ತೇ ನನ್ನ ಸಂಗಡ ಪರದೈಸಿನಲ್ಲಿ(ಸ್ವರ್ಗದಲ್ಲಿ)ರುವಿ ಎಂದು ನಿನಗೆ ಸತ್ಯವಾಗಿ ಹೇಳುತ್ತೇನೆ'** ಎಂದು ಉತ್ತರ ಕೊಟ್ಟರು. (ಲೂಕ 23:43)

➢ತನ್ನ ತಾಯಿಯನ್ನೂ ಹತ್ತಿರದಲ್ಲಿ ನಿಂತಿದ್ದ ತನ್ನ ಪ್ರೀತಿಯ ಶಿಷ್ಯ ಯೋಹಾನನನ್ನು ನೋಡಿ:

3) ಯೇಸು– ತನ್ನ ತಾಯಿಗೆ **'ಅಮ್ಮಾ, ಇಗೋ ನಿನ್ನ ಮಗನು'** ಎಂದು ಹೇಳಿದರು. ತರುವಾಯ ಆ ಶಿಷ್ಯನಿಗೆ **'ಇಗೋ ನಿನ್ನ ತಾಯಿ'** ಎಂದು ಹೇಳಿದರು. (ಯೋಹಾನ 19:26–27)

➢ಪರಿಶುದ್ಧನಾದ ದೇವರು ಲೋಕದ ಎಲ್ಲಾ ಮಾನವರ ಪಾಪಗಳನ್ನು ಯೇಸು ಕ್ರಿಸ್ತರ ಮೇಲೆ ಹಾಕಿ ಆತನನ್ನು ಪಾಪಸ್ವರೂಪಿಯನ್ನಾಗಿ ಮಾಡಿದಾಗ:

4) ಯೇಸು– **'ನನ್ನ ದೇವರೇ, ನನ್ನ ದೇವರೇ, ಯಾಕೆ ನನ್ನನ್ನು ಕೈಬಿಟ್ಟಿದ್ದೀ'** ಎಂದು ಮಹಾಧ್ವನಿಯಿಂದ ಕೂಗಿದರು. (ಮಾರ್ಕ 15:34)

➢ಹಿಂದಿನ ರಾತ್ರಿ ಬಂಧಿಸಲ್ಪಟ್ಟು ಮರುದಿನ ಬೆಳಿಗ್ಗೆ 9 ರಿಂದ ಮಧ್ಯಾಹ್ನ 3 ಗಂಟೆಯವರೆಗೆ ಕಡು ಬಿಸಿಲಿನಲ್ಲಿ ಶಿಲುಬೆಯ ಮೇಲೆ ರಕ್ತ ಸುರಿಸುತ್ತಾ ಬಳಲಿದಾಗ:

5) ಯೇಸು– ಶಾಸ್ತ್ರದ ಮಾತು ನೆರವೇರುವಂತೆ **'ನನಗೆ ನೀರಡಿಕೆ ಆಗಿದೆ'** ಎಂದು ಹೇಳಿದರು. (ಯೋಹಾನ 19:28)

➢ ಶಿಲುಬೆಯ ಮೇಲೆ ತನ್ನ ಕಾರ್ಯವನ್ನು ಮುಗಿಸಿದ ಮೇಲೆ:

6) ಯೇಸು– **'ಎಲ್ಲಾ ನೆರವೇರಿತು'** ಎಂದು ಹೇಳಿದರು. (ಯೋಹಾನ 19:30)

➢ತಂದೆಯ (ದೇವರ) ಚಿತ್ತವನ್ನು ಸಂಪೂರ್ಣವಾಗಿ ನೆರವೇರಿಸಿದ ಮೇಲೆ:

7) ಯೇಸು– **'ತಂದೆಯೇ, ನನ್ನ ಆತ್ಮವನ್ನು ನಿನ್ನ ಕೈಗೆ ಒಪ್ಪಿಸಿ ಕೊಡುತ್ತೇನೆ'** ಎಂದು ಮಹಾಧ್ವನಿಯಿಂದ ಕೂಗಿದರು. (ಲೂಕ 23:46)

ಲೋಕದ ಎಲ್ಲಾ ಮಾನವರ ಪಾಪ ವಿಮೋಚನೆಯಾದ ಆ ಶುಕ್ರವಾರ ದಿನವನ್ನು **'ಶುಭ ಶುಕ್ರವಾರ'** ಎಂದು ಕರೆಯುತ್ತಾರೆ.



ದಿನಾಂಕ:06-12-2013 ರಂದು ಶಿವಮೊಗ್ಗ ನಗರದ ಸ್ಥಳೀಯ ದಿನಪತ್ರಿಕೆಯಲ್ಲಿ ಪ್ರಕಟವಾದ ಲೇಖನ

## 19. ಯೇಸು ಕ್ರಿಸ್ತರ ಉಪದೇಶಗಳು ಜಗತ್ತಿನಾದ್ಯಂತ ಸಾರಲ್ಪಟ್ಟದ್ದು

**"ಶತಮಾನಗಳ ಮೇಲೆ ಶತಮಾನಗಳು ಉರುಳಿವೆ. ಆದರೂ ಕ್ರಿಸ್ತರು ಜಗತ್ತಿನ ಮೇಲೆ ಬೀರಿದ ಶಕ್ತಿ ಇನ್ನೂ ಪೂರ್ಣ ವಿಸ್ತಾರವಾಗಿಲ್ಲ, ಇನ್ನೂ ಶಿಥಿಲವಾಗಿಲ್ಲ, ಕಾಲ ಕಳದಂತೆ ಅದು ಇನ್ನೂ ಹೆಚ್ಚು ಪ್ರಬಲವಾಗುತ್ತಾ ಬರುವುದು." – ಸ್ವಾಮಿ ವಿವೇಕಾನಂದರು (ಕೃತಿಶ್ರೇಣಿ, ಸಂಪುಟ–7, ಪುಟ ಸಂಖ್ಯೆ : 52)**

ಯೇಸು ಕ್ರಿಸ್ತರು ಸುಮಾರು 2024 ವರ್ಷಗಳ ಹಿಂದೆ ಈ ಭೂಮಿಯ ಮೇಲೆ ಮಾನವರಾಗಿ ಜನಿಸಿ 33 ½ ವರ್ಷ ಜೀವಿಸಿದ್ದು ಅವರ ಜೀವನದ ಕಡೆಯ 3 ½ ವರ್ಷಗಳ ಅವಧಿಯಲ್ಲಿ ಹಳ್ಳಿಪಳ್ಳಿಗಳಿಗೆ ಪಾದಯಾತ್ರೆ ಮಾಡಿ ದ್ವೇಷ, ಸ್ವಾರ್ಥ ಮತ್ತು ಅಶಾಂತಿಯಿಂದ ಕೂಡಿದ್ದ ಸಮಾಜದಲ್ಲಿ ಈ ಲೋಕ ನಮಗೆ ಶಾಶ್ವತವಲ್ಲ; ಆದ್ದರಿಂದ ಮಾನವನ ಜೀವನ ಹೇಗಿರಬೇಕು? ಹಾಗೂ ಅವನು ಈ ಲೋಕ ಯಾತ್ರೆ ಮುಗಿಸಿದ ನಂತರ ಮೋಕ್ಷವನ್ನು ಹೊಂದಲು ಏನು ಮಾಡಬೇಕು? ಎಂದು ಉಪದೇಶಗಳನ್ನು ಮಾಡುತ್ತಿದ್ದರು. ಅವರ ಜೀವನವು ಸಹ ಅವರು ಬೋಧಿಸುತ್ತಿದ್ದ ಉಪದೇಶಕ್ಕೆ ತಕ್ಕ ಹಾಗೆಯೇ ಇದ್ದದ್ದರಿಂದ ಅನೇಕರು ಗುಂಪು ಗುಂಪಾಗಿ ಅವರನ್ನು ಹಿಂಬಾಲಿಸುತ್ತಿದ್ದರು.

ಒಂದು ದಿನ ಅವರು ಬೆಟ್ಟಕ್ಕೆ ಹೋಗಿ ರಾತ್ರಿಯಲ್ಲಾ ಪ್ರಾರ್ಥನೆಯಲ್ಲೇ ಕಳೆದು; ಬೆಳಗಾದ ಮೇಲೆ ಹನ್ನೆರಡು ಮಂದಿಯನ್ನು ಆರಿಸಿಕೊಂಡು ಅವರಿಗೆ ಅಪೊಸ್ತಲ (ಕಳುಹಿಸಲ್ಪಟ್ಟವ) ರೆಂದು ಹೆಸರಿಟ್ಟು ಅವರಿಗೆ– ನೋಡಿರಿ, ತೋಳಗಳ ನಡುವೆ ಕುರಿಗಳನ್ನು ಕಳುಹಿಸುವ ಹಾಗೆ ನಿಮ್ಮನ್ನು ಕಳುಹಿಸುತ್ತಿದ್ದೇನೆ. 'ಯುಗದ ಸಮಾಪ್ತಿಯು ಹತ್ತಿರವಾಗಿದೆ ಆದ್ದರಿಂದ ನಿಮ್ಮ ಪಾಪಗಳಿಗಾಗಿ ಪಶ್ಚಾತ್ತಾಪ ಪಟ್ಟು ಮೋಕ್ಷ ಹೊಂದಿಕೊಳ್ಳಿರಿ ಎಂದು ಸಾರಿಹೇಳುತ್ತಾ ಹೋಗಿರಿ. ರೋಗಿಗಳನ್ನು ಸ್ವಸ್ಥಪಡಿಸಿರಿ, ಸತ್ತವರನ್ನು ಬದುಕಿಸಿರಿ, ಕುಷ್ಠರೋಗಿಗಳನ್ನು ಶುದ್ಧಮಾಡಿರಿ, ದೆವ್ವಗಳನ್ನು ಬಿಡಿಸಿರಿ; ಉಚಿತವಾಗಿ ಹೊಂದಿದ್ದೀರಿ, ಉಚಿತವಾಗಿ ಕೊಡಿರಿ' ಎಂದು ಅಪ್ಪಣೆ ಕೊಡಲು ಅವರು ಹಾಗೆಯೇ ಮಾಡಿ ಹಿಂದಿರುಗಿ ಬಂದು ಸ್ವಾಮಿ ದೆವ್ವಗಳೂ ಸಹ ನಿನ್ನ ಹೆಸರನ್ನು ಕೇಳಿ ನಮಗೆ ಅಧೀನವಾಗುತ್ತವೆ ಎಂದು ಹೇಳಿದರು. ಅದಕ್ಕೆ ಯೇಸು ನಿಮ್ಮ ಹೆಸರುಗಳು ಸ್ವರ್ಗದಲ್ಲಿ ಬರೆಯಲ್ಪಟ್ಟಿವೆ ಎಂಬುವುದಕ್ಕೋಸ್ಕರ ಸಂತೋಷಪಡಿರಿ ಎಂದು ಹೇಳಿದರು.

ಈ ಅಪೋಸ್ತಲರು ಐಷಾರಾಮಿ ಬದುಕಿಗಾಗಿ ಕ್ರಿಸ್ತರನ್ನು ಹಿಂಬಾಲಿಸಿದವರಲ್ಲ. ಪ್ರತಿಷ್ಠೆ ಪುರಸ್ಕಾರಗಳು ಲಭಿಸೀತೆಂಬ ಆಶೆ ಎಳ್ಳಷ್ಟೂ ಇರಲಿಲ್ಲ. ಅಷ್ಟಕ್ಕೂ ಯೇಸು ಕ್ರಿಸ್ತನು ಇವರಿಗೆ ಅರಮನೆಯ ಆಮಿಷ ಒಡ್ಡಿ ಕರೆಯಲಿಲ್ಲ. ಗಲಿಲಾಯದ ಸಂಪದ್ಭರಿತ ನೆಲದಲ್ಲಿ ಅಥವಾ ಜೆರುಸಲೇಮ್ ಎಂಬ ಮಹಾನಗರದಲ್ಲಿ ಸುಂದರ ಭವಿಷ್ಯತ್ತನ್ನು ಕಟ್ಟಿಕೊಳ್ಳಬಹುದಾದ ಎಲ್ಲಾ ಸಾಧ್ಯತೆಗಳಿದ್ದರೂ ಈ ಶಿಷ್ಯರು ಆದುಕೊಂಡದ್ದು ಪ್ರಾಣಕ್ಕೇ ಕಂಟಕವಾಗಬಲ್ಲ ಕಠಿಣಹಾದಿಯನ್ನು. ಯೇಸು ಕ್ರಿಸ್ತರು ಸಾರಿದ ದಯೆ, ಶಾಂತಿ ಮತ್ತು ಪ್ರೀತಿಯ ಸಂದೇಶವನ್ನು ಸಾರುತ್ತಾ ಅಲೇಮಾರಿ ಬದುಕನ್ನು ತಮ್ಮದಾಗಿಸಿಕೊಂಡರು.

**ಯೇಸು ಕ್ರಿಸ್ತರು 12 ಮಂದಿ ಅಪೊಸ್ತಲ(ಶಿಷ್ಯ)ರನ್ನು ಆರಿಸಿಕೊಂಡ ವಿಧಾನ ಹಾಗೂ ಅವರುಗಳ ಸೇವೆಯ ಸಂಕ್ಷಿಪ್ತ ವಿವರಗಳು ಈ ಕೆಳಗಿನಂತಿವೆ.**

(ಮತ್ತಾಯ 10:2–4, ಮಾರ್ಕ 3:16–19, ಲೂಕ 6:14–16)

**1) ಪೇತ್ರ :** ಬೆಸ್ತನಾದ ಈತನು ಯೇಸುವಿನ ಆತ್ಮೀಯ ಶಿಷ್ಯರಲ್ಲಿ ಒಬ್ಬನು. ಈತನು ಬಲಶಾಲಿ, ಆದರೂ ಬಲಹೀನತೆಗಳಿದ್ದವನು. ಯೇಸು ಕ್ರಿಸ್ತರು ಈತನನ್ನು ಕರೆದಾಗ ಆತನ ಮೊಣಕಾಲಿಗೆ ಬಿದ್ದು– ಸ್ವಾಮೀ, ನಾನು ಪಾಪಾತ್ಮನು; ನನ್ನನ್ನು ಬಿಟ್ಟುಹೋಗಬೇಕು ಎಂದು ಹೇಳಿದ ದೀನ ವ್ಯಕ್ತಿ. ನೇರ ದಿಟ್ಟ ಮತ್ತು ಪ್ರೀತಿಯ ವ್ಯಕ್ತಿತ್ವ ಈತನದು. ಯೇಸುವಿಗೆ ನೀನು ಬರಬೇಕಾಗಿರುವ ಕ್ರಿಸ್ತ(ಅಭಿಷಕ್ತ)ನು ಜೀವಸ್ವರೂಪನಾದ ದೇವರ ಮಗನು; ನಿನ್ನಲ್ಲಿ ಮೋಕ್ಷವನ್ನುಂಟುಮಾಡುವ ಮಾತುಗಳುಂಟು; ನೀನು ದೇವರು ಪ್ರತಿಷ್ಠಿಸಿದವನೇ ಎಂದು ಹೇಳಿದವನು. ಕ್ರಿಸ್ತರು ಈತನಿಗೆ ನೀಡಿದಷ್ಟು ತರಬೇತಿಯನ್ನು ಮತ್ಯಾರಿಗೂ ನೀಡಿರಲಿಕ್ಕಿಲ್ಲ ಹಾಗೂ ಈತನನ್ನು ಗದರಿಸಿದಷ್ಟು, ಮೆಚ್ಚಿದಷ್ಟು ಮತ್ಯಾರನ್ನೂ ಗದರಿಸಲಿಲ್ಲ, ಮೆಚ್ಚಲಿಲ್ಲ. ಈತನು ಮಹಾ ಪಂಡಿತನಲ್ಲದಿದ್ದರೂ ಕ್ರಿಸ್ತರ ಪುನರುತ್ಥಾನದ ನಂತರ ಈತನ ಒಂದೇ ಒಂದು ಪ್ರಸಂಗ ಸುಮಾರು 3000 ಜನರನ್ನು ಕ್ರಿಸ್ತನಂಬಿಕೆಗೆ ನಡೆಸಿತು. ಈತನ ನೆರಳು ರೋಗಿಗಳನ್ನು ಸ್ವಸ್ಥಪಡಿಸುತ್ತಿತ್ತು. ಅಷ್ಟು ಬಲವಾಗಿ ದೇವರು ಈತನನ್ನು ಉಪಯೋಗಿಸುತ್ತಿದ್ದರು. ಕ್ರಿಸ್ತರ ಪುನರುತ್ಥಾನದ ನಂತರ ಬಹು ಧೈರ್ಯದಿಂದ ಆತನ ಉಪದೇಶಗಳನ್ನು ಸಾರಿದ ಈತನನ್ನು ರೋಮ್ ಪಟ್ಟಣದಲ್ಲಿ ಶಿಲುಬೆಗೆ ಹಾಕುವಾಗ; ಕ್ರಿಸ್ತನ ಹಾಗೆ ಸಾಯಲು ತಾನು ಅಯೋಗ್ಯನೆಂದು ತಿಳಿದು ತನ್ನನ್ನು ತಲೆ ಕೆಳಗೆ ಮಾಡಿ ಶಿಲುಬೆಗೆ ಹಾಕಬೇಕೆಂದು ಕೋರಿದನು; ಹಾಗೆಯೇ ಅವನನ್ನು ಶಿಲುಬೆಗೆ ಹಾಕಲಾಗಿರುತ್ತದೆ. **ಹುತಾತ್ಮನಾದ ವರ್ಷ : ಕ್ರಿ.ಶ. 64**



**2) ಅಂದ್ರೆಯ :** ಪೇತ್ರನ ತಮ್ಮನಾದ ಈತನು ಮೊದಲು ಸ್ನಾನಿಕನಾದ ಯೋಹಾನನ ಶಿಷ್ಯನಾಗಿದ್ದು, ಒಮ್ಮೆ ಸ್ನಾನಿಕನಾದ ಯೋಹಾನನು ಯೇಸುವನ್ನು ನೋಡಿ– 'ಅಗೋ ಯಜ್ಞಕ್ಕೆ ದೇವರು ನೇಮಿಸಿದ ಕುರಿ' ಎಂದು ಹೇಳಿದಾಗ ಯೇಸುವನ್ನು ಹಿಂಬಾಲಿಸಿದವನು. ಈತನೇ ಪೇತ್ರನನ್ನು ಕ್ರಿಸ್ತನ ಬಳಿಗೆ ನಡೆಸಿದವನು. ಸ್ನಾನಿಕನಾದ ಯೋಹಾನನಿಂದ ಸಾಕಷ್ಟು ತರಬೇತಿ ಪಡೆದು ಸಮರ್ಥ ನಾಯಕ ಹಾಗೂ ಯೇಸುವಿನ ಪ್ರಥಮ ಅಪೋಸ್ತಲನಾಗಿದ್ದಾಗ್ಯೂ ಸಹ ಈತನು ಪೇತ್ರನೊಂದಿಗೆ ಇದ್ದು ಅವನ ಸೇವೆಯಲ್ಲಿ ಬೆನ್ನೆಲುಬಾಗಿ ನಿಂತು ಅನೇಕರನ್ನು ಕ್ರಿಸ್ತನಡೆಗೆ ನಡೆಸಿ ಕ್ರಿಸ್ತನ ಸಭೆಯನ್ನು ಕಟ್ಟುವುದರಲ್ಲಿ ಬಹು ಮುಖ್ಯ ಪಾತ್ರ ವಹಿಸಿದ್ದು ನಮಗೆಲ್ಲಾ ಮಾದರಿಯೇ. ಕಡೆಯಲ್ಲಿ ಪೇತ್ರನು ಮೂರು ಸಾವಿರಕ್ಕಿಂತಲೂ ಹೆಚ್ಚಾದ ಜನರಿಗೆ ಮೋಕ್ಷದ ಮಾರ್ಗವನ್ನು ಸಾರಿದ ಸ್ಥಳದಲ್ಲಿ ಈತನನ್ನು ಕಠೋರವಾದ ಚಾಟಿ ಪೆಟ್ಟುಗಳಿಂದ ಗಾಯಗೊಳಿಸಿ X ಆಕಾರದ ಶಿಲುಬೆಯಲ್ಲಿ ಸುಮಾರು ಎರಡು ದಿವಸಗಳು ಸಾಯುವವರೆಗೂ ತೂಗುಹಾಕಲಾಗಿರುತ್ತದೆ. ಈತನು ತನ್ನ ಪ್ರಾಣ ಹೋಗುವವರೆಗೂ ಎರಡು ದಿನ ತನ್ನನ್ನು ಹಿಂಸಿಸಿ ಕೊಲ್ಲುತ್ತಿರುವವರಿಗೆ ಕ್ರಿಸ್ತರ ಪ್ರೀತಿ ಹಾಗೂ ಮೋಕ್ಷದ ಮಾರ್ಗವನ್ನು ಸಾರುತ್ತಿದ್ದನು. **ಹುತಾತ್ಮನಾದ ವರ್ಷ : ಕ್ರಿ.ಶ. 70**

**3) ಯಾಕೋಬ :** ಯೋಹಾನನ ಅಣ್ಣನಾದ ಈತನು ಯೇಸು ಕ್ರಿಸ್ತನ ದೂರದ ಸಂಬಂಧಿಯಾಗಿದ್ದರಿಂದ ಈತನಿಗೆ ಬಾಲ್ಯದಿಂದಲೇ ಯೇಸು ಕ್ರಿಸ್ತನ ಪರಿಚಯವಿದ್ದಿರಬಹುದು. 'ಸಿಡಿಲಿನ ಮರಿ' ಯೆಂಬ ಅಡ್ಡಹೆಸರಿನೊಂದಿಗೆ ಯೇಸು ಸ್ವಾಮಿಯ ಸೇವೆಯಲ್ಲಿ ತೊಡಗಿಸಿಕೊಂಡ ಈತನು ಯಾವಾಗಲೂ ಮಂಡಿಯೂರಿ ಪ್ರಾರ್ಥಿಸುತ್ತಿದ್ದುದರಿಂದ ಈತನ ಮೊಣಕಾಲುಗಳು ಒಂಟೆಯ ಕಾಲುಗಳಂತೆ ಒರಟಾಗಿದ್ದವು. ಒಮ್ಮೆ ಕ್ರಿಸ್ತರು ಪೇತ್ರ, ಯಾಕೋಬ ಮತ್ತು ಯೋಹಾನರನ್ನು ಎತ್ತರವಾದ ಬೆಟ್ಟಕ್ಕೆ ಪ್ರಾರ್ಥನೆಗೆ ಕರಕೊಂಡು ಹೋಗಿ ಅವರುಗಳ ಮುಂದೆ ರೂಪಾಂತರಗೊಂಡರು ಅವರ ಮುಖವು ಸೂರ್ಯನ ಹಾಗೆ ಹೊಳೆಯಿತು ಹಾಗೂ ವಸ್ತ್ರಗಳು ಬೆಳಕಿನ ಹಾಗೆ ಪ್ರಕಾಶಿಸಿದವು. ತಮ್ಮನ್ನು ಹಿಡಿದು ಶಿಲುಬೆಗೇರಿಸುವ ಸಮಯ ಹತ್ತಿರ ಬಂದಾಗ ಮನೋವ್ಯಥೆಯುಳ್ಳವನಾಗಿ ಪ್ರಾರ್ಥಿಸಲು ಗೆತ್ಸೆಮನೆ ತೋಟಕ್ಕೆ ಹೋದಾಗ ಪೇತ್ರ, ಯಾಕೋಬ ಮತ್ತು ಯೋಹಾನರನ್ನೇ ತನ್ನೊಂದಿಗೆ ಕರೆದುಕೊಂಡು ಹೋದದ್ದು ವಿಶೇಷ. ಸ್ಪೇನ್ ದೇಶದಲ್ಲಿ ಅರಸನಾದ ಹೆರೋದನು ಕ್ರೈಸ್ತ ಸಭೆಯಲ್ಲಿ ಕೆಲವರನ್ನು ಹಿಂಸೆಪಡಿಸಿದ್ದಲ್ಲದೆ ಈತನನ್ನು ಕತ್ತಿಯಿಂದ ಶಿರಚ್ಛೇಧನ ಮಾಡಿಸಿರುತ್ತಾನೆ. ಯೇಸುವಿಗಾಗಿ ಪ್ರಾಣಬಿಟ್ಟ ಪ್ರಥಮ ಅಪೊಸ್ತಲನು ಈತ.

**ಹುತಾತ್ಮನಾದ ವರ್ಷ : ಕ್ರಿ.ಶ. 44–45**

4) **ಯೋಹಾನನು :** ಯಾಕೋಬನ ತಮ್ಮನಾದ ಈತನು ಸದಾ ಯೇಸುವಿನೊಂದಿಗೇ ಇದ್ದು ಆತನ ಎದೆಗೆ ಒರಗಿಕೊಂಡಿರುತ್ತಿದ್ದ ಅತೀ ಪ್ರಿಯನಾದ ಶಿಷ್ಯ. ಯೇಸು ಶಿಲುಬೆಯ ಮೇಲಿದ್ದಾಗ ಈತನನ್ನು ನೋಡಿ ತನ್ನ ತಾಯಿ ಮರಿಯಳಿಗೆ – ಅಮ್ಮ, ಇಗೋ ನಿನ್ನ ಮಗನು ಎಂದು ಹೇಳಿದನು. ತರುವಾಯ ಈತನಿಗೆ– ಇಗೋ ನಿನ್ನ ತಾಯಿ ಎಂದು ಹೇಳಿದನು. ಆ ಹೊತ್ತಿನಿಂದ ಆಕೆಯನ್ನು ತನ್ನ ಮನೆಯಲ್ಲಿಯೇ ಬಹು ವಾತ್ಸಲ್ಯದಿಂದ ಇರಿಸಿಕೊಂಡನು. ಎಂಥಹ ಸೌಭಾಗ್ಯ ಈತನದು! ಯೇಸುವನ್ನು ಶಿಲುಬೆಗೇರಿಸಿದಾಗ ಆತನ ಎಲ್ಲಾ ಶಿಷ್ಯರು ಪ್ರಾಣ ಭಯದಿಂದ ಓಡಿ ಹೋಗಿದ್ದಾಗ್ಯೂ ಸಹ ಈತನು ಆತನೊಂದಿಗಿದ್ದನು. ಈತನನ್ನು ಒಮ್ಮೆ ಕುದಿಯುವ ಎಣ್ಣೆಯೊಳಗೆ ಹಾಕಿ ಹಿಂಸಿಸಿದರೂ ಯಾವ ಹಾನಿಯೂ ಆಗದಂತೆ ದೇವರು ಇವನನ್ನು ರಕ್ಷಿಸಿದನು. 'ತನ್ನ ಪ್ರಾಣವನ್ನು ಉಳಿಸಿಕೊಳ್ಳಬೇಕೆಂದಿರುವವನು ಅದನ್ನು ಕಳಕೊಳ್ಳುವನು; ಆದರೆ ನನ್ನ ನಿಮಿತ್ತವಾಗಿ ತನ್ನ ಪ್ರಾಣವನ್ನು ಕಳಕೊಂಡವನು ಅದನ್ನು ಕಂಡುಕೊಳ್ಳುವನು' ಎಂಬ ಯೇಸುವಿನ ಮಾತು ಎಷ್ಟು ಸತ್ಯವೆಂದು ಈತನ ಜೀವನದಿಂದ ಕಂಡುಕೊಳ್ಳಬಹುದು. ಸೇವೆಯ ನಿಮಿತ್ತವಾಗಿ ಪತ್ಮೋಸ್ ಎಂಬ ದ್ವೀಪದ ಸೆರೆಮನೆಯಲ್ಲಿ ಬಂಧಿಯಾಗಿದ್ದಾಗ ಯೇಸು ಕ್ರಿಸ್ತರು ಇವನಿಗೆ ದರ್ಶನ ನೀಡಿ; ಲೋಕದ ಅಂತ್ಯದಲ್ಲಿ ಸಂಭವಿಸಲಿಕ್ಕಿರುವ ಸಂಗತಿಗಳ ಬಗ್ಗೆ ಪ್ರಕಟಣೆ (ಕಾಲಜ್ಞಾನ)ಗಳನ್ನು ಅನುಗ್ರಹಿಸಿದರು. ಯೇಸು ಕ್ರಿಸ್ತರ ಶಿಷ್ಯರಲ್ಲಿ ಬಹು ವೃದ್ಧನಾಗಿ ಸ್ವಾಭಾವಿಕ ಮರಣ ಹೊಂದಿದ ಏಕೈಕ ಶಿಷ್ಯನು ಈತ.

**ಸ್ವಾಭಾವಿಕ ಮರಣ ಹೊಂದಿದ ವರ್ಷ : ಕ್ರಿ.ಶ. 95**

5) **ಫಿಲಿಪ್ಪ :** ಯೋಹಾನನ ಸುವಾರ್ತೆಯಲ್ಲಿ, ವಿಶೇಳವಾಗಿ ಗ್ರೀಕ್ ಸಮುದಾಯಕ್ಕೆ ಸಂಬಂಧಿಸಿದಂತೆ, ಫಿಲಿಪ್‌ನ ಬಗ್ಗೆ ಪ್ರಮುಖವಾಗಿ ಉಲ್ಲೇಖಿಸಲಾಗಿದೆ. ಗ್ರೀಕ್ ಹೆಸರನ್ನು ಹೊಂದಿದ್ದ ಮತ್ತು ಆ ಭಾಳೆಯಲ್ಲಿ ನರರ್ಗಳವಾಗಿ ಮಾತನಾಡುತ್ತಿದ್ದ ಫಿಲಿಪ್ ಆಗಾಗ್ಗೆ ಭಾಳಾಂತರ ಮಾಡಿ ಸೇತುವೆಯಾಗಿ ಕಾರ್ಯನರ್ವಹಿಸುತ್ತಿದ್ದನು, ತನ್ನ ಸಮುದಾಯದ ಸದಸ್ಯರನ್ನು ಯೇಸುವಿಗೆ ಪರಿಚಯಿಸುತ್ತಿದ್ದನು. ಕೊನೆಯ ಭೋಜನದ ಸಮಯದಲ್ಲಿ, ಫಿಲಿಪ್ ಯೇಸುವನ್ನು ಕೇಳಿದನು, "ಕರ್ತನೇ, ನಮಗೆ ತಂದೆಯನ್ನು ತೋರಿಸು, ನನಗೆ ಅಳ್ಟೇ ಸಾಕು." ಈ ವಿನಂತಿಯು ಯೇಸು ತಂದೆ ಮತ್ತು ಮಗನ ಐಕ್ಯತೆಯ ಬಗ್ಗೆ ಕಲಿಸಿದ ಆಳವಾದ ಕ್ಷಣಕ್ಕೆ ಕಾರಣವಾಯಿತು. ಫಿಲಿಪ್ ಹೊಸ ಒಡಂಬಡಿಕೆಯಲ್ಲಿ ಅಪೊಸ್ತಲರಲ್ಲಿ ಸ್ಥಿರವಾಗಿ ಐದನೇ ಸ್ಥಾನದಲ್ಲಿದ್ದಾನೆ. ಸಂಪ್ರದಾಯವು ಅವನನ್ನು ಹೈರಾಪೊಲಿಸ್ ನಗರದಲ್ಲಿ ಶಿರಚ್ಛೇದನದ ಮೂಲಕ



ಹುತಾತ್ಮಗೊಳಿಸಿತು ಎಂದು ಹೇಳುತ್ತದೆ. ಅವನ ನಂಬಿಕೆ ಮತ್ತು ಹುತಾತ್ಮತೆಯನ್ನು ಪ್ರತಿಬಿಂಬಿಸುವ ಲ್ಯಾಟಿನ್ ಶಿಲುಬೆಯಿಂದ ಅವನನ್ನು ಹೆಚ್ಚಾಗಿ ಸಂಕೇತಿಸಲಾಗುತ್ತದೆ. ಫಿಲಿಪ್‌ಗೆ ಸಂಬಂಧಿಸಿದ ಇತರ ಚಿಹ್ನೆಗಳಲ್ಲಿ ಎರಡು ರೊಟ್ಟಿಗಳನ್ನು ಹೊಂದಿರುವ ಶಿಲುಬೆ, ಒಂದು ಬುಟ್ಟಿ ಬ್ರೆಡ್, ಪಿತೃಪ್ರಧಾನ ಶಿಲುಬೆಯನ್ನು ಹೊಂದಿರುವ ಈಟಿ ಮತ್ತು ಬಡಗಿಯ ಚೌಕದೊಂದಿಗೆ ಜೋಡಿಸಲಾದ ಶಿಲುಬೆ ಸೇರಿವೆ. ಜುಲೈ 2011 ರಲ್ಲಿ, ಪುರಾತತ್ವಜ್ಞರು ಟರ್ಕಿಯ ಡೆನಿಜ್ಲಿ ಬಳಿಯ ಹೈರಾಪೊಲಿಸ್‌ನಲ್ಲಿ ಫಿಲಿಪ್‌ನ ಸಮಾಧಿಯನ್ನು ಕಂಡುಹಿಡಿದರು. ಹೊಸದಾಗಿ ಕಂಡುಬಂದ ಚರ್ಚ್‌ನೊಳಗೆ ಪತ್ತೆಹಚ್ಚಿದ ಶಾಸನಗಳು ಮತ್ತು ಸಮಾಧಿಯ ವಿಶಿಳ್ಟ ವಿನ್ಯಾಸವು ಅದನ್ನು ಹುತಾತ್ಮರಾದ ಅಪೊಸ್ತಲನಗೆ ಸೇರಿದೆ ಎಂದು ಗುರುತಿಸಿದೆ. ಟರ್ಕಿಶ್ ಸುದ್ದಿ ಮೂಲಗಳು ವರದಿ ಮಾಡಿದಂತೆ, ಈ ಗಮನಾರ್ಹ ಆವಿಳ್ಕಾರವು ಫಿಲಿಪ್ ಅವರ ಅಂತಿಮ ವಿಶ್ರಾಂತಿ ಸ್ಥಳದ ಐತಿಹಾಸಿಕ ದೃಢೀಕರಣವನ್ನು ಒದಗಿಸಿತು.

**ಹುತಾತ್ಮನಾದ ವರ್ಷ : ಕ್ರಿ.ಶ. 54**

6) **ಬಾರ್ತೋಲೊಮಾಯ (ನತಾನಿಯೇಲ) :** ಈತನು ಮೋಶೆಯ ಧರ್ಮ ಶಾಸ್ತ್ರವನ್ನು, ಪ್ರವಾದಿಗಳ ಗ್ರಂಥಗಳನ್ನು ಆಳವಾಗಿ ಅಭ್ಯಾಸ ಮಾಡಿದ್ದು ಬರಲಿರುವ ಮೆಸ್ಸೀಯನನ್ನು ಅಂದರೆ ಯೇಸುವನ್ನು ಎದುರು ನೋಡುತ್ತಿದ್ದವನು. ಯೇಸು ಕ್ರಿಸ್ತರು ತಾನೇ ಇವನನ್ನು ಕಪಟವಿಲ್ಲದ ಇಸ್ರಾಯೇಲನೆಂದು ಕರೆದಿರುತ್ತಾರೆ. ಯೇಸುವಿಗೆ– ಗುರುವೇ ನೀನು ದೇವಕುಮಾರನು ಸರಿ; ನೀನೇ ಇಸ್ರಾಯೇಲಿನ ಅರಸನು ಎಂದು ಹೇಳಿ ಆತನ ಶಿಷ್ಯನಾದನು. ಅಪೋಸ್ತಲರೊಂದಿಗೆ ಏಕಮನಸ್ಸಾಗಿ ಪ್ರಾರ್ಥನೆಯಲ್ಲಿ ನಿರತನಾಗಿರುತ್ತಿದ್ದ ಪ್ರಾರ್ಥನಾ ವೀರನು ಈತ. ಅಪೋಸ್ತಲರ ಕಾಲದ ಸಭಾ ಸ್ಥಾಪನೆಯಲ್ಲಿ ಪ್ರಮುಖ ಮತ್ತು ಅಧಿಕೃತ ನಾಯಕರಲ್ಲಿ ಈತನೂ ಒಬ್ಬನು. ಭಾರತ ಹಾಗೂ ಅರ್ಮೇನಿಯಾ ದೇಶಗಳಲ್ಲಿ ಬಲವಾಗಿ ಸೇವೆಮಾಡಿದ ಇವನನ್ನು ಕೊನೆಯಲ್ಲಿ ಚಾಟಿಯಿಂದ ಭೀಕರವಾಗಿ ಹೊಡೆದು, ಜೀವಂತವಾಗಿ ಚರ್ಮ ಸುಲಿದು ನಂತರ ಶಿರಶ್ಛೇಧನ ಮಾಡಲಾಗಿರುತ್ತದೆ.

**ಹುತಾತ್ಮನಾದ ವರ್ಷ : ಕ್ರಿ.ಶ. 70**

7) **ತೋಮ :** ಇವನು ಕೂಡ ಬೆಸ್ತನು. ಯೇಸು ಸ್ವಾಮಿಯ ಪುನರುತ್ಥಾನದ ವಿಷಯದಲ್ಲಿ ಅನುಮಾನಪಡುತ್ತಿದ್ದ ಈ ಶಿಷ್ಯನಿಗಾಗಿ ಯೇಸುವು ಪುನಃ ಶಿಷ್ಯರೆಲ್ಲರ ಮಧ್ಯದಲ್ಲಿ ಕಾಣಿಸಿಕೊಂಡಾಗ ಆತನನ್ನು ನೋಡಿದ್ದು ಮಾತ್ರವಲ್ಲದೆ ಪುನರುತ್ಥಾನರಾದ ಕ್ರಿಸ್ತರ ಮಹಿಮಾ ಶರೀರವನ್ನು ಸ್ಪರ್ಶಿಸುವ ಭಾಗ್ಯವನ್ನು ಹೊಂದಿದವನು. ಈತನು ಕ್ರಿಸ್ತ ಶಕ 52 ರಲ್ಲಿ ನಮ್ಮ ಭಾರತದ ಕೇರಳ ರಾಜ್ಯಕ್ಕೆ ಬಂದು ಅಲ್ಲಿ ಸುಮಾರು 10 ವರ್ಷ, ನಂತರ ಚೆನ್ನೈನಲ್ಲಿ ಸಹ 10 ವರ್ಷ ಯೇಸು ಕ್ರಿಸ್ತರ ಶುಭ ಸಂದೇಶ

ಸಾರಿದನು. ಈತನನ್ನು ಅರ್ಚಕರುಗಳು ಈಟಿಯಿಂದ ತಿವಿದು ಬೆಂಕಿಯ ಒಲೆಯಲ್ಲಿ ಸುಟ್ಟು ಹಾಕಲಾಗಿರುತ್ತದೆ. ಈತನು ನಮ್ಮ ದೇಶದಲ್ಲಿ ಹುತಾತ್ಮನಾದ ಯೇಸು ಕ್ರಿಸ್ತರ ಅಪೊಸ್ತಲನು. ಜಗತ್ತಿನಲ್ಲಿ ಕೇವಲ 3 ಚರ್ಚ್‌ಗಳು ಮಾತ್ರ ಅಪೋಸ್ತಲರ ಸಮಾಧಿಗಳ ಮೇಲೆ ನಿರ್ಮಿಸಲಾಗಿದ್ದು ಅವುಗಳೆಂದರೆ ವ್ಯಾಟಿಕನ್ ನಗರದ ಸೈಂಟ್ ಪೀಟರ್ಸ್(ಪೇತ್ರ), ಸ್ಪೈನ್ ದೇಶದ ಸೈಂಟ್ ಜೇಮ್ಸ್(ಯಾಕೋಬ) ಮತ್ತು ಭಾರತದ ಚೆನ್ನೈನಲ್ಲಿರುವ ಸೈಂಟ್ ಥಾಮಸ್(ತೋಮ) ಚರ್ಚ್‌ಗಳು ಆಗಿರುತ್ತವೆ. ಈತನ ನೆನಪಿಗಾಗಿ ಭಾರತ ಸರ್ಕಾರವು ಎರಡು ಅಂಚೆ ಚೀಟಿಗಳನ್ನು ಬಿಡುಗಡೆ ಮಾಡಿರುತ್ತದೆ.

**ಹುತಾತ್ಮನಾದ ದಿನಾಂಕ : 21–12–0072 ಸ್ಥಳ: ಮೈಲಾಪುರ, (ಚೆನ್ನೈ) ಭಾರತ**

**8) ಮತ್ತಾಯ** : ರೋಮ್ ಅಧಿಕಾರಿಗಳ ಕೆಳಗೆ ಕಪೆರ್ನೌಮಿನಲ್ಲಿ ಸುಂಕದವನಾದ ಈತನು ವಿದ್ಯಾವಂತ ಮತ್ತು ಧನವಂತನಾಗಿದ್ದನು. 'ನನ್ನನ್ನು ಹಿಂಬಾಲಿಸು' ಎಂದು ಯೇಸು ಹೇಳಿದ ಒಂದೇ ಮಾತಿಗೆ ವಿಧೇಯನಾಗಿ ತಕ್ಷಣವೇ ತನ್ನ ವೃತ್ತಿಯನ್ನು ತನಗಿದ್ದ ಆಸ್ತಿಯನ್ನು ಬಿಟ್ಟು ಯೇಸುವನ್ನು ಹಿಂಬಾಲಿಸಿದವನು. ಹಾಗೂ ಬಹು ಸಂತೋಷದಿಂದ ಅಂದೇ ಯೇಸುವನ್ನು ತನ್ನ ಮನೆಗೆ ಆಹ್ವಾನಿಸಿ ಔತಣ ಕೂಟವನ್ನು ಏರ್ಪಡಿಸಿ ಬಹುಮಂದಿ ಸುಂಕದವರೂ ಮತ್ತು ಪಾಪಿಗಳನ್ನು, ಬಂದು ಮಿತ್ರರೆಲ್ಲರನ್ನೂ ಔತಣಕ್ಕೆ ಆಹ್ವಾನಿಸಿ ಎಲ್ಲರಿಗೂ ಕ್ರಿಸ್ತರ ಪರಿಚಯ ಮಾಡಿ ಆಶೀರ್ವಾದ ಹೊಂದಲು ಅವಕಾಶ ಮಾಡಿಕೊಟ್ಟನು. ಗ್ರೀಕ್ ಅರಮಾಯಿಕ್, ಹಿಬ್ರೂ ಮತ್ತು ಲ್ಯಾಟೀನ್ ಭಾಷೆಗಳನ್ನು ಬಲ್ಲವನಾಗಿದ್ದ ಈತನು ಈಥಿಯೋಪಿಯಾ, ಸಿರಿಯಾ ಹಾಗೂ ಪರ್ಶಿಯಾ ದೇಶಗಳಲ್ಲಿ ಬಲವಾಗಿ ಸೇವೆಮಾಡಿ ಸಭೆಗಳನ್ನು ಸ್ಥಾಪಿಸಿದವನು. ಅರಾಮಿಕ್ ಭಾಷೆಯಲ್ಲಿಯೇ ಸುವಾರ್ತೆ ಬರೆದು ಪ್ರಕಟಿಸಿದನು. ಇವನನ್ನು ಈಟಿಯಿಂದ ಇರಿದು ಹತ್ಯೆಮಾಡಲಾಗಿರುತ್ತದೆ.

**ಹುತಾತ್ಮನಾದ ವರ್ಷ : ಕ್ರಿ.ಶ. 60–70**

**9) ಅಲ್ಫಾಯನ ಮಗನಾದ ಯಾಕೋಬ** : ತನ್ನ ಸಹೋದರ ಮತ್ತಾಯನ ಜೊತೆಯಲ್ಲೇ ಯೇಸುವನ್ನು ಹಿಂಬಾಲಿಸಿದ ಈತನು ವಯಸ್ಸಿನಲ್ಲಿ ಎಲ್ಲರಿಗಿಂತ ಚಿಕ್ಕವನಾಗಿದ್ದನು. ಇವನು ತನ್ನ ಯೋಗ್ಯತೆ ಮೀರಿ ಭಾವಿಸಿಕೊಳ್ಳದೇ ಯೇಸು ತನಗೆ ಯಾವ ಕೆಲಸವನ್ನು ಹೇಳುತ್ತಾನೋ ಅದನ್ನು ಶ್ರದ್ದೆಯಿಂದ ಮಾಡುತ್ತಿದ್ದನು. ಯೆರೂಸಲೇಮಿನಲ್ಲಿ ಸೇವೆಯನ್ನು ಮಾಡಿ ಸಭೆಗಳನ್ನು ಬಲಪಡಿಸಿದನು. ಈತನ ಕೈಗಳಿಗೆ ಕೋಳ ಹಾಕಿ ದೇವಸ್ಥಾನದ ಎತ್ತರದ ಗೋಪುರದ ತುಟ್ಟ ತುದಿಯಿಂದ ಕೆಳಗೆ ದೂಡಿದರೂ ಸಾಯಲಿಲ್ಲವಾದ್ದರಿಂದ ಅಗಸರು ಬಟ್ಟೆ ಒಗೆಯಲು ಉಪಯೋಗಿಸುವ ಕೋಲಿನಿಂದ ಕ್ರೂರವಾಗಿ ಮೆದುಳು ಹೊರಬರುವಂತೆ ಹೊಡೆದು ಹತ್ಯೆಮಾಡಲಾಗಿರುತ್ತದೆ. **ಹುತಾತ್ಮನಾದ ವರ್ಷ : ಕ್ರಿ.ಶ. 63**



**10) ತದ್ದಾಯ** : ಈತನನ್ನು ಯಾಕೋಬನ ಮಗನಾದ ಯೂದನೆಂದು ಕರೆಯಲಾಗಿದೆ. ಈತನು ಒಮ್ಮೆ ಯೇಸುವಿಗೆ ಸ್ವಾಮಿ, ನೀನು ಈ ಲೋಕಕ್ಕೆ ಕಾಣಿಸಿಕೊಳ್ಳದೆ ನಮಗೆ ಮಾತ್ರ ಕಾಣಿಸಿಕೊಳ್ಳುವುದಕ್ಕೆ ಏನು ಸಂಭವಿಸಿತು? ಎಂದು ಕೇಳಿದ್ದು; ಅದಕ್ಕೆ ಕ್ರಿಸ್ತರು "ಯಾರಾದರೂ (ಯೆಹೂದ್ಯರಲ್ಲದವರೂ ಸಹ) ನನ್ನನ್ನು ಪ್ರೀತಿಸುವವನಾದರೆ ನನ್ನ ಮಾತನ್ನು ಕೈಗೊಂಡು ನಡೆಯುವನು; ಅವನನ್ನು ನನ್ನ ತಂದೆಯು(ದೇವರು) ಪ್ರೀತಿಸುವನು, ಮತ್ತು ನಾವಿಬ್ಬರೂ ಅವನ ಬಳಿಗೆ ಬಂದು ಅವನ ಮನೆಯಲ್ಲಿ ಬಿಡಾರವನ್ನು ಮಾಡಿಕೊಳ್ಳುವೆವು. ನೀವು ಆಲಿಸುವ ಮಾತು ನನ್ನದಲ್ಲ, ನನ್ನನ್ನು ಕಳುಹಿಸಿದ ದೇವರ ಮಾತೇ" ಎಂದು ಹೇಳಿರುತ್ತಾರೆ. ಕ್ರಿಸ್ತರ ಉಪದೇಶಗಳನ್ನು ಸಾರಲು ಯೆರೂಸಲೇಮನ್ನು ಬಿಟ್ಟು ವಿದೇಶಗಳಿಗೆ ಹೋಗಿದ್ದ ಮೊದಲ ಅಪೋಸ್ತಲನು ಈತ. ಸಿರಿಯಾ ದೇಶದ ರಾಜ ಅಡ್ಗರ್ ಅಸ್ವಸ್ತನಾದಾಗ ಈತನಿಂದ ಪ್ರಾರ್ಥನೆ ಮಾಡಿಸಿಕೊಂಡು ಸ್ವಸ್ತನಾಗಿ ಯೇಸುವನ್ನು ನಂಬಿದನು. ಸೇವೆಯಲ್ಲಿ ಅನೇಕ ಹಿಂಸೆಗೆ ಒಳಗಾದ ಇವನನ್ನು ಕಡೆಯಲ್ಲಿ ಅರ್ಮೇನಿಯಾ ದೇಶದಲ್ಲಿ ದೊಣ್ಣೆಯಿಂದ ಹೊಡೆದು ಹತ್ಯೆಮಾಡಲಾಗಿರುತ್ತದೆ. **ಹುತಾತ್ಮನಾದ ವರ್ಷ : ಕ್ರಿ.ಶ. 72**

**11) ಮತಾಭಿಮಾನಿ ಎನಿಸಿಕೊಂಡ ಸೀಮೋನನು** : ಯೆಹೂದಿಗಳನ್ನು ದೇವರೇ ಆಳಬೇಕು ಎಂದು ರೋಮನ್ನರ ಆಳ್ವಿಕೆಯನ್ನು ದ್ವೇಷಿಸುತ್ತಿದ್ದ ಮತಾಭಿಮಾನಿಗಳ ಪಂಗಡಕ್ಕೆ ಸೇರಿದ ಈತ ಕತ್ತಿಯಿಂದಲೇ ಲೋಕದಲ್ಲಿ ಯೆಹೂದ ರಾಜ್ಯವನ್ನು ಸ್ಥಾಪಿಸಬೇಕೆಂದು ಹೋರಾಡುತ್ತಿದ್ದವನು, ಯೇಸು ಕ್ರಿಸ್ತರ ಉಪದೇಶ ಕೇಳಿ ಕತ್ತಿಯಿಂದ ಮಾತ್ರವಲ್ಲ; ಪ್ರೇಮದಿಂದಲೂ ದೇವರ ರಾಜ್ಯವನ್ನು ಸ್ಥಾಪಿಸಬಹುದೆಂಬ ಸತ್ಯವನ್ನು ಕಂಡುಕೊಂಡು ಬಹು ಸಾತ್ವಿಕನಾಗಿ ಮಾರ್ಪಟ್ಟು ಯೇಸು ಕ್ರಿಸ್ತರ ಉಪದೇಶಗಳನ್ನು ಅನೇಕ ದೇಶಗಳಿಗೆ ಸಾರಿದವನು. ಯೇಸುವನ್ನು ಹಿಡಿದುಕೊಟ್ಟು ದ್ರೋಹಿಯಾದ ಇಸ್ಕರಿಯೋತ ಯೂದನಂತೆ ಈತನು ಸಹ ಕ್ರಿಸ್ತನು ಯೆಹೂದ್ಯರನ್ನು ರೋಮನ್ನರ ಆಡಳಿತದಿಂದ ಬಿಡುಗಡೆ ಮಾಡುತ್ತಾನೆ ಎಂದು ಭಾವಿಸಿದ್ದನು. ಯೂದನು ಗುರುದ್ರೋಹಿಯಾಗಿ ಆತ್ಮಹತ್ಯೆ ಮಾಡಿಕೊಂಡು ಪ್ರಾಣಬಿಟ್ಟರೆ, ಈತನು ಗುರುವಿನ ಉಪದೇಶಗಳನ್ನು ಸಾರುವ ನಿಮಿತ್ತ ಹುತಾತ್ಮನಾದದ್ದು ಎಷ್ಟೋಂದು ಶ್ರೇಷ್ಠ ಸಂಗತಿಯಲ್ಲವೇ. ಈ ಶಿಷ್ಯನು ಗ್ರೇಟ್‌ಬ್ರಿಟನ್ ಸೇರಿದಂತೆ ಈಜಿಪ್ಟ್, ಬರ್ರೈನಿ, ಆಫ್ರಿಕ, ಮಾರ್ಬಾನಿಯ, ಲಿಬಿಯಾ ಮತ್ತು ಇನ್ನಿತರೆ ದೇಶಗಳಲ್ಲಿ ಕ್ರಿಸ್ತರ ಉಪದೇಶಗಳನ್ನು ಸಾರಿದವನು. ಇವನನ್ನು ಶಿಲುಬೆಗೇರಿಸಿ ನಂತರ ತುಂಡು ತುಂಡಾಗಿ ಕತ್ತರಿಸಿ ಹತ್ಯ ಮಾಡಲಾಗಿರುತ್ತದೆ.

**ಹುತಾತ್ಮನಾದ ವರ್ಷ : ಕ್ರಿ.ಶ. 74**

**12) ಇಸ್ಕರಿಯೋತ ಯೂದ:** ಒಮ್ಮೆ ಮರಿಯಳು ಬಹು ಬೆಲೆಯುಳ್ಳ ಅಚ್ಚ ಜಟಾಮಾಂಸಿ ತೈಲವನ್ನು ಒಂದು ಸೇರಷ್ಟು ತಂದು ಯೇಸುವಿನ ಪಾದಕ್ಕೆ ಹಚ್ಚಿ ತನ್ನ ತಲೇಕೂದಲಿನಿಂದ ಆತನ ಪಾದಗಳನ್ನು ಒರೆಸಿದಳು. ಆ ತೈಲದ ಪರಿಮಳ ಮನೆಯಲ್ಲೆಲ್ಲಾ ತುಂಬಿಕೊಂಡಿತು. ಇದನ್ನು ನೋಡಿದ ಯೂದನು ಈ ತೈಲವನ್ನು ಮುನ್ನೂರು ಹಣಕ್ಕೆ ಮಾರಬಹುದಿತ್ತು ಎಂದು ಕಿಡಿಕಾರಿದ್ದನ್ನು ನೋಡಿದರೆ ಯೇಸುವಿಗಿಂತ ಹಣವೇ ಇವನಿಗೆ ಮುಖ್ಯವಾಗಿತ್ತು. ಕ್ರಿಸ್ತರು ಸಮಸ್ತವನ್ನು ತಿಳಿದವರಾಗಿದ್ದರೂ ಸಹ ಈತನನ್ನು ಮೂರುವರೆ ವರ್ಷಗಳು ತನ್ನ ಜೊತೆಯಲ್ಲಿರಿಸಿಕೊಂಡು ತನ್ನ ಮರಣದ ವರೆಗೂ ಈತನನ್ನು ಪ್ರೀತಿಸುತ್ತಾ ಬಂದರು. ಕ್ರಿಸ್ತರ ಜೀವನ, ಉಪದೇಶ ಮತ್ತು ಪವಾಡಗಳಿಂದ ಅನೇಕ ಕಡು ಪಾಪಿಗಳು, ಭ್ರಷ್ಟರು ಮಾನಸಾಂತರ ಹೊಂದಿದರೂ ಸಹ ಈತನಲ್ಲಿ ಯಾವುದೇ ಮಾನಸಾಂತರ ಉಂಟಾಗಲಿಲ್ಲ. ಹಣದಾಸೆಯು ಸಕಲ ಪಾಪಗಳಿಗೆ ಮೂಲ ಎಂಬಂತೆ ಕಡೆಗೆ ಇವನು 30 ಬೆಳ್ಳಿ ನಾಣ್ಯಗಳಿಗೆ ಆಸೆಪಟ್ಟು ಮಹಾ ಮಾನವತಾವಾದಿ ಲೋಕ ರಕ್ಷಕ ಕ್ರಿಸ್ತರನ್ನೇ ಶತ್ರುಗಳಿಗೆ ಹಿಡುಕೊಟ್ಟು ಜಗತ್ತಿನ ಇತಿಹಾಸದಲ್ಲಿಯೇ ಮಹಾ ದ್ರೋಹಿಯಾಗಿಬಿಟ್ಟನು. ಈ ವರೆಗೂ ಯಾವ ತಂದೆ ತಾಯಿಗಳೂ ತಮ್ಮ ಮಕ್ಕಳಿಗೆ ಯೂದನೆಂದು ಹೆಸರಿಟ್ಟಿರುವುದಿಲ್ಲ. ತಾನು ಮಾಡಿದ ಈ ಮಹಾ ದ್ರೋಹದಿಂದ ಪಶ್ಚಾತ್ತಾಪ ಉದ್ವೇಗಕ್ಕೆ ಒಳಗಾಗಿ ಆತ್ಮಹತ್ಯೆ ಮಾಡಿಕೊಂಡು ತನ್ನ ಅಮೂಲ್ಯ ಆತ್ಮವನ್ನು ನಷ್ಟಪಡಿಸಿಕೊಂಡನು. ಸ್ವಲ್ಪ ತಾಳ್ಮೆ ವಹಿಸಿ ಕ್ರಿಸ್ತರ ಬಳಿಗೆ ಬಂದು ಕ್ಷಮೆ ಕೇಳಿ ಸಮರ್ಪಿಸಿಕೊಂಡಿದ್ದರೆ ಕ್ರಿಸ್ತರು ಖಂಡಿತವಾಗಿ ಈತನನ್ನು ಕ್ಷಮಿಸುತ್ತಿದ್ದರು. ಪವಿತ್ರ ಸತ್ಯವೇದದ ಪ್ರಕಟಣೆ ಪುಸ್ತಕದಲ್ಲಿ ಬರೆಯಲ್ಪಟ್ಟಂತೆ ಹೊಸ ಯೆರೂಸಲೇಮಿನ(ಸ್ವರ್ಗದ) 12 ಅಸ್ತಿವಾರಗಳ ಮೇಲೆ ಬರೆಯಲ್ಪಟ್ಟ 12 ಜನ ಅಪೋಸ್ತಲರ ಹೆಸರುಗಳಲ್ಲಿ ಈತನ ಹೆಸರು ಇರುತ್ತಿತ್ತು **ಆತ್ಮಹತ್ಯೆ ಮಾಡಿಕೊಂಡ ವರ್ಷ ಕ್ರಿ.ಶ 33**

**13) ಮತ್ತೀಯ :** ಈತನು ಆರಂಭದಿಂದಲೇ ಯೇಸುವಿನ ಅನುಯಾಯಿ ಯಾಗಿದ್ದು ಯೇಸುವು ಆರಿಸಿಕೊಂಡ ಎಪ್ಪತ್ತು ಮಂದಿ ಶಿಷ್ಯರಲ್ಲಿ ಒಬ್ಬನಾಗಿದ್ದನು. ಯೇಸುವು ಮುಂದಾಗಿ ಹೋಗಬೇಕಾಗಿದ್ದ ಸ್ಥಳಗಳಿಗೆಲ್ಲಾ ಹೋಗಿ ಕ್ರಿಸ್ತರ ಉಪದೇಶಗಳನ್ನು ಸಾರಿದವನು ಈತ. ಯೇಸುವನ್ನು ಶತ್ರುಗಳಿಗೆ ಹಿಡಿದುಕೊಟ್ಟು ಭ್ರಷ್ಟನಾದ ಯೂದನ ಬದಲಿಗೆ ಅಪೋಸ್ತಲರ ಸಂಗಡ ಒಳ್ಳೆಯ ಒಡನಾಟ ಹೊಂದಿದ್ದ ಈತನನ್ನು ಅಪೊಸ್ತಲರೇ ಚೀಟುಹಾಕಿ ಆರಿಸಿಕೊಂಡರು. ಇಸ್ರಾಯಿಲ್ ದೇಶದ ಜೆರೂಸಲೇಮ್‌ನಲ್ಲಿ ಬಲವಾಗಿ ಸುವಾರ್ತೆ ಸಾರಿದವನು. ಕೊನೆಯಲ್ಲಿ ಇವನನ್ನು ಕಲ್ಲಿನಿಂದ ಹೊಡೆದು ಗಾಯಗೊಳಿಸಿ ನಂತರ ಶಿರಶ್ಛೇಧನ ಮಾಡಲಾಗಿರುತ್ತದೆ. ಈತನ ದೇಹದ ಅವಶೇಷಗಳನ್ನು ಜರ್ಮನಿಯ ಟ್ರಾಯರ್ ಹಾಗೂ ಇಟಲಿಯ ರೋಮ ಪಟ್ಟಣದಲ್ಲಿ ಸಂರಕ್ಷಿಸಿ ಇಡಲಾಗಿರುತ್ತದೆ.

**ಹುತಾತ್ಮನಾದ ವರ್ಷ : ಕ್ರಿ.ಶ. 70**




**14) ಪೌಲ:** ಪುನರುತ್ಥಾನರಾದ ಯೇಸು ಕ್ರಿಸ್ತರಿಂದ ಆರಿಸಲ್ಪಟ್ಟ ಅಪೊಸ್ತಲನು ಈ ಪೌಲನು. ಈತನು ಯೌವ್ವನಸ್ಥನು, ಶ್ರೀಮಂತನು ಮತ್ತು ಈಗಿನ ಕಾಲದ 3 Ph. D. ಗಳಿಗೆ ಸಮಾನವಾದ ವಿಧ್ಯಾರ್ಹತೆಯನ್ನು ಹೊಂದಿದವನಾಗಿದ್ದನು. ಯೆಹೂದಿ ಧರ್ಮದಲ್ಲಿ ಅಭಿಮಾನಿಯಾಗಿದ್ದ ಈತನು ಕ್ರಿಸ್ತನನ್ನು ಹಿಂಬಾಲಿಸುವವರನ್ನು ಸೆರೆಮನೆಗೆ ಹಾಕಲು ಮತ್ತು ಕೊಲ್ಲಲು ಮಹಾಯಾಜಕರಿಂದ ಅಧಿಕಾರ ಪತ್ರ ಪಡೆದು ಪ್ರಯಾಣ ಮಾಡುತ್ತಿರುವಾಗ ಪುನರುತ್ಥಾನರಾದ ಯೇಸು ಕ್ರಿಸ್ತರ ದರ್ಶನವಾಗಿ ಆತನ ಆಜ್ಞೆಯಂತೆ ಅನ್ಯಜನರಿಗೂ, ಅರಸುಗಳಿಗೂ, ಇಸ್ರಾಯೇಲ್ಯರಿಗೂ ಕ್ರಿಸ್ತನ ಹೆಸರನ್ನು ತಿಳಿಸುವುದಕ್ಕಾಗಿ ನೇಮಿಸಲ್ಪಟ್ಟವನು ಈತ. ಈ ಕರೆಯ ನಿಮಿತ್ತ ತನಗಿದ್ದದ್ದೆಲ್ಲವನ್ನೂ ಕಸವೆಂದು ಎಣಿಸಿ ಎಲ್ಲವನ್ನೂ ತ್ಯಜಿಸಿ ಕ್ರಿಸ್ತರ ಶುಭ ಸಂದೇಶವನ್ನು ಸಾರಲು ತನ್ನನ್ನು ತಾನು ಒಪ್ಪಿಸಿಕೊಟ್ಟನು. ಬದುಕಿದರೂ ಸರಿಯೇ, ಸತ್ತರೂ ಸರಿಯೇ ನನ್ನ ದೇಹದ ಮೂಲಕ ಕ್ರಿಸ್ತರಿಗೆ ಮಹಿಮೆಯುಂಟಾಗಬೇಕೆಂಬುದು ಈತನ ಅಭಿಲಾಷೆಯಾಗಿತು.

ಈತನು ಮೂರು ಸುವಾರ್ತಾ ಪ್ರಯಾಣ ಮಾಡಿ 5 ಖಂಡಗಳಲ್ಲಿ ಅನೇಕ ಸಭೆಗಳನ್ನು ಸ್ಥಾಪಿಸಿದನು. ದೇವರು ಈತನ ಕೈಯಿಂದ ಅನೇಕ ಅದ್ಭುತ/ಸೂಚಕ ಕಾರ್ಯಗಳನ್ನು ನಡೆಸಿದ್ದು ಈತನ ವಸ್ತ್ರಗಳನ್ನು ರೋಗಿಗಳ ಮೇಲೆ ಹಾಕಲು ಅವರಿಗೆ ಗುಣವಾಗುತ್ತಿತ್ತು ಮತ್ತು ದೆವ್ವಗಳು ಸಹ ಬಿಟ್ಟುಹೋಗುತ್ತಿದ್ದವು ಹಾಗೂ ಈತನು ಸತ್ತವರನ್ನೂ ಸಹ ಜೀವದಿಂದ ಎಬ್ಬಿಸಿದ ಬಗ್ಗೆ ಪವಿತ್ರ ಸತ್ಯವೇದದಲ್ಲಿ ದಾಖಲಿಸಲ್ಪಟ್ಟಿದೆ. ಆದಾಗ್ಯೂ ಸ್ವಂತ ಯೆಹೂದ್ಯ ಮತಾವಲಂಬಿಗಳಿಂದ ತೀವ್ರ ವಿರೋಧವನ್ನು ಎದುರಿಸಿ ಅನೇಕ ಬಾರಿ ಸೆರಮನೆಗೆ ಹಾಕಲ್ಪಟ್ಟು ಸುಮಾರು 300 ಚಡಿ ಏಟು ತಿಂದವನು. ಉಪವಾಸವಾಗಿ, ಚಳಿಯಲ್ಲಿ ವಸ್ತ್ರವಿಲ್ಲದೆ ಇದ್ದು, ಅನೇಕ ಅಪಾಯಗಳನ್ನು ಎದುರಿಸಿ ಅನೇಕ ಸಾರಿ ಮರಣದ ಬಾಯಲ್ಲಿ ಸಿಕ್ಕಿಕೊಂಡವನು. ಪ್ರಯಾಸ ಪರಿಶ್ರಮಗಳಿಂದ ಕ್ರಿಸ್ತರ ಶುಭ ಸಂದೇಶ ಸಾರಿದವನು. ಪವಿತ್ರ ಸತ್ಯವೇದದಲ್ಲಿ 13 ಪತ್ರಿಕೆಗಳನ್ನು ಬರೆದಿರುತ್ತಾನೆ. ಈತನು ಯಾರಿಂದಲೂ ಆರ್ಥಿಕ ಸಹಾಯ ಬಯಸದೇ ತಾನೇ ಗುಡಾರಮಾಡುವ ಕಸುಬನ್ನು ಮಾಡಿ ಕೊರತೆಯಲ್ಲಿರುವವರಿಗೆ ಸಹಾಯ ಮಾಡುತ್ತಿದ್ದನು. ಮತ್ತು ತಾನೇ ಮಾಡಿಕೊಂಡ ಬಾಡಿಗೆಯ ಮನೆಯಲ್ಲಿ ಇದ್ದುಕೊಂಡು ತುಂಬಾ ಧೈರ್ಯದಿಂದ ದೇವರ ರಾಜ್ಯವನ್ನು ಪ್ರಸಿದ್ಧಿಪಡಿಸುತ್ತಾ ಇದ್ದನು. ಅಂತ್ಯದಲ್ಲಿ ಈತನು, 'ಶ್ರೇಷ್ಠ ಹೋರಾಟವನ್ನು ಮಾಡಿದ್ದೇನೆ. ಕ್ರಿಸ್ತ ನಂಬಿಕೆಯನ್ನು ಕಾಪಾಡಿಕೊಂಡಿದ್ದೇನೆ. ನೀತಿವಂತರಿಗೆ ದೊರಕುವ ಜಯಮಾಲೆ ನನ್ನ ಮುಂದೆ ಸಿದ್ಧವಾಗಿದೆ' ಎಂದು ಹೇಳಿದವನು. ಈತನನ್ನು ಶಿರಶ್ಛೇಧನ ಮಾಡಲಾಗಿದೆ ಎಂದು ಚರಿತ್ರೆ ಮೂಲಗಳು ಹೇಳುತ್ತದೆ. ಎಂಥಹ ಶ್ರೇಷ್ಠ ಅಪೊಸ್ತಲನು ಈತ! **ಹುತಾತ್ಮನಾದ ವರ್ಷ : ಕ್ರಿ.ಶ. 70**

ಮೇಲ್ಕಂಡ ಅಪೊಸ್ತಲರು ಸುಮಾರು ಮೂರೂವರೆ ವರ್ಷ ಕ್ರಿಸ್ತರ ಜೊತೆಯಲ್ಲಿದ್ದು ಆತನ ವ್ಯಕ್ತಿತ್ವ ಮತ್ತು ದೈವತ್ವವನ್ನು ನೋಡಿದ್ದು ಮಾತ್ರವಲ್ಲದೆ ಪುನರುತ್ಥಾನರಾದ ಕ್ರಿಸ್ತರೊಂದಿಗೆ ಸುಮಾರು ನಲ್ವತ್ತು ದಿನ ಇದ್ದು; ಆತನು ಆಕಾಶಕ್ಕೆ ಏರಿಹೋಗುವುದನ್ನು ಕಣ್ಣಾರೆ ಕಂಡಿದ್ದರಿಂದ ಯೇಸು ಕ್ರಿಸ್ತರ ಬೋಧನೆಗಳನ್ನು ಮನುಕುಲಕ್ಕೆ ಸಾರಲು ತಮ್ಮ ಇಡೀ ಜೀವನವನ್ನು ಮುಡುಪಾಗಿಟ್ಟು ಅನೇಕ ವಿಧವಾದ ಕಷ್ಟ ಸಂಕಟ ಹಿಂಸೆಗಳ ಮಧ್ಯೆ ಅನೇಕ ದೇಶಗಳಿಗೆ ಪ್ರಯಾಣ ಮಾಡಿ ಆತನ ಉಪದೇಶಗಳನ್ನು ಸಾರಿದರು. ಹಾಗೂ ಕ್ರಿಸ್ತರ ಹೆಸರಿನ ನಿಮಿತ್ತವಾಗಿ ಅವಮಾನ/ಹಿಂಸೆ ಪಡುವುದಕ್ಕೆ ಯೋಗ್ಯರೆನಿಸಿಕೊಂಡೆವೆಂದು ಸಂತೋಷಪಟ್ಟರು.

ಯೇಸು ಕ್ರಿಸ್ತರ ಸೇವೆಯು ಬರೀ ಮಾತಿನಿಂದ ಕೂಡಿರದೆ ಅನೇಕ ಅದ್ಭುತ ಸೂಚಕ ಕಾರ್ಯಗಳಿಂದ ಕೂಡಿದ್ದು; ಅನೇಕರ ಜೀವನಗಳನ್ನು ಪಾವನಗೊಳಿಸಿ ಯೇಸು ಕ್ರಿಸ್ತರ ದೈವಿಕ ಗುಣಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಸಮಾಜಕ್ಕೆ ಉತ್ತಮ ಕೊಡುಗೆಗಳನ್ನು ನೀಡುವಂತೆ ಮಾಡಿರುತ್ತದೆ.

## ಡಾ॥ ಗ್ರಾಹಂ ಸ್ಟೇನ್ಸ್



ಡಾ॥ ಗ್ರಾಹಂ ಸ್ಟೇನ್ಸ್ ರವರ ಕುಟುಂಬ

ಈ ಹಿಂದೆ ನಮ್ಮ ದೇಶದ ಒಡಿಸ್ಸಾ ರಾಜ್ಯದಲ್ಲಿ ಕುಷ್ಠರೋಗಿಗಳ ಮಧ್ಯೆ ಸೇವೆಮಾಡುತ್ತಿದ್ದ ಆಸ್ಟ್ರೇಲಿಯಾ ದೇಶದ ವೈದ್ಯ ಡಾ॥ ಗ್ರಾಹಂ ಸ್ಟೇನ್ಸ್ ಎಂಬುವವರು ದಿನಾಂಕ:22–01–1999 ರಂದು ಮೋನೋಹರಪುರ ಎಂಬ ಹಳ್ಳಿಯ ಕುಷ್ಠರೋಗಿಗಳ ಕ್ಯಾಂಪ್‌ನಲ್ಲಿ ಅವರ 10 ವರ್ಷದ ಫಿಲಿಪ್ ಮತ್ತು 6 ವರ್ಷದ ತಿಮೊಥೆ ಎಂಬ ಮುದ್ದು ಕಂದಮ್ಮಗಳೊಂದಿಗೆ ರಾತ್ರಿ ಮಲಗಿದ್ದಾಗ ದುಷ್ಕರ್ಮಿಗಳು ಅವರನ್ನು ಅಮಾನುಷವಾಗಿ ಹೊಡೆದು ಸಜೀವ ದಹನ ಮಾಡಿದರು. ಅವರುಗಳ ಸುಟ್ಟ ಎಲುಬುಗಳನ್ನು ಪರಿಶೀಲಿಸಿದಾಗ ಅವರು ತನ್ನಿಬ್ಬರು ಮುದ್ದು ಕಂದಮ್ಮಗಳನ್ನು ತಬ್ಬಿಕೊಂಡೇ ಪ್ರಾಣ ಬಿಟ್ಟಿರುವುದು ಕಂಡು ಬಂದಿರುತ್ತದೆ.

ನೂರಾರು ಕುಷ್ಠರೋಗಿಗಳನ್ನು ಪ್ರೀತಿಸಿ ಚಿಕಿತ್ಸೆ ನೀಡಿ; ಪುನರ್ವಸತಿ ಕಲ್ಪಿಸಿದವನಿಗೆ ಎಂಥಹಾ ಪ್ರತ್ಯುಪಕಾರ! ಈ ಘಟನೆಯ ಬಗ್ಗೆ ಅಂದಿನ ಮಾನ್ಯ ರಾಷ್ಟ್ರಪತಿಗಳಾದ ಶ್ರೀಯುತ ಕೆ. ಆರ್. ನಾರಾಯಣ್ ರವರು 'ಯಾವ ವ್ಯಕ್ತಿ ಕುಷ್ಠರೋಗಿಗಳ ಮಧ್ಯೆ ಸೇವೆ ಸಲ್ಲಿಸಲು ಬಂದನೋ, ಅವನಿಗೆ ಕೃತಜ್ಞತೆ ಸಲ್ಲಿಸಿ ಅವನನ್ನು ಆದರ್ಶಪ್ರಾಯನನ್ನಾಗಿ ಮಾಡಿ ಕೊಳ್ಳಬೇಕಾಗಿತ್ತು, ಆದರೆ



ಸಹಿಷ್ಣುತೆ ಮತ್ತು ಅಹಿಂಸೆಗೆ ಹೆಸರಾದ ಭಾರತ ದೇಶದಲ್ಲಿ ನಡೆದ ಈ ಅಮಾನವೀಯ ಅಪರಾಧ ಜಗತ್ತಿನ ಅತೀ ಕರಾಳ ಕೃತ್ಯವಾಗಿರುತ್ತದೆ ಎಂದು ತಮ್ಮ ಸಂತಾಪವನ್ನು ತಿಳಿಸಿರುತ್ತಾರೆ. ಇಂಥಹಾ ಪರಿಸ್ಥಿತಿಯಲ್ಲಿಯೂ ಸಹ ಡಾ॥ ಗ್ರಾಹಂ ಸ್ಟೇನ್ಸ್‌ರವರ ಪತ್ನಿ ಶ್ರೀಮತಿ ಗ್ಲಾಡಿಸ್‌ರವರು ತಮ್ಮ ಪತಿ ಹಾಗೂ ತನ್ನಿಬ್ಬರೂ ಗಂಡು ಮಕ್ಕಳನ್ನು ಅಮಾನುಷವಾಗಿ ಕೊಂದವರನ್ನು ನೋಡಿ, ಯೇಸು ಕ್ರಿಸ್ತನು ತನ್ನನ್ನು ಅಮಾನುಷವಾಗಿ ಹಿಂಸಿಸಿ ಕೊಲ್ಲುತ್ತಿರುವವರನ್ನು ನೋಡಿ– 'ತಂದೆಯೇ, ಅವರನ್ನು ಕ್ಷಮಿಸು ತಾವು ಏನು ಮಾಡುತ್ತಿದ್ದೇವೆಂಬುದನ್ನು ಅರಿಯರು' ಎಂದು ಅವರಿಗಾಗಿ ಪ್ರಾರ್ಥಿಸಿದ ಹಾಗೆಯೇ, ಅಪರಾಧಿಗಳನ್ನು ಹೃದಯಪೂರ್ವಕವಾಗಿ ಕ್ಷಮಿಸಿದರು. ಇದು ದೈವಿಕ ಪ್ರೀತಿಯಾಗಿರುತ್ತದೆ. ಅವರ ಸೇವೆಗಾಗಿ ಭಾರತ ಸರ್ಕಾರವು ಅವರಿಗೆ 'ಪದ್ಮಶ್ರೀ' ಮತ್ತು 'ಮದರ್ ತೆರೆಸಾ ಸ್ಮಾರಕ ಅಂತರಾಷ್ಟ್ರೀಯ ಪ್ರಶಸ್ತಿ' ನೀಡಿ ಗೌರವಿಸಿದೆ.

## ಮದರ್ ತೆರೆಸಾ



ಮದರ್ ತೆರೆಸಾರವರು ಯುಗೋಸ್ಲೋವಿಯಾ ದೇಶದಲ್ಲಿ ದಿನಾಂಕ:26–08–1910 ರಂದು ಜನಿಸಿದ್ದು ತನ್ನ 8 ನೇ ವಯಸ್ಸಿನಲ್ಲಿ ತಂದೆಯನ್ನು ಕಳೆದುಕೊಂಡ ಈಕೆಯನ್ನು ತಾಯಿ ಚರ್ಚ್‌ನ ಅನುಯಾಯಿಯಾಗಿ ಬೆಳೆಸಿದಳು. ತನ್ನ 18ನೇ ಯೌವ್ವನ ಪ್ರಾಯದಲ್ಲಿಯೇ ಸನ್ಯಾಸಿನಿಯಾಗಿ ಮನೆಯನ್ನು ತೊರೆದು 1929 ರಲ್ಲಿ ಭಾರತದ ಕೋಲ್ಕತ್ತಾದಲ್ಲಿ ಶಿಕ್ಷಕಿಯಾಗಿ 20 ವರ್ಷಗಳ ಕಾಲ ಸೇವೆ ಸಲ್ಲಿಸುವಾಗ ಶಾಲೆಯ ಹಿಂದಿದ್ದ ಕೊಳಗೇರಿಯಲ್ಲಿ ಊಟ ವಸತಿಗಳಿಲ್ಲದೇ ರೋಗ ರುಜಿನಗಳಿಂದ ನರಳಾಡುವ ಜನರನ್ನು ನೋಡಿ ಅವರುಗಳಿಗೆ ಏನನ್ನಾದರೂ ಮಾಡಲೇಬೇಕೆಂದು ನರ್ಸ್ ತರಬೇತಿಯನ್ನು ಪಡೆದು ನಿರಾಶ್ರಿತರ ಕೇಂದ್ರ ಪ್ರಾರಂಭಿಸುತ್ತಾರೆ. ಆಗ ಆಕೆಯ ಬಳಿಯಲ್ಲಿದ್ದದ್ದು ಕೇವಲ 5/– ರೂಪಾಯಿ ಮಾತ್ರ.

ಒಮ್ಮೆ ಆಹಾರ ಔಷಧಿಗಳ ಕೊರತೆ ನಿಮಿತ್ತ ಬೀದಿಗಿಳಿದು ಒಬ್ಬ ಮನುಷ್ಯನ ಬಳಿಯಲ್ಲಿ ತನ್ನೆರಡೂ ಕೈಗಳನ್ನು ಚಾಚಿ ಸಹಾಯ ಕೇಳಿದಾಗ ಆತನು ನೀವು ಪರದೇಶಿ ವಂಚಕರು ನಾಟಕ ಮಾಡುತ್ತೀರ "ಥೂ!" ಎಂದು ಉಗುಳಿದನು. ಆಗ ಈಕೆ ನೀನು ಉಗುಳಿದ್ದು ನನಗಿರಲಿ ಎಂದು ಒಂದು ಕೈ ಹಿಂದಕ್ಕೆ ಪಡೆದು; ಮತ್ತೊಂದು ಕೈಚಾಚಿ ಬಡವರಿಗಾಗಿ ಏನಾದರೂ ದಾನ ಮಾಡು ಎಂದಾಗ ಆ ವ್ಯಕ್ತಿ ಪಶ್ಚಾತ್ತಾಪ ಪಟ್ಟು ಕ್ಷಮೆ ಕೇಳಿ ಆಕೆಗೆ ಸಹಾಯ ಮಾಡಿದನು.

ಕೋಲ್ಕತ್ತಾದ ಕಾಳಿ ಮಂದಿರದ ಪಕ್ಕದಲ್ಲಿದ್ದ ಇವರ ಪಾಲನಾ ಕೇಂದ್ರದಲ್ಲಿ ಸೇವೆಯ ನೆಪದಲ್ಲಿ ಮತಾಂತರ ಮಾಡಲಾಗುತ್ತಿದೆ ಎಂದು ಮತಾಂಧರು ಪೋಲೀಸರಿಗೆ ದೂರು ನೀಡಲಾಗಿ; ತಪಾಸಣೆಗೆ ಬಂದ ಹಿರಿಯ ಅಧಿಕಾರಿ ಅಲ್ಲಿನ ಸಿಸ್ಟರ್‌ಗಳು ಕೊಳಕು ನಾರುವ ರೋಗಿಗಳ ಗಾಯಗಳನ್ನು ತೊಳೆದು ಪ್ರೀತಿಯಿಂದ ಉಪಚರಿಸುವುದನ್ನು ನೋಡಿ ಪ್ರತಿಭಟನಾಗಾರರಿಗೆ ನೀವಾಗಲೀ, ನಿಮ್ಮ ಅಕ್ಕ, ತಂಗಿ, ತಾಯಂದಿರಾಗಲೀ ಈ ಸೇವೆಯನ್ನು ಮುಂದು ವರೆಸುವುದಾದರೆ ಇವರನ್ನು ಇಂದೇ ಖಾಲಿ ಮಾಡಿಸುತ್ತೇನೆ ಎಂದು ಹೇಳಲು ಎಲ್ಲರೂ ನಾಚಿಕೆಯಿಂದ ಹಿಂದಿರುಗಿದರು.

2007 ರ ಹೊತ್ತಿಗೆ 123 ದೇಶಗಳಲ್ಲಿ ಸುಮಾರು 600 ಸೇವಾ ಕೇಂದ್ರಗಳನ್ನು ಸ್ಥಾಪಿಸಿ ನಿರಾಶ್ರಿತರಿಗೆ ಪ್ರೀತಿಯ ತಾಯಿಯಾದ ಈಕೆಗೆ 'ಭಾರತ ರತ್ನ' ಹಾಗೂ ಜಗತ್ತಿನ ಶ್ರೇಷ್ಠ 'ನೋಬಲ್ ಶಾಂತಿ' ಹಾಗೂ ಹಲವಾರು ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಗಿದೆ. ಕ್ಯಾಥೋಲಿಕ್ ಸಮುದಾಯ ಈಕೆಯನ್ನು ಸಂಥ ಪಧವಿಗೇರಿಸಿದೆ. ದಿ:05–09–1997ರಲ್ಲಿ ಇವರು ನಿಧನರಾದಾಗ ಭಾರತದ ಪೌರತ್ವ ಪಡೆದಿದ್ದ ಈ ಮಾತೆಯ ಪಾರ್ಥಿವ ಶರೀರವನ್ನು ಜವಾಹರಲಾಲ ನೆಹರೂ ಮತ್ತು ಮಹಾತ್ಮ ಗಾಂಧೀಜಿಯವರ ಪಾರ್ಥಿವ ಶರೀರವನ್ನು ಹೊತ್ತೋಯ್ದು ವಿಶೇಷ ತೋಪಿನ ಸರ್ಕಾರಿ ವಾಹನದಲ್ಲಿ ಮೂರನೆಯವರಾಗಿ ಇವರನ್ನು ಒಯ್ದದ್ದು ಹಾಗೂ ಅವರ ಅಂತ್ಯಕ್ರಿಯೆಯಲ್ಲಿ ಅನೇಕ ದೇಶಗಳ ಅಧ್ಯಕ್ಷರು, ಪ್ರಧಾನ ಮಂತ್ರಿಗಳು ಕುಟುಂಬವಾಗಿ ಭಾಗಿಯಾಗಿ ಗೌರವ ನಮನ ಸಲ್ಲಿಸಿದ್ದು ಪ್ರತಿ ಭಾರತೀಯನೂ ಹೆಮ್ಮೆ ಪಡುವ ಸಂಗತಿಯಾಗಿರುತ್ತದೆ.

ಇದೇ ಸ್ವಭಾವ ಪ್ರತಿ ಮಾನವರಲ್ಲಿ ಬಂದಲ್ಲಿ ಸ್ವರ್ಗದ ಅನುಭವವನ್ನು ಇಲ್ಲೇ ಸವಿಯಬಹುದಾಗಿರುತ್ತದೆ. ಆದ್ದರಿಂದಲೇ ಕೋಟ್ಯಾನುಕೋಟಿ ಜನರು ಯೇಸುವಿನ ಜೀವನ/ಉಪದೇಶಗಳಿಗೆ ಮಾರುಹೋಗಿ ಆತನ ಶುಭ ಸಂದೇಶವನ್ನು ಜಗತ್ತಿಗೆ ಸಾರಲು ತಮ್ಮ ಜೀವನವನ್ನು ಮುಡುಪಾಗಿಟ್ಟು ಆತನ ಸೇವೆ ಮಾಡುತ್ತಿದ್ದಾರೆ. ಅವರಲ್ಲಿ ಅಸಂಖ್ಯ ಜನರನ್ನು ಅಮಾನುಷವಾಗಿ ಹತ್ಯೆಗೈಯ್ಯಲಾಗಿರುತ್ತದೆ ಆದಾಗ್ಯೂ ಸಹ ಈ ಸೇವೆ ಇಂದಿನವರೆಗೂ ಮುಂದುವರೆದಿರುತ್ತದೆ. ಇದರ ಉದ್ದೇಶವೇನೆಂದರೆ ಪ್ರತಿ ಮಾನವನು ಪ್ರೀತಿ, ದಯೆ, ಸಹೋದರತ್ವ ಈ ಮೊದಲಾದ ದೈವಿಕ ಗುಣಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಯೇಸು ಕ್ರಿಸ್ತರಿಂದ ಉಚಿತವಾಗಿ ದೊರೆಯುವ ಮುಕ್ತಿಯನ್ನು ಸಂಪಾದಿಸಿಕೊಳ್ಳಬೇಕು ಮತ್ತು ಆದರ್ಶ ವ್ಯಕ್ತಿಗಳಾಗಿ ಬಾಳಿ ಸಮಾಜಕ್ಕೆ ಉತ್ತಮ ಕೊಡುಗೆ ನೀಡಬೇಕು ಎಂಬುದೇ ಆಗಿರುತ್ತದೆ.

**ಆದ್ದರಿಂದ ಕ್ರಿಸ್ತರ ಉಪದೇಶ ಸಾರುವವರಿಗೆ ನಮ್ಮ ನಮನಗಳನ್ನು ಸಲ್ಲಿಸೋಣ.**



**ದಿನಾಂಕ:09–12–2013 ರಂದು ಶಿವಮೊಗ್ಗ ನಗರದ ಸ್ಥಳೀಯ ದಿನಪತ್ರಿಕೆಯಲ್ಲಿ ಪ್ರಕಟವಾದ ಲೇಖನ**



# 20. ದೈವಿಕ ಜ್ಞಾನ



**"ಪರಹಿತಕ್ಕಾಗಿ ನಿಮ್ಮ ಜೀವನವನ್ನು ಮುಡುಪಾಗಿಡಿ; ಮಹತ್ಕಾರ್ಯವು ಮಹಾ ಬಲಿದಾನದ ಮೂಲಕ ಮಾತ್ರ ಸಾಧ್ಯ. ಯಾರು ತನ್ನ ಹೃದಯದ ನೆತ್ತರಿನಿಂದ ಇತರರಿಗೆ ದಾರಿ ನಿರ್ಮಿಸುತ್ತಾನೋ ಅವನೇ ಶ್ರೇಷ್ಠ ವ್ಯಕ್ತಿ"**

**– ಸ್ವಾಮಿ ವಿವೇಕಾನಂದರು (ವಿದ್ಯುತ್ ವಾಣಿ, ಪುಟ ಸಂಖ್ಯೆ : 6 ಮತ್ತು 7)**

ಸುಮಾರು 3000 ವರ್ಷಗಳ ಹಿಂದೆ ಇಸ್ರಾಯೇಲ್ ದೇಶದಲ್ಲಿ ಇಬ್ಬರು ಸ್ತ್ರೀಯರು ಸೊಲೊಮೋನ ಎಂಬ ಅರಸನ ಸನ್ನಿಧಿಗೆ ಬಂದರು. ಅವರಲ್ಲಿ ಒಬ್ಬಳು ಅರಸನಿಗೆ, 'ನನ್ನ ಒಡೆಯಾ, ಕೇಳು; ನಾನೂ ಈ ಹೆಂಗಸೂ ಒಂದೇ ಮನೆಯಲ್ಲಿ ವಾಸಿಸುತ್ತೇವೆ. ಇವಳು ಮನೆಯಲ್ಲಿದ್ದಾಗಲೇ ನಾನು ಮಗುವನ್ನು ಹೆತ್ತೆನು. ಮೂರನೆಯ ದಿನದಲ್ಲಿ ಇವಳೂ ಹೆತ್ತಳು. ನಾವಿಬ್ಬರೂ ಒಟ್ಟಿಗೆ ಇದ್ದೆವು; ನಮ್ಮಿಬ್ಬರ ಹೊರತು ಆ ಮನೆಯಲ್ಲಿ ಯಾರೂ ಇರಲಿಲ್ಲ. ಇವಳು ರಾತ್ರಿಯಲ್ಲಿ ತನ್ನ ಕೂಸಿನ ಮೇಲೆ ಹೊರಳಿದ್ದರಿಂದ ಅದು ಸತ್ತಿತು. ಮಧ್ಯರಾತ್ರಿಯಲ್ಲಿ ಇವಳೆದ್ದು ನಿನ್ನ ದಾಸಿಯಾದ ನಾನು ಗಾಢನಿದ್ರೆಯಲ್ಲಿದ್ದಾಗ ನನ್ನ ಮಗುವನ್ನು ನನ್ನ ಬಳಿಯಿಂದ ತೆಗೆದು ತನ್ನ ಮಗ್ಗುಲಲ್ಲಿಟ್ಟುಕೊಂಡಳು. ಸತ್ತುಹೋದ ತನ್ನ ಮಗುವನ್ನು ನನ್ನ ಮಗ್ಗುಲಲ್ಲಿಟ್ಟಳು. ನಾನು ಹೊತ್ತಾರೆ ಎದ್ದು ಮಗುವಿಗೆ ಮೊಲೆ ಕುಡಿಸಬೇಕೆಂದಿರುವಾಗ ಅದು ಸತ್ತಿತ್ತು. ಆದರೆ ಅದನ್ನು ಬೆಳಕಿನಲ್ಲಿ ನೋಡಿದಾಗ ಅದು ನಾನು ಹೆತ್ತ ಕೂಸಾಗಿರಲಿಲ್ಲ ಎಂದು ಹೇಳಿದಳು.' ಆಗ ಎರಡನೆಯವಳು– ಹಾಗಲ್ಲ, 'ಬದುಕಿರುವವನು ನನ್ನ ಮಗನು; ಸತ್ತಿರುವವನು ನಿನ್ನ ಮಗನು' ಎಂದು ನುಡಿದಳು. ಮೊದಲನೆಯವಳು ತಿರುಗಿ– ಅಲ್ಲ, 'ಸತ್ತಿರುವವನು ನಿನ್ನ ಮಗನು; ಬದುಕಿರುವವನು ನನ್ನ ಮಗನು' ಅಂದಳು. ಹೀಗೆ ಅವರು ಅರಸನ ಮುಂದೆ ವಾದಿಸುತ್ತಾ ಇದ್ದರು.

ಆಗ ಅರಸನು– 'ಜೀವದಿಂದಿರುವ ಕೂಸು ನನ್ನದು, ಸತ್ತಿರುವದು ನಿನ್ನದು ಎಂದು ಒಬ್ಬಳು ಹೇಳುತ್ತಾಳೆ; ಇನ್ನೊಬ್ಬಳು– ಅಲ್ಲ, ಸತ್ತಿರುವುದು ನಿನ್ನದು, ಜೀವದಿಂದಿರವುದು ನನ್ನದು ಅನ್ನುತ್ತಾಳೆ. ನನಗೊಂದು ಕತ್ತಿಯನ್ನು ತಂದು ಕೊಡಿರಿ' ಎಂದು ಸೇವಕರಿಗೆ ಹೇಳಿದನು. ಅವರು ತರಲು ಅರಸನು ಅವರಿಗೆ– 'ಜೀವದಿಂದಿರುವ ಕೂಸನ್ನು ಕಡಿದು ಎರಡು ಭಾಗಮಾಡಿ ಅರ್ಧವನ್ನು

ಇವಳಿಗೂ ಅರ್ಧವನ್ನು ಅವಳಿಗೂ ಕೊಡಿರಿ' ಎಂದು ಅಪ್ಪಣೆ ಮಾಡಿದನು. ಆಗ ಜೀವದಿಂದಿದ್ದ ಕೂಸಿನ ನಿಜವಾದ ತಾಯಿ ಕೂಸಿನ ವಿಷಯದಲ್ಲಿ ಕರುಳು ಮರುಗಿ– ನನ್ನ ಒಡೆಯಾ, ಬೇಡ; ಬದುಕಿರುವ ಕೂಸನ್ನು ಅವಳಿಗೇ ಕೊಟ್ಟುಬಿಡು; ಅದನ್ನು ಕೊಲ್ಲಿಸಬೇಡ ಎಂದು ಬೇಡಿಕೊಳ್ಳುವಲ್ಲಿ ಎರಡನೆಯವಳು– ಅದು ನನಗೂ ಬೇಡ, ನಿನಗೂ ಬೇಡ, ಕಡಿಯಲಿ ಎಂದು ಕೂಗಿದಳು. ಕೂಡಲೇ ಅರಸನು– ಬದುಕಿರುವ ಕೂಸನ್ನು ಕೊಲ್ಲಬೇಡಿರಿ, ಆ ಸ್ತ್ರೀಗೆ ಕೊಡಿರಿ; ಅವಳೇ ಅದರ ತಾಯಿ ಎಂದು ಆಜ್ಞಾಪಿಸಿದನು. ಇಸ್ರಾಯೇಲ್ಯರೆಲ್ಲರೂ ಅರಸನ ಈ ತೀರ್ಪನ್ನು ಕೇಳಿ ನ್ಯಾಯ ನಿರ್ಣಯಿಸುವದಕ್ಕೆ ಈತನಲ್ಲಿ ದೇವಜ್ಞಾನವಿದೆ ಎಂದು ತಿಳಿದು ಅವನಿಗೆ ಬಹಳವಾಗಿ ಭಯಪಟ್ಟರು. (1 ಅರಸು 3:16–28)

ದೇವರು ಸಕಲ ಪ್ರಾಣಿಗಳನ್ನು ಶರೀರ ಮತ್ತು ಪ್ರಾಣವಾಗಿ ಸೃಷ್ಟಿಸಿದ್ದಾನೆ. ಆದರೆ ಮಾನವನನ್ನು ಆತ್ಮ, ಪ್ರಾಣ ಮತ್ತು ಶರೀರವಾಗಿ ಸೃಷ್ಟಿಸಿದ್ದಾನೆ. ಆತ್ಮಕ್ಕೆ ಮಾತ್ರ ಜ್ಞಾನವಿರುತ್ತದೆ. ಜ್ಞಾನವಿಲ್ಲದ ಮನುಷ್ಯನೂ ಸಹ ಪ್ರಾಣಿಗಳ ಹಾಗೆಯೇ ಇರುವನು ಅವನಿಗೆ ಎಷ್ಟೇ ಐಶ್ವರ್ಯ, ಸೌಂದರ್ಯ ಮತ್ತು ಸಾಮರ್ಥ್ಯ ಎಲ್ಲಾ ಇದ್ದರೂ ಸಹ ಅವನು ಸಮಾಜದಲ್ಲಿ ಅತ್ಯಂತ ಕೆಳ ಸ್ಥಾನದಲ್ಲಿರುತ್ತಾನೆ. ಆದರೆ ಏನೂ ಇಲ್ಲದಿದ್ದರೂ ಸಹ ಜ್ಞಾನಿಯಾದವನು ಉನ್ನತ ಸ್ಥಾನಕ್ಕೆ ಏರಿಸಲ್ಪಟ್ಟು ಎಲ್ಲರನ್ನೂ ತನ್ನ ಅಧೀನದಲ್ಲಿಟ್ಟುಕೊಂಡು ಆಳುತ್ತಾನೆ. ಜ್ಞಾನಿಗಳು ತೇಜೋಮಯವಾದ ಆಕಾಶಮಂಡಲದಂತೆ ಪ್ರಕಾಶಿಸುವರು; ಬಹುಜನರನ್ನು ಸದ್ಧರ್ಮಿಗಳನ್ನಾಗಿ ಮಾಡುವರು. ಆದ್ದರಿಂದ ಮಾನವನ ಜೀವನದಲ್ಲಿ ಜ್ಞಾನವೆಂಬುದು ಅತ್ಯಂತ ಶ್ರೇಷ್ಠವಾಗಿರುತ್ತದೆ. ಅದಕ್ಕೆ ಯಾವುದೂ ಸಮಾನವಲ್ಲ.

ಈ ಲೋಕದಲ್ಲಿ ನಾವು ಬುದ್ಧಿಯನ್ನು ವಿಶ್ವವಿಧ್ಯಾಲಯಗಳಿಂದ/ ಗೂಗಲ್/ ಸಾಮಾಜಿಕ ಜಾಲತಾಣಗಳಿಂದ ಮತ್ತು 'ದೇಶ ತಿರುಗು ಅಥವಾ ಕೋಶ ಓದು' ಎಂದು ನಾಣ್ನುಡಿಯಂತೆ ಇತರೆ ಅನುಭವಗಳ ಮೂಲಕ ಪಡೆಯಬಹುದು. ಆದರೆ ಈ ದೈವಿಕ ಜ್ಞಾನವನ್ನು ಮಾತ್ರ ಈ ಲೋಕದಲ್ಲಿ ಪಡೆಯಲಾಗುವುದಿಲ್ಲ. ಏಕೆಂದರೆ **'ಇಹಲೋಕ ಜ್ಞಾನವು ದೇವರ ಮುಂದೆ ಹುಚ್ಚುತನವಾಗಿದೆ.'** ದೈವಿಕ ಜ್ಞಾನವು ಆತ್ಮಕ್ಕೆ ಸಂಬಂಧಿಸಿದ್ದು, ಆತ್ಮದ ಒಡೆಯನು ಪರಮಾತ್ಮನಾಗಿದ್ದು, ಆತನಿಂದ ಮಾತ್ರ ನಾವು ಜ್ಞಾನವನ್ನು ಪಡೆಯಬಹುದಾಗಿರುತ್ತದೆ.



ಈ ಬಗ್ಗೆ ಪವಿತ್ರ ಸತ್ಯವೇದ ಹೀಗೆ ಹೇಳುತ್ತದೆ. **'ದೇವರ ಭಯವೇ ಜ್ಞಾನಕ್ಕೆ ಮೂಲವು; ಆತನ ಕಟ್ಟಳೆಗಳನ್ನು ನಡೆಸುವವರು ಪೂರ್ಣ ವಿವೇಕಿಗಳು.'** ದೇವರ ಭಯವೆಂದರೆ ಅದು ಕೇವಲ ಜಪ–ತಪ, ಪೂಜೆ–ಪುನಸ್ಕಾರ ಇತ್ಯಾದಿಗಳಿಂದ ಕೂಡಿರುವ ಧಾರ್ಮಿಕ ಕಾರ್ಯಗಳಾಗಿರದೆ ನಿಜವಾಗಿಯೂ ಅದು ಪಾಪವನ್ನು ದ್ವೇಷಿಸುವುದಾಗಿರುತ್ತದೆ: ಅಂದರೆ– ಗರ್ವ, ಅಹಂಭಾವ, ದುರ್ಮಾರ್ಗತನ, ಕುಟಿಲಭಾಷಣ ಇತ್ಯಾದಿಗಳನ್ನು ಹಗೆ ಮಾಡುವಂತಹದಾಗಿರುತ್ತದೆ.

ಆದ್ದರಿಂದ ದೇವರ ಮಾತುಗಳನ್ನು ಅಂಗೀಕರಿಸಿ ಆತನ ವಿಧಿಗಳನ್ನು ನಿಧಿಯಂತೆ ಕಾಪಾಡಿಕೊಳ್ಳಿರಿ, ನಿಮ್ಮ ಕಿವಿಯನ್ನು ಜ್ಞಾನದ ಕಡೆಗೂ ಹೃದಯವನ್ನು ವಿವೇಕದ ಕಡೆಗೂ ತಿರುಗಿಸಿರಿ; ಬುದ್ಧಿಗಾಗಿ ಮೊರೆಯಿಟ್ಟು ವಿವೇಕಕ್ಕಾಗಿ ಕೂಗಿಕೊಂಡು ಅದನ್ನು ಬೆಳ್ಳಿಯಂತೆಯೂ ನಿಕ್ಷೇಪದಂತೆಯೂ ಹುಡುಕಿರಿ; ಆಗ ನೀವು ಸಹ ದೈವಿಕ ಜ್ಞಾನವನ್ನು ಪಡೆದುಕೊಳ್ಳುವಿರಿ. ದೇವರೇ ಜ್ಞಾನವನ್ನು ಕೊಡುವಾತನು, ಆತನ ಬಾಯಿಂದಲೇ ತಿಳುವಳಿಕೆಯೂ ವಿವೇಕವೂ ಹೊರಟು ಬರುತ್ತದೆ. ಆತನು ಯಥಾರ್ಥಚಿತ್ತರಿಗಾಗಿ ಸುಜ್ಞಾನವನ್ನು ಕೂಡಿಸಿಡುವನು. ಜ್ಞಾನವು ನಿಮ್ಮ ಹೃದಯದೊಳಗೆ ಪ್ರವೇಶಿಸುವುದು, ತಿಳುವಳಿಕೆಯು ನಿಮ್ಮ ಆತ್ಮಕ್ಕೆ ಅಂದವಾಗಿರುವುದು. ಬುದ್ಧಿಯು ನಿಮಗೆ ಕಾವಲಾಗಿರುವುದು, ವಿವೇಕವು ನಿಮ್ಮನ್ನು ಕಾಪಾಡುವುದು; ಇದರಿಂದ ನೀವು ದುರ್ಮಾರ್ಗದಿಂದಲೂ ಕೆಟ್ಟಮಾತನಾಡುವವರಿಂದಲೂ ತಪ್ಪಿಸಿಕೊಳ್ಳುವಿರಿ. ವಿವೇಕವು ನಿಮ್ಮನ್ನು ಜಾರಳಿಂದ ಅಂದರೆ ಸವಿ ಮಾತನಾಡುವ ಪರಸ್ತ್ರೀಯಿಂದ ತಪ್ಪಿಸುವುದು. ಅವಳ ಮನೆಯೇ ಪಾತಾಳಕ್ಕೆ ಇಳಿಯುವ ದಾರಿ, ಅವಳ ಮಾರ್ಗಗಳು ಪ್ರೇತಲೋಕಕ್ಕೆ ಹೋಗುತ್ತವೆ. ಅವಳ ಬಳಿಗೆ ಹೋಗುವವರು ಯಾರೂ ಹಿಂದಿರುಗುವುದಿಲ್ಲ. ಅವರಿಗೆ ಜೀವ(ಮೋಕ್ಷ)ದ ಮಾರ್ಗವು ದೊರೆಯುವುದೇ ಇಲ್ಲ. ಒಳ್ಳೆಯವರ ನಡತೆಯನ್ನು ಅನುಸರಿಸುವಂತೆ ವಿವೇಕವು ನಿಮ್ಮನ್ನು ಪ್ರೇರೇಪಿಸಿ ನೀತಿವಂತರ ಹಾದಿಗಳನ್ನು ಹಿಡಿಯುವ ಹಾಗೆ ಮಾಡುವುದು.

ಧನವು ಹೇಗೋ ಹಾಗೆ ಜ್ಞಾನವೂ ಆಶ್ರಯ; ಜ್ಞಾನಕ್ಕೆ ವಿಶೇಷವೆಂದರೆ ತನ್ನನ್ನು ಹೊಂದುವವರಿಗೆ ಅದು ಜೀವ(ಮೋಕ್ಷ)ದಾಯಕವೆಂಬದೇ. ಜ್ಞಾನವನ್ನು ಪಡೆ, ವಿವೇಕವನ್ನು ಸಂಪಾದಿಸು, ಜ್ಞಾನವನ್ನು ಬಿಡದಿದ್ದರೆ ಅದು ನಿಮ್ಮನ್ನು ಕಾಪಾಡುವುದು, ಪ್ರೀತಿಸಿದರೆ, ನಿಮ್ಮನ್ನು ಕಾಯುವುದು. ನಿನ್ನ ಎಲ್ಲಾ ಸಂಪತ್ತಿನಿಂದಲೂ ವಿವೇಕವನ್ನು ಪಡೆ. ಜ್ಞಾನವೆಂಬಾಕೆಯು ಶ್ರೇಷ್ಠಳು ಎಂದು ನೀವು ಭಾವಿಸಿದರೆ

ಆಕೆಯು ನಿಮ್ಮನ್ನು ಉನ್ನತಿಗೆ ತರುವಳು; ಆಕೆಯನ್ನು ಅಪ್ಪಿಕೊಂಡರೆ ನಿಮ್ಮನ್ನು ಘನಪಡಿಸುವಳು. ಆಕೆಯು ನಿಮ್ಮ ತಲೆಗೆ ಅಂದದ ಪುಷ್ಪಮಾಲೆಯನ್ನಿಟ್ಟು ಸುಂದರ ಕಿರೀಟವನ್ನು ನಿಮಗೆ ಒಪ್ಪಿಸುವಳು. ಹೊನ್ನು ಉಂಟು, ಹವಳದ ರಾಶಿ ಉಂಟು, ಆದರೆ ಜ್ಞಾನದ ತುಟಿಗಳೇ ಅಮೂಲ್ಯಾಭರಣ. ಜ್ಞಾನಿಯಾದ ಒಬ್ಬ ಭಕ್ತನು ಹೀಗೆ ಹೇಳಿದ್ದಾನೆ– 'ದೇವರೇ, ನಿನ್ನ ಪವಿತ್ರ ಸತ್ಯವೇದವು ನನಗೆ ಎಷ್ಟೋ ಪ್ರಿಯವಾಗಿದೆ; ದಿನವೆಲ್ಲಾ ಅದೇ ನನ್ನ ಧ್ಯಾನ. ನಿನ್ನ ಆಜ್ಞೆಗಳ ಮೂಲಕ ನನ್ನ ವೈರಿಗಳಿಗಿಂತ ಬುದ್ಧಿವಂತನಾಗಿದ್ದೇನೆ. ನಿನ್ನ ಕಟ್ಟಳೆಗಳು ನನ್ನ ಧ್ಯಾನವಾಗಿರುವುದರಿಂದ ನನ್ನ ಉಪಾಧ್ಯಾಯರಿಗಿಂತ ಜ್ಞಾನಿಯಾಗಿದ್ದೇನೆ. ನಿನ್ನ ನಿಯಮಗಳನ್ನು ಕೈಗೊಂಡಿರುವುದರಿಂದ ಹಿರಿಯರಿಗಿಂತ ವಿವೇಕಿಯಾಗಿದ್ದೇನೆ.'

(ಕೀರ್ತನೆಗಳು 119:97–100)

## ಆವಿಷ್ಕಾರಗಳು

ಮನುಕುಲದ ಹಸಿವು/ಬಡತನ ನೀಗಿಸಲು, ರೋಗ–ರುಜಿನ ವಾಸಿ ಮಾಡಿ ಆಯಸ್ಸು ವೃದ್ಧಿಸಲು, ಭದ್ರತೆ/ಪ್ರಯಾಣ/ಸಂವಹನ ಇತ್ಯಾದಿಗಳಿಂದ ಬದುಕನ್ನು ಹಸನುಗೊಳಿಸಲು ಅಗತ್ಯವಾದ ಸಾವಿರಾರು ಆವಿಷ್ಕಾರಗಳನ್ನು ಕಂಡುಹಿಡಿದಿರುವ ಪ್ರಾತಃಸ್ಮರಣೀಯರು ದೇವರಿಗೆ ಭಯಪಡುವವರೂ ಹಾಗೂ ಇದೇ ಪವಿತ್ರ ಸತ್ಯವೇದವನ್ನು ಧ್ಯಾನಿಸಿ ಅದನ್ನು ಅನುಸರಿಸುವವರೇ ಆಗಿರುತ್ತಾರೆ. ಅವರು ಕಂಡುಹಿಡಿದ ಮುಖ್ಯವಾದ ಕೆಲವು ಆವಿಷ್ಕಾರಗಳು ಕೆಳಗಿನಂತಿವೆ.

| Sl.No. | Inventions | Inventor | Country | Year |
|---|---|---|---|---|
| 1 | Adding Machine, | Blaise Pascal | France | 1642 |
| 2 | Addressograph, | J.S. Duncan | U.S | 1893 |
| 3 | Airship (non-rigid), | Henri Giffard | France | 1852 |
| 4 | Airplane | Orville Wright | U.S | 1903 |
| | | and Wilbur Wright | U.S | |
| | | Kitty Hawk | North Carolina. | |
| 5 | Airship (rigid), | Graf Ferdinand von | | |
| | | Zeppelin | Germany | 1900 |
| 6 | Antiseptic | Dr. Joseph Lister | England | 1867 |
| 7 | Arc Lamp | C.F. Brush | U.S | 1879 |
| 8 | Argon | Sir William Ramsay | | |
| | | and Baron Ray Leigh | . Great Britain | 1894 |



| Sl.No. | Inventions | Inventor | Country | Year |
|---|---|---|---|---|
| 9 | Aspirin | Dr. Felix Hoffman, | Germany | 1899 |
| 10 | Atom Bomb | Julius Robert | | |
| | | Oppenheimer | U.S | 1945 |
| 11 | Autogiro | Juan de la Cierva | Spain | 1923 |
| 12 | Automobile (steam) | Nicolas Cugnot | France | 1769 |
| 13 | Automobile | | | |
| | (gasoline) | Karl Benz | Germany | 1855 |
| 14 | Bakelite | Lwo H. Backcland | Belgium/U.S | 1907 |
| 15 | Balloon | Jacques Montgolfier | | |
| | | Joseph Montgolfier | France | 1783 |
| 16 | Ballpoint Pen | John J. Loud | U.S | 1888 |

https://data-flair.training/blogs/important-inventions-and-discoveries/

ಮೇಲ್ಕಂಡ ಅನ್ವೇಷಕರಲ್ಲಿ ಅನೇಕರು ಇಸ್ರೇಲ್ ದೇಶದವರು ಅಂದರೆ ಯಹೂದಿಗಳು; ಇವರು ದೇವರು ಆದುಕೊಂಡ ಜನಾಂಗವಾಗಿದ್ದು ಯೇಸು ಕ್ರಿಸ್ತರು ಸಹ ಯಹೂದಿ ಜನಾಂಗದಲ್ಲಿ ಜನಿಸಿದವರು. ಯಹೂದಿಗಳಿಗೆ ದೇವರು ವಿಶೇಷವಾದ ಜ್ಞಾನವನ್ನು ದಯಪಾಲಿಸಿರುತ್ತಾರೆ. ಈ ಜನಾಂಗ ವಿಶ್ವದ ಜನಸಂಖ್ಯೆಯಲ್ಲಿ ಶೇ. 0.19 ಇದ್ದರೂ ಸಹ ಜಗತ್ತಿನಲ್ಲಿ ಅತೀ ಹೆಚ್ಚು ಅನ್ವೇಷಣೆ ಮತ್ತು ಆವಿಷ್ಕಾರಗಳು ನಡೆಯುವುದು ಇಸ್ರೇಲ್‌ನಲ್ಲಿಯೆ. ಇವರು ಈವರೆಗೆ ಒಟ್ಟು 41 % ಅಂದರೆ 213 ನೋಬೆಲ್ ಪುರಸ್ಕಾರಗಳನ್ನು ತಮ್ಮದಾಗಿಸಿಕೊಂಡಿದ್ದಾರೆ.

ಆದ್ದರಿಂದ ನಿಮ್ಮಲ್ಲಿ ಯಾರಿಗಾದರೂ ಜ್ಞಾನ ಕಡಿಮೆಯಾಗಿದ್ದರೆ ಅವರು ದೇವರನ್ನು ಕೇಳಿಕೊಳ್ಳಲಿ, ಅದು ಅವರಿಗೆ ಸಿಕ್ಕುವುದು; ದೇವರು ಹಂಗಿಸದೆ ಎಲ್ಲರಿಗೂ ಉದಾರ ಮನಸ್ಸಿನಿಂದ ಕೊಡುವವನಾಗಿದ್ದಾನೆ. ಸ್ವಲ್ಪವೂ ಸಂದೇಹಪಡದೆ ನಂಬಿಕೆಯಿಟ್ಟು ಕೇಳಿಕೊಳ್ಳಬೇಕು. ಸಂದೇಹಪಡುವವನೋ ಗಾಳಿಯಿಂದ ಬಡಿಯಲ್ಪಟ್ಟ ಸಮುದ್ರದ ತೆರೆಯಂತೆ ಅಲೆಯುತ್ತಿರುವನು. ಆ ಮನುಷ್ಯನು ದೇವರಿಂದ ಏನಾದರೂ ಹೊಂದುವೆನೆಂದು ಭಾವಿಸದೇ ಇರಲಿ.

**ದೇವರು ತಮ್ಮನ್ನು ಕರುಣಿಸಿ ತನ್ನ ಸಕಲ ಜ್ಞಾನದಿಂದ ತುಂಬಿಸಲಿ ಹಾಗೂ ತಮಗೂ ಮೋಕ್ಷ ಪ್ರಾಪ್ತಿಯಾಗಲೆಂದು ಹರಸಿ ಪ್ರಾರ್ಥಿಸುತ್ತೇನೆ.**